
ಸಂಪುಟ 22 ಸಂಚಿಕೆ 7
ಫೆಬ್ರವರಿ 13, 2000 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಪೆಕ್ಸ್ಯಾರಂಗ



ದಾವೊಸ್‌ನಲ್ಲಿ ಕೃಷ್ಣರ ಕಾರು-ಬಾರು

12ಸಾವಿರ ಕೋಟಿ ಸಾಲದ ಗುಲಾಮರು



ಮಠಗಳ ಅಂತರಂಗ ಬಹಿರಂಗ



'ವಾಟರ್' ಸಂಘ ಪರಿವಾರದ ಧಾಳಿ

12,000 ಕೋಟಿ ಸಾಲಕ್ಕೆ ಗುಲಾಮನಾದ ಸರ್ಕಾರ

ಕರ್ನಾಟಕಕ್ಕೆ 12,000 ಕೋಟಿ ರೂ.ಗಳನ್ನು ಸಾಲವಾಗಿ ವಿಶ್ವಬ್ಯಾಂಕ್ ನೀಡಲು ಒಪ್ಪಿರುವುದನ್ನು ತಮ್ಮ ಸಾಧನೆಯೆಂಬಂತೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಬೀಗುತ್ತಿದ್ದಾರೆ. ಈ ದಾವೂಸ್‌ನಿಂದ ಧರೆಗಿಳಿದ ಕೃಷ್ಣರವರು ಮರುಕ್ಷಣದಲ್ಲೇ ವಿಶ್ವಬ್ಯಾಂಕ್‌ನ ಭಾರತದ ಪ್ರತಿನಿಧಿ ಡಾ|| ಎಡ್ವಿನ್ ಲೀಮ್ ರವರಿಗೆ ಈ ಒಪ್ಪಂದಕ್ಕೆ ಬಂದಿರುವುದು ಮಹತ್ವದ ವಿಷಯವಾಗಿದೆ. ಎಷ್ಟನ್ನು ಯಾವುದಕ್ಕೆ ಬಳಸಗಾವುದು ಎಂದಿದ್ದರೂ, ಎಷ್ಟೆಷ್ಟು ಯಾರ ಜೇಬಿಗೆ ಸರಿಯಲಿದೆ ಎಂಬುದು ಕಾದು ನೋಡಬೇಕು. ಕೆಲಸ ಮತ್ತು ಕಂಟ್ರಾಕ್ಟ್ ಅಂತರ್‍ರಾಷ್ಟ್ರೀಯ ಗುಣಮಟ್ಟದಲ್ಲಿರುತ್ತದೆ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾದರೆ.


ಈ ಸಾಲವನ್ನು ವ್ಯಾಪಾರಿ ದೃಷ್ಟಿಯಲ್ಲಿ ನೋಡಬಾರದೆಂದೂ, ಬಡತನ ನಿರ್ಮೂಲನವನ್ನೇ ಲಕ್ಷ್ಯದಲ್ಲಿರಸಬೇಕೆಂದಿ ವಿಶ್ವಬ್ಯಾಂಕ್‌ನ ಪ್ರತಿನಿಧಿ ಉಪದೇಶಿಸಿರುವುದು ಒಂದು ಹಾಸ್ಯಾಸ್ಪದ. ಇದು ಪಿಶಾಚಿ ಬಾಯಲ್ಲಿ ಭಗವದ್ಗೀತೆ ಎಂಬಂತಿದೆ. ಎಸ್.ಎಂ.ಕೃಷ್ಣರವರೂ ಸಹ ಈ ಸಾಲ ಪಡೆಯಲು ಯಾವುದೇ ಶರತ್ತುಗಳಿಲ್ಲವೆಂದು ಒಂದು ಕಡೆ ಹೇಳುತ್ತಲೇ ರಾಜ್ಯದ ತೆರಿಗೆಗಳನ್ನು ಮತ್ತು ಆರ್ಥಿಕ ನೀತಿಯನ್ನು ಮತ್ತೆ ಮತ್ತೆ ಪರಿಷ್ಕರಿಸಬೇಕಾಗುತ್ತದೆ ಎಂದಿದ್ದಾರೆ. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆಡಳಿತ ವೈಖರಿ, ಕ್ರಮಗಳನ್ನು ನೋಡಿಯೇ ವಿಶ್ವಬ್ಯಾಂಕ್‌ನವರು ಸಾಲ ನೀಡಿದ್ದಾರೆ ಎಂದು ಸ್ವಪ್ರಶಂಸನೀಯ ಮಾತುಗಳನ್ನು ಆಡಿದ್ದಾರೆ. ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡಿದ್ದಾರೆ.

ಸಂಪಾದಕೀಯ

ವಿಶ್ವಬ್ಯಾಂಕ್ ಮತ್ತು ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ವ್ಯವಹಾರಗಳ ಮತ್ತು ಅಭಿವೃಧಿಶೀಲ ಮತ್ತು ಮೂರನೇ ಜಗತ್ತಿನ ರಾಷ್ಟ್ರಗಳ ಬಗೆಗಿನ ದರ ಕುಖ್ಯಾತ ಪಾತ್ರಗಳ ಅರಿವಿರುವ, ಶರತ್ತುಗಳಿಲ್ಲದೇ ಸಾಲ ನೀಡಲಾಗಿದೆಯೆಂಬುದನ್ನು ಮತ್ತು ಅವರ ಲಕ್ಷ್ಯ ಅಭಿವೃದ್ಧಿ ಹಾಗೂ ಬಡತನ ನಿವಾರಣೆ ಮಾತ್ರ ಎಂದು ನಂಬಲು ಸಾಧ್ಯವೇ ಇಲ್ಲ. 12 ಸಾವಿರ ಕೋಟಿ ಮೊತ್ತದ ಸಾಲ ಸಿಗಲು ಒಂದಲ್ಲ, ಎರಡಲ್ಲ ನೂರಾರು ಅಘೋಷಿತ ಅಮಾನವೀಯ ಶರತ್ತುಗಳಿಗೆ ಕೃಷ್ಣರವರ ಸರ್ಕಾರ ಒಪ್ಪಿಗೆ ನೀಡಿದೆ ಎಂಬುದಕ್ಕೆ ಹಲವಾರು ಪುರಾವೆಗಳಿವೆ. ಇನ್ನೇನು, ಕಾಲಾನುಗತಿಯಲ್ಲಿ ಬಯಲುಗೊಳ್ಳಲಿವೆ. ಈಗಾಗಲೇ ಎಲ್ಲವನ್ನು ಖಾಸಗೀಕರಿಸಲು ಕ್ರಮ ವಹಿಸಲಾಗುತ್ತಿದೆ. ನೀರು, ವಿದ್ಯುತ್, ಶಿಕ್ಷಣ, ನಾಗರೀಕ ಸೌಲಭ್ಯಗಳು, ರಸ್ತೆ, ಹೀಗೆಯೇ ಕೈಗಾರಿಕೆಗಳು, ನೀರಾವರಿ ಮುಂತಾಗಿ ಖಾಸಗೀಕರಿಸಲು ಕ್ರಮವಹಿಸಲಾಗಿದೆ. ಪ್ರತಿಯೊಂದರ ಬೆಲೆಗಳನ್ನು ಹೆಚ್ಚಿಸತೊಡಗಿದ್ದಾರೆ. ಇನ್ನು ಹೆಚ್ಚಿಸಲಿದ್ದಾರೆ. ವಿಶ್ವಬ್ಯಾಂಕ್‌ನ ಗೆಳೆತನದ ಈ ಅಭಿವೃದ್ಧಿಯು ಸೃಷ್ಟಿಸುವುದು ಕೇವಲ ಕ್ಷಾಮ-ಡಾಮರ, ಬಡತನದ ಭೀಕರತೆಗಳನ್ನು, ಹಸಿವು ಹಾಹಾಕಾರಗಳನ್ನು ಎಂಬುದಕ್ಕೆ ರುವಾಂಡ, ಮೆಕ್ಸಿಕೋ, ಫಿಲಿಫೈನ್ಸ್.... ನಂತಹ ನೂರಾರು ದೇಶಗಳ ಉದಾಹರಣೆ ಸಾಲದೇ?

ಈ ಹನ್ನೆರೆಡು ಸಾವಿರ ಕೋಟಿ ರೂಪಾಯಿಗಳ ಸಾಲವನ್ನು 20 ವರ್ಷಗಳಲ್ಲಿ ಮರುಪಾವತಿ ಮಾಡಬೇಕೆಂದೂ, 5 ವರ್ಷಗಳ ನಂತರವೇ ಸಾಲ ಮರುಪಾವತಿ ಆರಂಭಗೊಳ್ಳುವುದೆಂದೂ ಹೇಳಿದ್ದಾರೆ. ನಮ್ಮ ಅಭಿವೃದ್ಧಿಗೆ ನಮ್ಮದೇ ಆದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಏನೊಂದೂಸ ಕ್ರಮವಹಿಸದೇ, ಕೇವಲ ವಿದೇಶಿ ಹಣಕಾಸಿನ ಮೇಲೆ ಅವಲಂಬಿಸಿ, ಅವಮಾನಕರ ಶರತ್ತುಗಳಿಗೆ ಶರಣಾಗಿ, ಸಾಲ ತಂದು 'ಅಭಿವೃದ್ಧಿ' ಸಾಧಿಸುವ ವಂಚನೆಯ ಮಾತುಗಳನ್ನಾಡುವುದು ಜನತೆಗೆ ಬಗೆದ ದ್ರೋಹ. ಈ ಸಾಲದ ಹೊರೆಯನ್ನು ಹೊರುವುದು ಇಂದಿನ ರಾಜ್ಯದ ಜನತೆ ಮಾತ್ರವಲ್ಲ ಮುಂದಿನ ತಲೆಮಾರುಗಳ ಪೀಳಿಗೆ. ಅವರ ಹೆಗಲಿಗೆ ಈ ಭಾರ ಹೊರಿಸಲಾಗಿದೆ. ಆದರೆ ಸಾಲ ತಂದು, ಹಾನೋಗರ ಉಣ್ಣುವ ಈ ಜನ ಸುಲಭವಾಗಿ ನುಣಿಚಿಕೊಳ್ಳಬಹುದು. ಆದರೆ ರಾಜ್ಯದ ಸಾಮಾನ್ಯರು ಗುಲಾಮರಂತೆ ಅನುಭವಿಸಬೇಕು. ಸಾಲ ತೀರಿಸಲು ಹೆಣಗಬೇಕು.

ಅತ್ಯಧಿಕ ಅಪಾಯಕಾರಿಯಾದ, ಧೀರ್ಘ ವಿನಾಶಕಾರಿ ಪರಿಣಾಮ ಬೀರುವ, ಶ್ರೀಮಂತರನ್ನು, ವಿದೇಶಿ ಬಂಡವಾಳಗಾರರನ್ನು ಕೊಬ್ಬಿ ಬೆಳೆಸುವ ಇಂತಹ ಸಾಲವನ್ನು ತರಲು ಹಿಂದಿನ ಕಾಂಗ್ರೆಸ್, ದಳದ ಸರ್ಕಾರಗಳು ಅಷ್ಟಾಗಿ ಧೈರ್ಯ ಮಾಡಿರಲಿಲ್ಲ. ಜನರ ಪ್ರತಿರೋಧಕ್ಕೆ ಇನಿತಾದರೂ ಹೆದರಿದ್ದವು. ಆದರೆ ಕೃಷ್ಣರ ಕಾಂಗ್ರೆಸ್ ಸರ್ಕಾರ ಇವುಗಳಾವುದನ್ನು ಲೆಕ್ಕಿಸಿಲ್ಲ. ಬಡಜನರ ಓಡು ಪಡೆದು ಅಧಿಕಾರಕ್ಕೆ ಏರಿದ ಮರುಕ್ಷಣವೇ ಅವರೆಲ್ಲರ ನಿರೀಕ್ಷೆಗಳಿಗೆ ಕಲ್ಲು ಚಪ್ಪಡಿ ಎಳೆಯಲಾಗಿದೆ. ಇಂತಹ ಕೆಲಸಗಳಿಗೆ ಆಂಧ್ರದ ನಾಯ್ಡು ಮಾದರಿಯನ್ನು ಅನುಸರಿಸುವುದು ಮತ್ತು ಅವರೊಂದಿಗೆ ಸಾಲವೆತ್ತಿ ಗುಲಾಮನಾಗಿ ಸಲಾಮು ಹೊಡೆಯಲು ಸ್ಪರ್ಧಿಸುತ್ತಿರುವುದು ನಾಡಿನ ಜನತೆಗೆ ಮಾಡಿದ ಅವಮಾನ, ಜನದ್ರೋಹ. ಇವುಗಳಿಗೆ ಕಡಿವಾಣ ಹಾಕಲೇಬೇಕು.



ಜನತೆಯ ಉಪವಾಸಕ್ಕೆ ನಾಂದಿ ಉದಾರೀಕರಣ/ಜಾಗತೀಕರಣ

ಉದಾರೀಕರಣ ಮತ್ತು ಜಾಗತೀಕರಣ ದೇಶದ ಜನತೆಗೆ ಐಶ್ವರ್ಯ ತಂದುಕೊಡುತ್ತದೆ. ಎಂದೇ ಉದಾರೀಕರಣವಾದಿಗಳು ಹೇಳುತ್ತಾರೆ. ಈಗಿರುವ ಸರ್ಕಾರೀ ಸ್ವಾಮ್ಯದ ಉದ್ದಿಮೆಗಳು ಖಾಸಗೀಕರಣಗೊಂಡು ಕಂಪನಿಗಳ ವ್ಯವಹಾರವೇ ಮೇಲುಗೈಯಾದರೆ ಕಂಪನಿಗಳು ಲಾಭಕ್ಕಾಗಿ ಕೆಲಸ ಮಾಡುವುದರಿಂದ ಈ ಲಾಭಕ್ಕಾಗಿ ಅವರು ಹಲವರಿಗೆ ಉದ್ಯೋಗಗಳನ್ನು ನೀಡುವಂತಾಗಿ ದೇಶದ ಜನರ ಬಡತನ ಅಳಿದು ಹೋಗುತ್ತದೆ. ಎಂಬುದೇ ಇವರ ವಾದ. ಅವಶ್ಯವಾದ ಉತ್ಪಾದನೆ ಹೆಚ್ಚಿ ಅನವಶ್ಯಕ ಉತ್ಪಾದನೆ ನಿಂತುಹೋಗುವ ಮಾರುಕಟ್ಟೆ ಪದ್ದತಿಯಿಂದ ಎಲ್ಲರಿಗೂ ಲಾಭ ಎಂಬವಾದ ಅವರದು.

ವಾಜಪೇಯಿ ನೇತೃತ್ವದ ಬಿಜೆಪಿ ಮುಂದಾಳತ್ವದ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ದೇಶದ ಜಾಗತೀಕರಣದ ಕ್ರಮಗಳನ್ನು ಇನ್ನಿಲ್ಲದ ತರಾತುರಿಯಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಈ ಸರ್ಕಾರ ಸಾಮ್ರಾಜ್ಯಶಾಹಿಗಳ ಮಂತ್ರವನ್ನು ಹೇಳುತ್ತದೆ. ಅದೇ ರೀತಿ ದೇಶವನ್ನೇ ಒತ್ತೆ ಇಡುವ ತೆರದಲ್ಲಿ ಕೆಲಸ ಮಾಡುತ್ತಿದೆ. ಈ ಕ್ರಮಗಳಿಂದ ನಿಜಕ್ಕೂ ದೇಶದ ಜನತೆಗೆ ಲಾಭವಾಗಿದೆಯೇ ಎಂಬುದು ಪ್ರಶ್ನೆ.

ನಮ್ಮ ದೇಶದಲ್ಲಿ 1991-92ರಿಂದಲೇ ದೊಡ್ಡ ಪ್ರಮಾಣದ ಉದಾರೀಕರಣ ಜಾಗತೀಕರಣ ಪ್ರಾರಂಭವಾಯಿತು. ಹತ್ತಿರ ಹತ್ತಿರ ಹತ್ತು ವರ್ಷಗಳ ಉದಾರೀಕರಣದ ಪರಿಣಾಮ ಏನು? ಉತ್ಪಾದನೆ ಹೆಚ್ಚಿದೆಯೇ? ಉದ್ಯೋಗಾವಕಾಶಗಳು ಹೆಚ್ಚಿ ಬಡತನ ಕಡಿಮೆ ಆಗಿದೆಯೆ ಮತ್ತು ಒಟ್ಟಾರೆ ಅಭಿವೃದ್ಧಿಯತ್ತ ದೇಶ ಸಾಗುತ್ತಿದೆಯೇ?

ಕೃಷಿ ದೇಶದ ಬೆನ್ನೆಲುಬು ಎಂಬುದು ಬಹಳ ಹಿಂದಿನಿಂದಲೂ ಒಪ್ಪಿಕೊಂಡು ಬಂದ ಮಾತು. ಕೃಷಿಯಿಂದಲೇ ನಮ್ಮ ಮೂಲಭೂತ ಅವಶ್ಯಕತೆಗಳಾದ ಬಟ್ಟೆಗಳು ಬರುವುದು. ಆದ್ದರಿಂದಲೇ ಕೃಷಿಯ ಅಭಿವೃದ್ಧಿ ಬಹಳ ಮುಖ್ಯ. ಇದು ನಮಗೆ ಆಹಾರ ಸುಭದ್ರತೆ ನೀಡುವ ಮೂಲಕ ಸ್ವಾವಲಂಬನೆ ನೀಡುತ್ತದೆ. ಕೃಷಿಯಲ್ಲಿ ಹಿಂದುಳಿದರೆ ನಮ್ಮ ಸ್ವಾವಲಂಬನೆ ಸಾಧನೆಯಾಗದು.

ಉದಾರೀಕರಣದಿಂದ ನಮ್ಮ ಆಹಾರ ದಾನ್ಯಗಳ ಉತ್ಪಾದನೆ ಏನಾಗಿದೆ ಎಂಬುದನ್ನು ವಿಶ್ಲೇಷಿಸಿದರೆ ಉದಾರೀಕರಣ/ ಜಾಗತೀಕರಣ ದೇಶದ ಜನ ಸಾಮಾನ್ಯರಿಗೆ ಏನು ಮಾಡಿದೆ ಮತ್ತು ಏನು ಮಾಡಬಹುದು ಎಂಬುದರ ಸ್ಪಷ್ಟ ಅರಿವು ಬರಲು ಸಾಧ್ಯ.

ಕೋಷ್ಟಕ -2

ಸಾಲು	ಆಹಾರಧಾನ್ಯಗಳ ಉತ್ಪಾದನೆ (ದಶಲಕ್ಷಟನ್ನುಗಳಲ್ಲಿ)	ಬಿತ್ತನೆಯಾದ ಪ್ರದೇಶ (ದಶಲಕ್ಷ ಹೆಕ್ಟೇರು)
1991-92	168.38	121.87
1992-93	179.48	123.15
1993-94	184.26	122.75
1994-95	191.50	123.86
1995-96	180.42	121.01
1996-97	199.44	123.58
1997-98	192.43	124.07
1998-99	202.54	125.75

ಉದಾರೀಕರಣ ಬಂದ ಮೇಲೂ ಕೃಷಿ ಉತ್ಪಾದನೆಯ ಹೆಚ್ಚು ಭಾಗ ಮಳೆಯ ಮೇಲೇ ಅವಲಂಬಿತವಾಗಿದೆ. ಎಂದರೆ ಕೃಷಿಗೆ ಪೂರಕವಾದ ಅಂತರ್‍ರಚನೆ ಸೌಲಭ್ಯಗಳಲ್ಲಿ ಹೆಚ್ಚಳ ಆಗಿಲ್ಲ ಎಂದರ್ಥ. ಆದ್ದರಿಂದಲೇ ದೇಶದ ಒಟ್ಟು ಬಿತ್ತನೆ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಇರುವ ಪ್ರದೇಶ ಬರೀ ಶೇ. 38 ರಷ್ಟರಲ್ಲೇ ಉಳಿದು ಹೋಗಿದೆ. ಹೀಗಿರುವಾಗ ಉತ್ಪಾದನೆ ಅಥವಾ ಉತ್ಪಾದಕತೆ ಹೆಚ್ಚಾಗಲು ಹೇಗೆ ಸಾಧ್ಯ?

ತೊಂಬತ್ತರ ದಶಕದಲ್ಲಿ ಆಹಾರಧಾನ್ಯಗಳ ಉತ್ಪಾದನೆ ಎಂಬತ್ತರ ದಶಕಕ್ಕೆ ಹೋಲಿಸಿದರೆ ಕೆಳಮಟ್ಟದಲ್ಲೇ ಉಳಿದಿದೆ. ಅಂಕಿ ಸಂಖ್ಯೆಗಳನ್ನು ತೆಗೆದುಕೊಳ್ಳುವುದಾದರೆ ಉದಾರೀಕರಣ ದೊಡ್ಡ ಪ್ರಮಾಣದಲ್ಲಿ ಆಗದ ಎಂಬತ್ತರ ದಶಕದಲ್ಲಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿ 52 ದಶಲಕ್ಷ ಟನ್ನುಗಳಷ್ಟು ಹೆಚ್ಚಳ ಆಗಿದ್ದರೆಉದಾರೀಕರಣದ ತೊಂಬತ್ತರ ದಶಕದಲ್ಲಿ ಬರೀ 26 ದಶಲಕ್ಷ ಟನ್ನುಗಳಷ್ಟರ ಹೆಚ್ಚಳ ಆಗಿದೆ, ತೊಂಬತ್ತರ ಉದಾರೀಕರಣದ ದಶಕದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯ ಹೆಚ್ಚಳದ ದರ ಕಡಿಮೆ ಆಗಲು ಕಾರಣವೇನು? ಎರಡು ಮುಖ್ಯ ಕಾರಣಗಳು ಕಾಣುತ್ತವೆ. ಆಹಾರಧಾನ್ಯ ಬೆಳೆವ ಪ್ರದೇಶದಲ್ಲಿ ಹೆಚ್ಚಳ ಆಗಿಲ್ಲ. ಎರಡನೇಯದಾಗಿ ಇಳುವರಿ ಪ್ರಮಾಣದಲ್ಲಿ ಕಡಿಮೆ ಆಗಿದೆ. ಆಹಾರ ಧಾನ್ಯಗಳ ಜಾಗದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆವ ಹವಣಿಕೆ ಹೆಚ್ಚಾಗುವುದರಿಂದಲೂ ಇಂತಹ ಪರಿಣಾಮ ಉಂಟಾಗಿದೆ.

ಜಿ.ಎಸ್.ಮಣಿ

ಆಹಾರ ಧಾನ್ಯಗಳ ಇಳುವರಿ ದರ ಮತ್ತು ಎಂಬತ್ತರ ದಶಕ ದಲ್ಲಿ ವರ್ಷಕ್ಕೆ ಶೇ. 3.1 ರಷ್ಟಿದ್ದದ್ದು ತೊಂಬತ್ತರ ದಶಕದಲ್ಲಿ ಶೇ. 2ಕ್ಕೂ ಕೆಳಗಿಳಿದಿದೆ. ಬಹುಮುಖ್ಯ ಆಹಾರ ಬೆಳೆಗಳಾದ ಬತ್ತ ಮತ್ತು ಗೋಧಿಗಳ ಇಳುವರಿ ದರಗಳು ಹೆಚ್ಚಿನ ಹೊಡೆತಕ್ಕೆ ಒಳಗಾಗಿವೆ. ಬತ್ತದ ಇಳುವರಿ ಬೆಳವಣಿಗೆಯ ದರ ಎಂಬತ್ತರ ದಶಕದಲ್ಲಿ ಶೇ 3 ರಷ್ಟಿದ್ದದ್ದು ತೊಂಬತ್ತರ ದಶಕದಲ್ಲಿ ಶೇ. 1.1ಕ್ಕೆ ಇಳಿದಿದೆ. ಗೋದಿಯನ್ನು ತೆಗೆದುಕೊಂಡರೆ ಈ ದರ ಶೇ. 3 ರಿಂದ ಶೇ. 1.6 ಕ್ಕೆ ಇಳಿದಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಉದಾರೀಕರಣದ ಪ್ರಕ್ರಿಯೆ ತೀವ್ರವಾದ 90ರ ದಶಕದಲ್ಲಿ ಕೃಷಿಯ ಬೆಳವಣಿಗೆ ಅದರಲ್ಲೂ ಆಹಾರಧಾನ್ಯಗಳ ಉತ್ಪಾದನೆ ಬೆಳವಣಿಗೆ ತೀವ್ರ ಹೊಡೆತ ಅನುಭವಿಸಿದೆ. ಅಧಿಕ ಇಳುವರಿ ತಳಿಗಳ ಪ್ರದೇಶವನ್ನು ಹೆಚ್ಚಿಸಿ ನೀರಾವರಿ ಪ್ರದೇಶವನ್ನೂ ಹೆಚ್ಚಿಸುವಲ್ಲಿ ವೈಫಲ್ಯ ಸ್ಪಷ್ಟವಾಗಿ ಕಾಣುತ್ತಿದೆ.

ಕೋಷ್ಟಕ -1

ದಿನವೊಂದಕ್ಕೆ ತಲಾ ಆಹಾರ ಧಾನ್ಯಗಳ ಲಭ್ಯತೆ (ಗ್ರಾಂಗಳಲ್ಲಿ)

ಇಸವಿ	ಅಕ್ಕಿ	ಗೋಧಿ	ಇತರೆ ಏಕದಳ ಧಾನ್ಯಗಳು	ಒಟ್ಟು ಏಕದಳ ಧಾನ್ಯಗಳು	ದ್ವಿದಳ ಧಾನ್ಯಗಳು	ಒಟ್ಟು ಆಹಾರ ಧಾನ್ಯಗಳು
1990	212.10	132.60	86.8	431.50	41.1	472.6
1991	221.70	166.80	80.00	468.50	41.6	510
1992	217.0	158.60	58.90	434.50	34.3	468.80
1993	201.10	140.20	86.60	427.90	36.20	464.10
1994	207.40	159.50	67.10	434.0	37.20	471.20
1995	232.10	172.0	65.50	469.60	38.10	507.70
1996	212.10	178.10	62.70	452.90	32.90	485.80
1997	221.10	178.10	74.50	473.70	38.40	512.10
1998	216.40	168.20	66.30	450.90	33.20	484.0

ತಲಾ ಲಭ್ಯತೆ ಎಂದರೆ ಇಷ್ಟನ್ನು ಪ್ರತಿಯೊಬ್ಬರು ಬಳಸುತ್ತಾರೆಂದಲ್ಲ ಯಾಕೆಂದರೆ ಕೊಳ್ಳುವ ಸಾಮರ್ಥ್ಯವೇ ಇಲ್ಲದಾತ ಇಷ್ಟನ್ನು ಬಳಸುವ ಸಾಧ್ಯತೆಯಿಲ್ಲ.

ಉತ್ಪಾದನೆಯ ಬೆಳವಣಿಗೆ ಉಳಿಮುಖವಾಗಿರುವುದರಿಂದ ಆಹಾರ ಧಾನ್ಯಗಳ ತಲಾ ಲಭ್ಯತೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಹೆಚ್ಚಾಗಿಲ್ಲ.

ಮೂರನೇ ಜಗತ್ತಿನ ದೇಶಗಳು ತಮಗೆ ಬೇಕಾದ ಕಚ್ಚಾ ಮಾಲುಗಳನ್ನು ಪೂರೈಸುವ ಪ್ರದೇಶಗಳಾಗಬೇಕು ಎಂಬ ಹೇತುವನ್ನಿರಿಸಿಕೊಂಡು ಕೆಲಸ ಮಾಡುತ್ತಿರುವ ಸಾಮ್ರಾಜ್ಯಶಾಹಿಗಳ ಉದ್ದೇಶ ಈ ರೀತಿಯಲ್ಲಿ ಈಡೇರಿಕೆಯಾಗುತ್ತಿದೆ. ಇಲ್ಲಿ ಈ ಕಚ್ಚಾ ಮಾಲುಗಳಿಗೆ ಲಾಭದಾಯಕ ಬೆಲೆ ದೊರೆಯುವದಿಲ್ಲ ಬದಲಿಗೆ ಮಾರುಕಟ್ಟೆಗೆ ಇವುಗಳನ್ನು ನಮ್ಮ ರೈತರು ಮಾರಬೇಕಾಗುತ್ತದೆ.

ಔದ್ಯಮಿಕ ಕ್ಷೇತ್ರದಲ್ಲೂ ಬೆಳವಣಿಗೆ ಕುಂಟಿತವಾಗಿರುವುದರಿಂದ ಜನರ ಕೊಳ್ಳುವ ಶಕ್ತಿಗೆ ತೀವ್ರದಕ್ಕೆಯಾಗಿದ್ದು ಇರುವ ಆಹಾರ ಧಾನ್ಯಗಳನ್ನು ಕೊಳ್ಳುವ ಪರಿಸ್ಥಿತಿಯಲ್ಲಿ ಅವರಿಲ್ಲ.

ಆಹಾರ ಧಾನ್ಯಗಳ ವಿಷಯದಲ್ಲಿ ಸ್ವಾವಲಂಬನೆ ಇಲ್ಲದೇ ಇರುವುದರಿಂದ ಸಾಮ್ರಾಜ್ಯಶಾಹಿ ದೇಶಗಳು ನಮಗೆ ಆಹಾರ ಧಾನ್ಯಗಳ ಜೊತೆಗೆ ಅವರ ಆರ್ಥಿಕಾಸಕ್ತಿಗಳ ಷರತ್ತುಗಳನ್ನು ಹೇರಿ ಅವರು ಹೇಳಿದಂತೆ ನಾವು ನಡೆಯಬೇಕಾದ ಸ್ಥಿತಿಯನ್ನುಂಟು ಮಾಡುತ್ತಾರೆ. ಬಡವರು ಇನ್ನೂ ಹೆಚ್ಚು ಬಡವರಾಗುತ್ತ ಶ್ರೀಮಂತರು ಶ್ರೀಮಂತರಾಗುತ್ತಾ ಹೋಗುತ್ತಾರೆ. ನಮ್ಮ ದೇಶದ ಶ್ರೀಮಂತರೂ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಗಳನ್ನು ಕಾಯುವವರಾಗುತ್ತಾರೆ.

ಉದಾರೀಕರಣ, ಜಾಗತೀಕರಣ ಜನತೆಯ ಉಪವಾಸಕ್ಕೆ ನಾಂದಿಯಲ್ಲವೇ?

ಸಂವಿಧಾನದ ವಿಮರ್ಶೆ ಸಂವಿಧಾನ ನಾಶದ ಒಳಸಂಚು

ಜಿ.ಎನ್. ನಾಗರಾಜ್


ಕೊನೆಗೂ ಸಂವಿಧಾನದ ವಿಮರ್ಶೆಗೆಂದು ಸಮಿತಿಯನ್ನು ನೇಮಿಸುವ ನಿರ್ಧಾರವನ್ನು ಬಿಜೆಪಿ ಕೂಟದ ಸರ್ಕಾರ ಕೈಗೊಂಡು ಬಿಟ್ಟಿದೆ. ದೇಶದ ಎಲ್ಲಾ ವಿರೋಧ ಪಕ್ಷಗಳೂ, ಕೊನೆಗೆ ರಾಷ್ಟ್ರಪತಿಗಳೂ ವಿಮರ್ಶೆಯನ್ನು ವಿರೋಧಿಸಿದ್ದರ ಫಲವಾಗಿ ಅದರಲ್ಲಿಯೂ ಸಂಸದೀಯ ಪದ್ಧತಿಯನ್ನು ಅಂದರೆ ದೇಶದಲ್ಲಿ ಲೋಕಸಭೆಗೆ ಪರಮಾಧಿಕಾರ ಉಳಿದ ಎಲ್ಲರ ಅಧಿಕಾರವೂ ಅದಕ್ಕೆ ಅಧೀನ ಎನ್ನುವ ರಾಜ್ಯಗಳಲ್ಲಿ ವಿಧಾನಸಭೆಯದೇ ಅತ್ಯುಚ್ಚ ಅಧಿಕಾರ ಎನ್ನುವ ಪದ್ಧತಿಯನ್ನು - ಕಿತ್ತುಹಾಕಿ ಅಧ್ಯಕ್ಷನೆಂಬ ಒಬ್ಬ ವ್ಯಕ್ತಿಗೆ ಎಲ್ಲಾ ಅಧಿಕಾರವನ್ನೂ ಧಾರೆಯೆರೆಯುವ "ಅಧ್ಯಕ್ಷೀಯ ಮಾದರಿ" ಸರ್ಕಾರವನ್ನು ಸ್ಥಾಪಿಸುವ ದುರುದ್ದೇಶವನ್ನು ಪ್ರಕಟವಾಗಿ ಕೈಬಿಡಬೇಕಾಗಿ ಬಂದಿದೆ. ಕೇಂದ್ರ ಸಚಿವ ಸಂಪುಟ ಅಂಗೀಕರಿಸಿದ ನಿರ್ಣಯದಲ್ಲಿ ಸ್ಪಷ್ಟವಾಗಿ ಈ ಉಲ್ಲೇಖವನ್ನು ಮಾಡಲಾಗಿದೆ. ಇದು ಸಂಘಪರಿವಾರಕ್ಕೊಂದು ಮುಖಭಂಗ ಮತ್ತು ಹಿನ್ನಡೆ.

ರಾಷ್ಟ್ರಪತಿ ಕೆ.ಆರ್. ನಾರಾಯಣನ್‌ರವರು ಸಂವಿಧಾನದ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಧಾನಿ ವಾಜಪೇಯಿ ಮತ್ತು ಗೃಹಮಂತ್ರಿ ಅದ್ವಾನಿಯಂತಹ ಸಂವಿಧಾನ ವಿಮರ್ಶೆಯ ಪ್ರತಿಪಾದಕರ ಮುಂದೆಯೇ ಮಾಡಿದ ಘೋಷಣೆ (ಐಕ್ಯರಂಗದ ಹಿಂದಿನ ಸಂಚಿಕೆ ನೋಡಿ) ಇಡೀ ದೇಶದ ಜನಕ್ಕೆ ಬಿಜೆಪಿ ಕೂಟದ ದುರುದ್ದೇಶಗಳ ಬಗ್ಗೆ ನೀಡಿದ ಎಚ್ಚರಿಕೆಯಂತಿತ್ತು. ಆದರೆ ನಂತರವೂ ಬಿಜೆಪಿಕೂಟ ಭಾರತದ ಸಂವಿಧಾನವನ್ನು ತಮ್ಮ ದುಷ್ಟ ಉದ್ದೇಶಗಳ ಸಾಧನೆಗೆ ಅನುಗುಣವಾಗಿ ತಿರುಚುವ ತಮ್ಮ ಮಹತ್ವಾಕಾಂಕ್ಷೆಯನ್ನು ಕೈಬಿಡಲಿಲ್ಲ. ಅವರ ಬುದ್ಧಿವಾದವನ್ನೂ ಮೀರಿ ಸಂವಿಧಾನವನ್ನು ವಿಮರ್ಶಿಸುವ ನಿರ್ಧಾರವನ್ನು ಕೈಗೊಂಡಿದ್ದಾರೆ. ಆ ಮೂಲಕ ಸಂವಿಧಾನವನ್ನು ಪ್ರಜಾಪ್ರಭುತ್ವವನ್ನು ಉಲ್ಲಂಘಿಸಿದ್ದಾರೆ.

ಪ್ರಜಾಪ್ರಭುತ್ವದ ಉಲ್ಲಂಘನೆ.

ಸಂವಿಧಾನವನ್ನು ವಿಮರ್ಶಿಸಲು ಒಂದು ಸಮಿತಿಯನ್ನು ನೇಮಿಸಿದರೆ ಅದರಲ್ಲಿ ಪ್ರಜಾಪ್ರಭುತ್ವದ ಉಲ್ಲಂಘನೆಯೇನು ಬಂತು ಎನ್ನಿಸಬಹುದು. ಆದರೆ ಮೂಲಪ್ರಶ್ನೆ ಸಂವಿಧಾನವನ್ನು ರೂಪಿಸುವವರು ಯಾರು? ಅದಕ್ಕೆ ಅಧಿಕಾರಯಾರಿಗಿದೆ? ಅದರ ಮುಂದುವರಿಕೆಯಾಗಿ ಸಂವಿಧಾನದ ವಿಮರ್ಶೆಯನ್ನು ಮಾಡುವ ಹಕ್ಕು ಯಾರಿಗಿದೆ? ಅದಕ್ಕೆ ಬೇಕಾದ ಸಮಿತಿಯನ್ನು ನೇಮಿಸುವುದು ಯಾರು? ಈ ಪ್ರಶ್ನೆಗಳು ಎದುರಾಗುತ್ತವೆ. ಸಂವಿಧಾನವನ್ನು ರೂಪಿಸುವುದು ಜನತೆ ಹೀಗಾಗಿ ಸಂವಿಧಾನವನ್ನು ರೂಪಿಸಿದ ದೇಶಗಳಲ್ಲೆಲ್ಲಾ ಅದಕ್ಕಾಗಿಯೇ ಜನತೆ ಸಂವಿಧಾನಸಭೆಯನ್ನು ಆಯ್ಕೆ ಮಾಡುತ್ತದೆ. ನಂತರ ದೇಶದಲ್ಲಿ ವ್ಯಾಪಕವಾಗಿ ಚರ್ಚಿಸಿ ಸಂವಿಧಾನವನ್ನು ಅಂಗೀಕರಿಸುತ್ತಾರೆ. ಹಲವು ದೇಶಗಳಲ್ಲಿ ಅಂಗೀಕಾರಕ್ಕೂ ಕೂಡ ಜನಮತಗಣನೆ (ರೆಫರೆಂಡಮ್) ಮಾಡಿಯೇ ಅಂಗೀಕರಿಸಿರುವುದೂ ಉಂಟು. ಆದ್ದರಿಂದ ಸಂವಿಧಾನವನ್ನು ಪರಾಮರ್ಶೆಗೆ ಒಳಪಡಿಸುವ ಅದಿಕಾರವೂ ಜನತೆಯದೇ. ಅವರ ಪರವಾಗಿ ಪರಾಮರ್ಶೆಯನ್ನು ಮಾಡುವ ತೀರ್ಮಾನತೆಗೆದುಕೊಳ್ಳುವ ಹಕ್ಕು ಲೋಕಸಭೆಯದ್ದು ಮಾತ್ರ. ಇದು ಪ್ರಜಾಪ್ರಭುತ್ವದ ಮೂಲತಿರುಳು ಇಂತಹ ಪರಾಮರ್ಶೆಯನ್ನು ಮಾಡುವುದು ಯಾರು? ಆಳುವ ಪಕ್ಷವೊಂದು ತನ್ನ ಮೂಗಿನ ನೇರಕ್ಕೆ ತಮಗೆ ಬೇಕಾದವರನ್ನು ಆರಿಸಿ ಸಮಿತಿಮಾಡಿ ತಮ್ಮ ಮೂಗಿನ ನೇರಕ್ಕೆ ತಕ್ಕಂತೆ ವರದಿಯನ್ನು ತರಿಸಿಕೊಳ್ಳುವ ಕೆಲಸವೇ ಇದು. ಸಂವಿಧಾನವನ್ನು ಪರಾಮರ್ಶೆಗೊಳಪಡಿಸಬೇಕು ಎಂದು ತೀರ್ಮಾನಿಸುವ ಅಧಿಕಾರವಿರುವ ಲೋಕಸಭೆಯೇ ಸಮಿತಿಯನ್ನು ನೇಮಿಸುವ ಆ ಅಧಿಕಾರವುಳ್ಳದ್ದು. ಆದರೆ ಈಗ ಸಂವಿಧಾನಿಕ ಅಧಿಕಾರ ಪಡೆದ ಲೋಕಸಭೆಯನ್ನೂ ಮತ್ತೊಂದು ಸಂವಿಧಾನಿಕ ಅಧಿಕಾರವಾದ ರಾಷ್ಟ್ರಪತಿಗಳ ಎಚ್ಚರಿಕೆಯನ್ನೂ ಸರ್ಕಾರ ಉಲ್ಲಂಘಿಸಿದೆ.

ಪ್ರಜಾಪ್ರಭುತ್ವದ ಈ ಉಲ್ಲಂಘನೆ ಏಕೆ? ಏಕೆ ಈ ಉಲ್ಲಂಘನೆ? ಬಿಜೆಪಿಯ ದುರುದ್ದೇಶವನ್ನು ಹೇಗಾದರೂ ಮಾಡಿ ಸಾಧಿಸಿಕೊಳ್ಳುವುದು ಆರೆಸ್ಸೆಸ್ ಭಾರತದ ಸಂವಿಧಾನ ರೂಪುಗೊಂಡ ದಿನದಿಂದಲೂ ಅದರ ಮೂಲಭೂತ ಪ್ರಜಾಪ್ರಭುತ್ವ ಹಾಗೂ ಧರ್ಮ ನಿರಪೇಕ್ಷ (ಸೆಕ್ಯುಲರ್-ಜಾತ್ಯಾತೀತ) ರೂಪದ ಬಗ್ಗೆ ಅಸಹನೆ, ಕ್ರೋಧಗಳನ್ನು ಹಲವು ಬಾರಿವ್ಯಕ್ತಪಡಿಸಿದೆ. ವಿಶ್ವಹಿಂದು ಪರಿಷತ್ ಆಗಾಗ್ಗೆ ಕರೆಯುವ ಧರ್ಮ



ಸಂಸತ್ (ಈ ಹೆಸರನ್ನು ಗಮನಿಸಿ) ಎಂಬ ಮಠಾಧಿಪತಿಗಳ ಹಾಗೂ ನಿರುದ್ಯೋಗಿ, ಉಂಡಾಡಿ ಸ್ವಾಮಿಗಳ ಸಂತರ ಕೂಟ ಈ ಸಂವಿಧಾನವನ್ನು ಕಿತ್ತೆಸೆಯಿರಿ ಎಂದು ಹಲವು ಬಾರಿ ನಿರ್ಣಯಗಳನ್ನು ಮಾಡಿದೆ. ಇದು ಬಿಜೆಪಿ 1998ರ ಚುನಾವಣೆಗಳ ಸಂದರ್ಭದಲ್ಲಿ ಸ್ಪರ್ದಿಗಳು ಹಿಂತೆಗೆಯುವ ಅವಧಿಮುಗಿದ ಮೇಲೆ ಇನ್ನು ತನ್ನ ಜೊತೆ ಸೇರಿದ ಮಿತ್ರರು ಏನೂ ಮಾಡಲು ಸಾಧ್ಯವಿಲ್ಲ ಎಂದು ಖಾತರಿ ಮಾಡಿಕೊಂಡು ಬಿಡುಗಡೆ ಮಾಡಿದ ಚುನಾವಣಾ ಪ್ರಣಾಳಿಕೆಯಲ್ಲಿ ಈ ಉದ್ದೇಶ ಸ್ಪಷ್ಟವಾಗಿ ಉಲ್ಲೇಖವಾಗಿದೆ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಪ್ರತ್ಯೇಕ ಪ್ರಣಾಳಿಕೆಯೇ ಇಲ್ಲದೆ ಚುನಾವಣೆಯನ್ನೆದುರಿಸಿತು ಎಂಬುದು ಗಮನಾರ್ಹ ಅಂದರೆ 1998ರ ಪ್ರಣಾಳಿಕೆಯೇ ಈಗಲೂ ಬಿಜೆಪಿಯ ನಿಜ ಪ್ರಣಾಳಿಕೆ.

ಅದರಲ್ಲಿ ಸ್ಪಷ್ಟವಾಗಿ ಸಂಸದೀಯ ಮಾದರಿ ಬದಲಾಗಿ ಅಧ್ಯಕ್ಷೀಯ ಮಾದರಿಯನ್ನು ತರಲು ಒಂದು ಸಂವಿಧಾನವಿಮರ್ಶೆ ಸಮಿತಿಯನ್ನು ನೇಮಿಸಬೇಕೆಂದು ಉಲ್ಲೇಖಿಸಿದೆ. ಹಾಗೆಯೇ ಅಲ್ಪಸಂಖ್ಯಾತರ ಶಿಕ್ಷಣದ ಹಕ್ಕನ್ನು ನೀಡು ಸಂವಿಧಾನದ ವಿಧಿ ಹಾಗೂ ಜಮುಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ವಿಧಿ 370ನ್ನು ತೆಗೆದುಹಾಕಬೇಕೆಂದು ಘೋಷಿಸಿದೆ.

ಜೊತೆಗೆ ಒಂದು ದೇಶ, ಒಂದು ಸಂಸತಿ ಒಂದು ಭಾಷೆಯ ದೇಶವನ್ನು ರೂಪಿಸುತ್ತೇವೆಂದು ಸಾಂಸತಿಕ ಧೇಯತೆಯ ಪ್ರತಿಪಾದನೆ ಮಾಡುತ್ತೇವೆಂದು 1998ರ ಪ್ರಣಾಳಿಕೆ ಸಾರಿದೆ. ಅದೇ ದುರುದ್ದೇಶವನ್ನೇ ಸಂವಿಧಾನದ ಸಮಗ್ರ ವಿಮರ್ಶೆ ಎಂಬ ಹೆಸರಿನಲ್ಲಿ ಬಚ್ಚಿಟ್ಟು ನಡೆಸುವ ಪ್ರಯತ್ನ ಮಾಡಲೆಂದೇ ಪ್ರಜಾಪ್ರಭುತ್ವದ ಮೂಲ ನಿಯಮಗಳನ್ನು ಗಾಳಿಗೆತೂರಲಾಗಿದೆ.

ತಿದ್ದುಪಡಿಗಳಿಗೆ ಅವಕಾಶವಿದೆ.

ಸರ್ಕಾರದ ನಿರ್ಣಯ ಸಂವಿಧಾನದ ಮೂಲ ರಚನೆಯನ್ನು ಬದಲಾಯಿಸುವುದಿಲ್ಲವೆಂದು ಹೇಳಿದೆ. ಹಾಗಾದರೆ ಸಮಗ್ರ ವಿಮರ್ಶೆ ಎನ್ನುವ ಪ್ರಶ್ನೆಯಲ್ಲಿ ಬಂತು. ಉಳಿದ ಕೆಲವು ವಿಷಯಗಳಲ್ಲಿ ಮಾರ್ಪಾಟು ಮಾಡಬೇಕೆಂದರೆ ಸಂವಿಧಾನದ ಒಳಗೇ ತಿದ್ದುಪಡಿಯ ಅವಕಾಶಗಳಿವೆ ಅದನ್ನು ಬಳಸಿಕೊಂಡರೆ ಸಾಕು. ಈ 50 ವರ್ಷಗಳಲ್ಲಿ 79ಕ್ಕಿಂತ ಹೆಚ್ಚು ತಿದ್ದುಪಡಿಗಳನ್ನು ಕಂಡ ಸಂವಿಧಾನ ಮತ್ತಷ್ಟು ತಿದ್ದುಪಡಿಗಳನ್ನು ಲೋಕಸಭೆಯ ಮೂಲಕ ತರಬಹುದಷ್ಟೆ. ಇಂದು ಅದ್ವಾನಿ ವೆಂಕಯ್ಯ ನಾಯ್ಡುಗಳ ಸಾರುತ್ತಿರುವ ಕೇಂದ್ರ ರಾಜ್ಯ ಸಂವಿಧಾನಗಳು ಹಾಗೂ ಚುನಾವಣಾ ಪದ್ಧತಿಯ ಪ್ರಶ್ನೆ ಪ್ರಶ್ನೆಗಳ ಬಗ್ಗೆ ತಿದ್ದುಪಡಿತರಲಿ ಸಂವಿಧಾನದ ಸಮಗ್ರ ವಿಮರ್ಶೆ ಮಾಡಹೊರಟಿರುವುದು ಇಂದು ಲೋಕಸಭೆಯಲ್ಲಿ ಬಹುಮತ ಸಾಧಿಸಲು ಸಾಧ್ಯವಾಗದ ಬಿಜೆಪಿಯ ಅಧಿಕಾರವನ್ನು ಕೇವಲ ಶೇ. 25ರಷ್ಟು ಮಾತ್ರ ಜನಮತ ಪಡೆದ ಬಿಜೆಪಿಯನ್ನು ನಿರಂಕುಶವಾಗಿ ಅಧಿಕಾರ ನಡೆಸಲು ಅನುವುಮಾಡಿಕೊಡುವ, ಲೋಕಸಭೆಯ ಪರಮಾಧಿಕಾರವನ್ನು ಬೇರೆ ಅಪಮಾನಗಳಿಗೆ ಕಿತ್ತು ಕೊಳ್ಳುವ ಸಂಚು ಇದು.

ಇತಿಹಾಸದ ಅಗ್ನಿ ಪರೀಕ್ಷೆ.

ಆದರೆ ಇಂದು ಪ್ರಜಾಪ್ರಭುತ್ವವಾದಿಗಳೆಂದು ಗುರುತಿಸಲ್ಪಟ್ಟ ಸೋಲಿಸೇರಾಬ್ಜಿಯಂತಹ ವ್ಯಕ್ತಿಗಳು, ಬಿಜೆಪಿ ಮೈತ್ರಿಕೂಟದ್ದ ಸಹಪಕ್ಷಗಳು ಇಂದು ಬಿಜೆಪಿಯ ಒಳಸಂಚಿಗೆ ಬಲಿಬಿದ್ದಿರುವುದು ದೇಶದ ಜನತೆಗೆ, ಪ್ರಜಾಪ್ರಭುತ್ವಕ್ಕೆ ದ್ರೋಹಬಗೆದಂತೆ ರಾಮಕೃಷ್ಣ ಹೆಗ್ಗಡೆಯವರಂತೂ ಕೆಲವರ್ಷಗಳಿಂದ ಇಂತಹ ಸರ್ವಾಧಿಕಾರಸ್ಥಾಪನೆ ಕ್ರಮಗಳಿಗೆ ಬೆಂಬಲ ನೀಡುತ್ತಾ ಬಂದಿದ್ದಾರೆ. ಅದಕ್ಕೆ ಚಂದ್ರ ಬಾಬು ನಾಯ್ಡುರವರೂ ತಾಳ ಹಾಕುತ್ತಿರುವುದು ನಾಚಿಕೆಗೇಡಿನ ಕೆಲಸ. ಈ ಎಲ್ಲಾ ಶಕ್ತಿಗಳು ಇತಿಹಾಸದ ಅಗ್ನಿಪರೀಕ್ಷೆಯಲ್ಲಿ ಈ ಕೃತ್ಯಗಳು ಒರೆಗೆ ಹಚ್ಚಲ್ಪಡುತ್ತವೆ ಎಂಬುದನ್ನು ಮರೆಯದಿರಲಿ. ○

ಬಿಇಎಂಎಲ್-ಕೆ.ಜಿ.ಎಫ್.ನ ಚುನಾವಣೆ

ಕೈಗಾರಿಕೆ ಕತ್ತುಹಿಸುಕುವುದರವಿರುದ್ಧ ಅಭೂತಪೂರ್ವ ಗೆಲವು

120 ವರ್ಷಗಳ ಇತಿಹಾಸವಿರುವ ಕೋಲಾರ ಚಿನ್ನದ ಗಣಿ ಪ್ರದೇಶ (ಕೆಜಿಎಫ್)ನಗರ ಹುಟ್ಟುಕೊಂಡಿದ್ದೆ ಕಾರ್ಮಿಕರಿಂದ. ಸ್ವಾತಂತ್ರ್ಯ ಪೂರ್ವದಲ್ಲಿ John Tailors & Company ಚಿನ್ನದ ಅದಿರನ್ನು ಶೇಖರಿಸುವ ಕೆಲಸಕ್ಕಾಗಿ ಬಿ.ಜಿ.ಎಂ.ಎಲ್.ಕಾರ್ಖಾನೆ 40 ಸಾವಿರ ನೇರ ಕಾರ್ಮಿಕರನ್ನು ಹೊಂದಿತ್ತು ಹಾಗೂ ಕೆ.ಜಿ.ಎಫ್. ನಗರ ಸುಮಾರು 4 ಲಕ್ಷ ಜನ ಸಂಖ್ಯೆ ಇತ್ತು. ಪ್ರಸ್ತುತ ಕಾರ್ಮಿಕರಸಂಖ್ಯೆ 4 ಸಾವಿರಕ್ಕೆ ಇಳಿದಿದೆ. ಇಂತಹ ಒಂದು ಸಂದರ್ಭದಲ್ಲಿ ಕೆ.ಜಿ.ಎಫ್. ನಗರ ಹಾಗೂ ಕಾರ್ಮಿಕರನ್ನು ಉಳಿಸಲು 1964 ರಲ್ಲಿ ಕೇಂದ್ರ ಸರ್ಕಾರಿ ಸಾಮ್ಯದ ರಕ್ಷಣಾ ಮಂತ್ರಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ Bharath Earth Movers (BEML) ನ್ನು ಕೆ.ಜಿ.ಎಫ್. ನಗರದಲ್ಲಿ ಸ್ಥಾಪಿಸಲಾಯಿತು. BEML ಕಾರ್ಖಾನೆ ದೇಶದಲ್ಲಿ ಭೂಚಲನ ಯಂತ್ರಗಳನ್ನು ತಯಾರಿಸುವ ಅಗ್ರಗಣ್ಯ ಉದ್ದಿಮೆಯಾಗಿ Bulldager, Exavater, Frontend loader, Ropeshovel ನಂತಹ ಭಾರಿ ವಾಹನಗಳನ್ನು ತಯಾರಿಸಿ, ದೇಶ ಮತ್ತುವಿದೇಶಿ ಮಾರುಕಟ್ಟೆಯಲ್ಲಿ ಸಿಂಹಪಾಲು ಕಬಳಿಸಿತ್ತು. ಪ್ರಮುಖವಾಗಿ Coal India, NTPC, NMDC ಮತ್ತು Nyvoli Ligbate Corporation ನಂತಹ ಸಂಸ್ಥೆಗಳಲ್ಲದೆ Siriya, Sudon, Jordan ದೇಶಗಳಿಗೆ ರಫ್ತು ಮಾಡಿ ಅಮೂಲ್ಯವಾದ ವಿದೇಶಿ ವಿನಿಮಯ ಗಳಿಸಿಕೊಡಲು ಸಫಲವಾಗಿತ್ತು. ಅಲ್ಲದೆ ಬಿಡಿ ಭಾಗಗಳ ಮಾರಾಟ ಸೇವೆಯಿಂದ ಅಧಿಕ ಲಾಭ ಗಳಿಸುತ್ತಿತ್ತು.

1991 ರಲ್ಲಿ ಅಧಿಕಾರಕ್ಕೆ ಬಂದ ನರಸಿಂಹರಾಯ ಹಾಗೂ ಮನಮೋಹನ ಸಿಂಗರ ಹೊಸ ಆರ್ಥಿಕ ನೀತಿ, ಹೊಸ ಕೈಗಾರಿಕಾ ನೀತಿ, ಖಾಸಗೀಕರಣ, ಉದಾರೀಕರಣ, ಜಾಗತೀಕರಣದ ಫಲದಿಂದ 1991 ರ ತನಕ ವರ್ಷಕ್ಕೆ ಸರಿಸುಮಾರು 30-35 ಕೋಟಿ ಲಾಭಗಳಿಸುತ್ತಿದ್ದ ಉದ್ದಿಮೆ, 1999ರ ಹೊತ್ತಿಗೆ ಕೇವಲ 60-65 ಲಕ್ಷ ಲಾಭಗಳಿಸಲು ಹೆಣಗುತ್ತಿದೆ. ಖಾಸಗೀಕರಣ ಭಾಗವಾಗಿ Disinvestment ಮಾಡಲು ತೀರ್ಮಾನಿಸಿ ಲಾಭ ತರುತ್ತಿದ್ದ Beml Share ಗಳನ್ನು ರೂ 167 ಮುಖ ಬೆಲೆಗೆ ಶೇ. 27ರನ್ನು ಆರ್ಥಿಕ ಸಂಸ್ಥೆಗಳು ಹಾಗೂ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಲಾಯಿತು. ಮತ್ತು ಕೈಗಾರಿಕಾ ಅಭಿವೃದ್ಧಿಗಾಗಿ ಮುಂಗಡ ಪತ್ರದಲ್ಲಿ ಯಾವುದೇ ಹಣವನ್ನು ಕಾದಿರಿಸಲಿಲ್ಲ. ಹಣಕಾಸು ವಿಷಯದಲ್ಲಿ ಉದ್ದಿಮೆ ಆಂತರಿಕವಾಗಿ ಅಭಿವೃದ್ಧಿ ಪಡಿಸಬೇಕೆಂದು ಹೇಳಲಾಯಿತು. ಜಾಗತಿಕರಣ ಭರದಲ್ಲಿ Gatt ಒಪ್ಪಂದದ ಅನ್ವಯ G.O.L. ನೀತಿಯಿಂದ ಆಮದಿನ ಮೇಲೆ ವಿಧಿಸಿದ್ದ ಶೇ. 120 ಸುಂಕವನ್ನು ಶೇ.25ಕ್ಕೆ ಇಳಿಸಿದ್ದರಿಂದ, ವಿದೇಶಿ ಯಂತ್ರಗಳು ಹಾಗೂ ಬಿಡಿ ಭಾಗಗಳನ್ನು ಯಾರು ಬೇಕಾದರೂ ತರಬಹುದು ಇದರಿಂದ Beml ನ ಗುತ್ತೆದಾರಿ ವ್ಯಾಪಾರ ಕಡಿಮೆಯಾಗಿ , M.N.C. ಗಳ ಪೈಪೋಟಿಗೆ ಇಳಿಯಲು ವಾಹನಗಳ ಬೆಲೆಯಲ್ಲಿ ಕಡಿತಗೊಳಿಸಿದರೂ. ಮಾರುಕಟ್ಟೆ ಪ್ರವೇಶಿಸಲು ಕಷ್ಟವಾಗಿದೆ. ಕಾರ್ಖಾನೆ ಲಾಭ ಕಡಿಮೆಯಾಗಿ ಕಾರ್ಮಿಕರಿಗೆ ಸಿಗುತ್ತಿದ್ದ ಸೌಲಭ್ಯಗಳನ್ನು ಕಡಿತಗೊಳಿಸಲಾಗಿದೆ. ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ. 1991ರಲ್ಲಿ 7185 ಕಾರ್ಮಿಕರಿದ್ದು ಪ್ರಸ್ತುತ 6272ಕ್ಕೆ ಇಳಿದಿದೆ. ಆದರೆ ಅದೇ ವೇಳೆಗೆ ಅಸಂಘಟಿತ ಕಾರ್ಮಿಕರಾದ ದಿನಕೂಲಿ ನೌಕರರ ಸಂಖ್ಯೆ ದ್ವಿಗುಣಗೊಂಡು 800 ರಿಂದ 1600ಕ್ಕೆ ಹೆಚ್ಚಿದೆ.

Beml ನಲ್ಲಿ ಕಾರ್ಮಿಕರನ್ನು ಪ್ರತಿನಿದಿಸುವ, Bharth earth movevers Employees Association. ಯಾವುದೆ ಕೇಂದ್ರ ಕಾರ್ಮಿಕ ಸಂಘಕ್ಕೆ ನೊಂದಣಿಯಾಗದೆ ಕಾರ್ಯ ನಿರ್ವಹಿಸುತ್ತಿದೆ. ಆದರೆ 1991ಕ್ಕೆ ಅಧಿಕಾರಕ್ಕೆ ಬಂದ B.J.P. ಬೆಂಬಲಿತ (W.U.F) Workers Unity Fourm ತನ್ನ ರಾಜಕೀಯ ದಣಿಗಳನ್ನು ಓಲೈಸಲು, ಅಧಿಕಾರದ ದುರಾಸೆ, ಲಾಭ ಬಡುಕತನದಿಂದ ಆಡಳಿತ ಮಂಡಳಿಯೊಂದಿಗೆ ಶಾಮೀಲಾಗಿ, ಕೇಂದ್ರ ಸರ್ಕಾರ public sector ಮೇಲೆ ನಡೆಸುತ್ತಿದ್ದ ದಾಳಿಯಾಗಲಿ, ಖಾಸಗಿಕರಣವಾಗಲಿ ವೇತನ ಪರಿಷ್ಕರಣೆ ಇರುವ ತೊಂದರೆಯಾಗಲಿ, ಕೋಮು ವಿಷಬೀಜದಿಂದ ಕಾರ್ಮಿಕ ವರ್ಗದಲ್ಲಿ ಉಂಟಾದ ಒಡಕಾಗಲಿ ಯಾವುದನ್ನು ಕಾರ್ಮಿಕರಿಗೆ ತಿಳಿಸದೆ, ಕೇವಲ ಧರ್ಮ, ಜಾತಿ, ಭಾಷೆಗಳ ಹೆಸರಲ್ಲಿ ಕಾರ್ಮಿಕರನ್ನು ವಿಭಜಿಸಿ ಕಾರ್ಮಿಕರ ದೃಷ್ಟಿಯನ್ನು ಉಪಯೋಗವಿಲ್ಲದ ವಿಷಯಗಳಿಗೆ ಸೀಮಿತಗೊಳಿಸಿ ಆಡಳಿತ ಮಂಡಳಿ ಕೈಗೊಂಡ ಖಾಸಗಿಕರಣದಲ್ಲಿ ತಾನು ಪಾಲ್ಗೊಂಡು ಸಿಕ್ಕಿದಷ್ಟು ಹಣ ಮಾಡಿತು. ಉದಾಹರಣೆ, Beml ಕಾರ್ಮಿಕರಿಗಾಗಿ KSRTC ಒಪ್ಪಂದದ ಮೇರೆಗೆ ಬಸ್ಸುಗಳನ್ನು ಕೊಡುತ್ತಿತ್ತು. ಆದರೆ Commision ಗಾಗಿ KSRTC Bus ತೆಗೆದು ಹಾಕಿ ಅದರ ಬದಲು ಖಾಸಗಿಯವರ ಬಸ್ National Travel, ಹಾಕಲಾಯಿತು. ಮತ್ತು KSRTC ಯವರಿಗೆ ಕೊಡುವುದ್ದಕ್ಕಿಂತ ತಿಂಗಳಿಗೆ 12 ಲಕ್ಷ ಹೆಚ್ಚಿಗೆ ಕೊಡಬೇಕಾಯಿತು. ಖಾಸಗಿ Bus ಬೇಡ, ಸರ್ಕಾರಿ Bus ಬೇಕು ಎಂದು ಉಪವಾಸ ಸತ್ಯಾಗ್ರಹ ಮಾಡಿದ 11 ಕಾರ್ಮಿಕ ಮುಖಂಡರನ್ನು ಸುಳ್ಳು ಕೇಸ್ ಗಳನ್ನು ಹಾಕಿ 6 ತಿಂಗಳು ಕಾಲ ಅಮಾನಾತು (Suspend) ಮಾಡಲಾಯಿತು ಹಾಗೂ police ಕೇಸ್ ಹಾಕಲಾಯಿತು. ಕಾರ್ಮಿಕ ಕಲ್ಯಾಣ ನೀತಿಯಲ್ಲಿ ಸಿಕ್ಕಿದಷ್ಟು ಬಾಚಿಕೊಳ್ಳಲು House Rold

ಪುಟ 4 ಕ್ಕೆ

ಹಿಂದಿನ ವಾರ ಜ್ಯೋತಿ ಬಸು ತಂದೆಯಾದದ್ದು ಮತ್ತು ಸರ್ಕಾರ ಮಂಡಿಸಿದ ಕರಾಳ ಮಸೂದೆ- ಟ್ರಿಬ್ಯುನಲ್ಸ್ ಆಫ್ ಕ್ರಿಮಿನಲ್ ಜ್ಯುರಿಸ್ಟಿಕ್ಷನ್ ಬಿಲ್ 1952 - ಯ ವಿರುದ್ಧ ಪ್ರತಿಭಟನೆಗಳು ಮತ್ತು ಆಹಾರ, ಉದ್ಯೋಗ, ನಿರಾಶ್ರಿತರ ಸಮಸ್ಯೆಗಳ ಪರಿಹಾರಕ್ಕಾಗಿ ದಿನನಿತ್ಯವೂ ನಡೆದ ಪ್ರತಿಭಟನೆಗಳ ಬಗ್ಗೆ ಓದಿರುವಿರಿ ಈ ವಾರ ಶಿಕ್ಷಕರ ಐತಿಹಾಸ ಆಂದೋಲನದ ಬಗ್ಗೆ ಓದಿ......

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 24

ಶಿಕ್ಷಕರ ಐತಿಹಾಸಿಕ ಆಂದೋಲನ

1954ರ ಫೆಬ್ರವರಿಯಲ್ಲಿ ಕಲ್ಕತ್ತದಲ್ಲಿ ತುಂಬಾ ಮಹತ್ವದ ವಿದ್ಯಮಾನವೊಂದು ನಡೆಯಿತು. ಅಖಿಲ ಭಾರತ ಶಿಕ್ಷಕರ ಘಟಕ ನೀಡಿದ ಕರೆಯ ಮೇರೆಗೆ 18000 ಮಾಧ್ಯಮಿಕ ಶಿಕ್ಷಕರು ಮುಷ್ಕರದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಇದು ಸ್ವಾತಂತ್ರ್ಯೋತ್ತರ ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರು ನಡೆಸಿದ ಪ್ರಥಮ ಸಂಘಟಿತ ಚಳುವಳಿ.

ಈ ಚಳುವಳಿಯ ಬಗ್ಗೆ ವಿವರಣೆ ನೀಡುವುದು ಅಗತ್ಯ. ಅಸೆಂಬ್ಲಿಯಲ್ಲಿ ನಮ್ಮದು ಅತಿದೊಡ್ಡ ಪ್ರತಿಪಕ್ಷ ಗುಂಪಾಗಿತ್ತು, ನಾನು ಅದರ ನಾಯಕನಾಗಿದ್ದೆ. ಅದೂ ಅಲ್ಲದೆ ನಾನು ಪಕ್ಷದ ಪ್ರಾಂತೀಯ ಸಮಿತಿಯ ಕಾರ್ಯದರ್ಶಿಯೂ ಆಗಿದ್ದೆ

ಶಿಕ್ಷಕರ ಅನೇಕ ಬೇಡಿಕೆಗಳಿದ್ದವು ಆದರೆ ಆ ಕಾಲಘಟ್ಟದಲ್ಲಿ ಎರಡು ತುಂಬಾ ಮುಖ್ಯವಾಗಿದ್ದವು. ತುಟ್ಟಿಭತ್ಯೆಯನ್ನು 35 ರೂಪಾಯಿಗೆ ಹೆಚ್ಚಿಸುವುದು ಹಾಗೂ ತಿಂಗಳ ಕನಿಷ್ಠ ಸಂಬಳವನ್ನು 75 ರೂಪಾಯಿಯಿಂದ 180 ರೂಪಾಯಿಗೆ ಏರಿಸಬೇಕು ಎನ್ನುವುದೇ ಆ ಎರಡು ಮುಖ್ಯ ಬೇಡಿಕೆಗಳು. ಅರೆಸರಕಾರಿ ಸಂಸ್ಥೆಯಾದ ಮಾಧ್ಯಮಿಕ ಶಿಕ್ಷಣಮಂಡಳಿಯ ಶಿಫಾರಸಿನ ಮೇರೆಗೆ ಹೀಗೆ ಮಾಡಲಾಯಿತು. ಕೆಲವು ತಿಂಗಳ ಹಿಂದೆ ಎ.ಬಿ.ಟಿ.ಎ (ಅಖಿಲ ಬಂಗಾಳ ಶಿಕ್ಷಕರ ಸಂಘ) ಮುಖ್ಯಮಂತ್ರಿಗೆ ಬೇಡಿಕೆಗಳ ಪಟ್ಟಿಯೊಂದನ್ನು ಸಲ್ಲಿಸಿತು.

ಆದರೆ ಡಾ.ರಾಯ್ ಮನವಿ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಪ್ರತಿಪಕ್ಷದ ನಾವು ಕೆಲವರು ಮುಖ್ಯಮಂತ್ರಿಯನ್ನು ಕಂಡು ಮಾತನಾಡಿ ಶಿಕ್ಷಕರ ಪ್ರತಿನಿಧಿಗಳನ್ನು ಭೇಟಿ ಮಾಡುವಂತೆ ಕೇಳಿಕೊಂಡೆವು. ಕೊನೆಗೂ ಅವರು ಒಪ್ಪಿದರು. ಆದರೆ ಆ ಸಭೆಯಲ್ಲಿ ಯಾವುದೇ ನಿರ್ಧಾರ ಮೂಡಿಬರಲಿಲ್ಲ. ಬೇಡಿಕೆಗಳನ್ನು ಸ್ವಲ್ಪಮಟ್ಟಿಗೆ ಒಪ್ಪಲು ರಾಯ್ ಸಿದ್ಧರಿದ್ದರು. ಆದರೆ ಮಂಡಳಿಯ ಶಿಫಾರಸ್ಸುಗಳನ್ನು ಯಥಾವತ್ತಾಗಿ ಅಂಗೀಕರಿಸಲು ಸಿದ್ಧರಿರಲಿಲ್ಲ.

ಅನಿರ್ದಿಷ್ಟ ಅವಧಿಯ ಮುಷ್ಕರ ನಡೆಸಲು 18,000 ಸೆಕೆಂಡರಿ ಶಿಕ್ಷಕ ಶಿಕ್ಷಕಿಯರು ಸಿದ್ಧತೆ ನಡೆಸಿದರು. ಫೆಬ್ರವರಿ 9 ರೊಳಗೆ ಕನಿಷ್ಠ ಬೇಡಿಕೆಗಳನ್ನು ಸರಕಾರ ಅಂಗೀಕರಿಸದಿದ್ದರೆ ಮರು ದಿನದಿಂದ ಅನಿರ್ದಿಷ್ಟಕಾಲದ ಮುಷ್ಕರ ನಡೆಸಲು ಎ.ಬಿ.ಟಿ.ಎ. ಸಭೆ ನಿರ್ಧರಿಸಿತು. ಅದೇ ಹೊತ್ತಿಗೆ ದೊಡ್ಡದೊಂದು ಆಂದೋಲನವನ್ನು ನಡೆಸಲು ಕೂಡ ಯೋಜನೆ ರೂಪಿಸಲಾಯಿತು.

ನಮ್ಮ ಪಕ್ಷದ ಪಶ್ಚಿಮ ಬಂಗಾಳ ಪ್ರಾಂತೀಯ ಸಮಿತಿ, ಫಾರ್ವರ್ಡ್ ಬ್ಲಾಕ್ ಆರ್.ಎಸ್.ಪಿ. ಮತ್ತು ಎಸ್.ಯು.ಸಿ, ನಾನಾ ಟ್ರೇಡ್ ಯುನಿಯನ್ ಗಳು, ರೈತರು, ವಿದ್ಯಾರ್ಥಿಗಳು, ಯುವಜನ ಸಂಘಟನೆಗಳು ಮುಷ್ಕರ ಹೂಡುವ ಶಿಕ್ಷಕರ ಬೆಂಬಲಕ್ಕೆ ದಾವಿಸಿ ಬಂದವು. ಎಬಿಟಿಎ ಕೊನೆ ಕ್ಷಣದವರೆಗೂ ಪ್ರಯತ್ನಿಸಿ ಪರಿಹಾರ ಕಂಡು ಕೊಂಡು ಮುಷ್ಕರ ನಡೆಯುವುದನ್ನು ತಪ್ಪಿಸಲು ಯತ್ನಿಸಿತು. ಸರಕಾರ ಮತ್ತು ಸಕೆಂಡರಿ ಮಂಡಳಿಯ ಶಿಕ್ಷಕ ಪ್ರತಿನಿಧಿಗಳುಳ್ಳ ನಿಯೋಗವೊಂದು ಫೆಬ್ರವರಿ ನಾಲ್ಕರಂದು ಡಾ.ರಾಯ್‌ರವರನ್ನು ಭೇಟಿಮಾಡಿತು. ಆದರೆ ಬೇಡಿಕೆಗಳನ್ನು ಮನ್ನಿಸಲು ಅವರು ಖಂಡತುಂಡವಾಗಿ ನಿರಾಕರಿಸಿದರು.

ಡಾ.ರಾಯ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹಿಂದೆ ನೀಡಿದ ಭರವಸೆಯ ಅನ್ವಯದ ವೇತನ ಶ್ರೇಣಿಯನ್ನು ಕೂಡ ಜಾರಿ ಮಾಡುವುದಿಲ್ಲ ಎಂದು ಹೇಳಿದರು! ಫೆಬ್ರವರಿ 10 ರಿಂದ ರ್‍ಯಾಲಿಗಳು, ಮೆರವಣಿಗೆಗಳು ಸಭೆಗಳು ಆರಂಭವಾದವು. ಕಮ್ಯುನಿಸ್ಟ್ ಪಕ್ಷ ಮತ್ತಿತರ ರಾಜಕೀಯ ಪಕ್ಷಗಳುಳ್ಳ ಸರ್ವಪಕ್ಷ ಸಮಿತಿ ರಾಜ್ಯದಾದ್ಯಂತ ಫೆಬ್ರವರಿ 12 ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತು.

ಫೆಬ್ರವರಿ 10 ರಂದು ಶಿಕ್ಷಕರ ಐತಿಹಾಸಿಕ ಮುಷ್ಕರ ಆರಂಭವಾಯಿತು. ಮುಷ್ಕರ ಮುರಿಯುವ ಎಲ್ಲಾ ಯತ್ನಗಳು ವಿಫಲವಾದವು. ವಿಶುದಾನಂದ ಸರಸ್ವತಿ ವಿದ್ಯಾಲಯದ ಪ್ರಾಯದ ಶಿಕ್ಷಕರೊಬ್ಬರ ಮೇಲೆ ಹಲ್ಲೆ ನಡೆಯಿತು. ಮಹಿಳಾ ಕಾಲೇಜಿನ ಹೊರಗಡೆಯಿಂದ ಪೋಲೀಸರು ಆರು ಶಿಕ್ಷಕರನ್ನು ಬಂಧಿಸಿದರು. ಕಲ್ಕತ್ತದಲ್ಲಿ ಒಟ್ಟು 43 ಶಾಲೆಗಳನ್ನು ಮುಚ್ಚಲಾಯಿತು. ಶಿಕ್ಷಕರ ಹೋರಾಟದಿಂದ ಕಾಂಗ್ರೆಸ್ ಸರಕಾರ ನಡುಗಿ ಹೋಯಿತು. ಸ್ವಯಂ ಸ್ಫೂರ್ತಿ ಹಾಗೂ ಯಶಸ್ವಿ ಹೋರಾಟಕ್ಕೆ ಅದು ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತಪಡಿಸಿತು.

ಫೆಬ್ರವರಿ 11 ರಂದು ರೈಟರ್ಸ್ ಬಿಲ್ಡಿಂಗ್ (ಅಸೆಂಬ್ಲಿ ಕಾರ್ಯಲಯ) ನತ್ತ ಮೆರವಣಿಗೆಯಲ್ಲಿ ತೆರಳುತ್ತಿದ್ದ ಮುಷ್ಕರ ನಿರತ ಶಿಕ್ಷಕರನ್ನು ತಡೆಯಲು ಪೊಲೀಸರು ಯತ್ನಿಸಿದರು. ಶಿಕ್ಷಕರು ಬೇರೆ ವಿಧಿಯಿಲ್ಲದೆ ರಾತ್ರಿಯಿಡೀ ರಾಜಭವನದ ಮುಂದೆ ಕುಳಿತುಕೊಂಡು ಬೇಡಿಕೆ ಈಡೇರುವವರೆಗೂ ಈ ಧರಣಿ ಮುಂದುವರಿಯುತ್ತಿದೆ ಎಂದು ಎ.ಬಿ.ಟಿ.ಎ ಪ್ರಧಾನ ಕಾರ್ಯದರ್ಶಿ ಸತ್ಯ ಪ್ರಿಯ ರಾಯ್ ಘೋಷಿಸಿದರು.

ಇತರ ಅನೇಕ ಜನರಂತೆ ಶಿಕ್ಷಕರಿಗೆ ಬೆಂಬಲ ಸೂಚಿಸಲು ನಾನು ಕೂಡ ರಾಜಭವನಕ್ಕೆ ಧಾವಿಸಿ ಹೋದೆ. ಭಾಷಣವನ್ನು ಮಾಡಿದೆ. ಮುಷ್ಕರಕ್ಕೆ ಸಾರ್ವಜನಿಕರ ಪ್ರತಿಕ್ರಿಯೆ ಅಪೂರ್ವವಾಗಿತ್ತು. ಸಾವಿರಾರು ಜನರು ರಾಜಭವನದ ಬಳಿ ಬಂದು ಬೆಂಬಲ ಸೂಚಿಸುತ್ತಿದ್ದುದನ್ನು ಕಾಣಬಹುದಾಗಿತ್ತು.

ಪಶ್ಚಿಮ ಬಂಗಾಳ ಬಂದ್

ಹೋರಾಟನಿರತ ಶಿಕ್ಷಕರಿಗೆ ಬೆಂಬಲ ಸೂಚಿಸಿ ಫೆಬ್ರವರಿ 12 ರಂದು ಇಡೀ ಪಶ್ಚಿಮ ಬಂಗಾಳ ಬಂದ್ ಆಚರಿಸಿತು. ವಿದ್ಯಾರ್ಥಿಗಳ ಮುಷ್ಕರವೂ ಏಕಕಾಲಕ್ಕೆ ಮುಂದುವರಿಯಿತು. ಫೆಬ್ರವರಿ 14ರ ವರೆಗೆ ಶಿಕ್ಷಕರ ಧರಣಿ ನಡೆಯಿತು. ಕಾಂಗ್ರೆಸ್ ಸರಕಾರದ ಪ್ರತಿಕ್ರಿಯೆ ನಿರೀಕ್ಷಿಸಿದಂತೆಯೇ ಇತ್ತು. ಅದು ಶಿಕ್ಷಕರನ್ನು ಯದ್ವ-ತದ್ವ ಬಂದಿಸಲು ಆರಂಭಿಸಿತು.

ಫೆಬ್ರವರಿ 14ರ ಮಧ್ಯರಾತ್ರಿ ರಾಜಭವನದ ಬಳಿ ಧರಣಿ ನಿರತ ಶಿಕ್ಷಕರನ್ನು ಬಂಧಿಸಲಾಯಿತು. ಅವರ ಶಿಬಿರಗಳನ್ನು ಕೆಡವಿ ಹಾಕಲಾಯಿತು. ಕಲ್ಕತ್ತ ಮತ್ತು ಹೌರಾದಲ್ಲಿ ಪೊಲೀಸ್ ದಾಳಿ ನಡೆಯಿತು. ಕೆಲವು ಶಾಸಕರನ್ನು ಕೂಡ ಬಂಧಿಸಲಾಯಿತು.

ಫೆಬ್ರವರಿ 15 ರಂದು ವಿಧಾನಸಭೆಯ ಅಧಿವೇಶನ ಆರಂಭವಾಯಿತು. ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಭಾಷಣ ಮಾಡುವಾಗ ಶಿಕ್ಷಕರ ಮೇಲಿನ ದೌರ್ಜನ್ಯವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಲು ಪ್ರತಿಪಕ್ಷದವರು ನಿರ್ಧರಿಸಿದೆವು. ರಾಜ್ಯಪಾಲರು ಭಾಷಣಮಾಡಲು ಎದ್ದಾಗ ಅವರಿಗೆ ಅಡ್ಡಿ ಪಡಿಸಲು ಸ್ವಲ್ಪಹೊತ್ತು ಯತ್ನಿಸಿದೆವು ನಂತರ ಸಾಮೂಹಿಕವಾಗಿ ಸಭಾತ್ಯಾಗ ಮಾಡಿದೆವು.

ಸಿಟ್ಟಿಗೆದ್ದ ಸರಕಾರ

ಅಸೆಂಬ್ಲಿ ಆವರಣದಲ್ಲೇ ಬೃಹತ್ ರ್‍ಯಾಲಿ ಯೊಂದನ್ನು ನಡೆಸಲು ಯೋಚಿಸಿದೆವು. ಇದರಿಂದ ಸರಕಾರ ಎಂದಿಗಿಂತಲೂ ಹೆಚ್ಚಿನ ರೀತಿಯಲ್ಲಿ ಸಿಟ್ಟಿಗೆದ್ದಿತು. ರ್‍ಯಾಲಿ ನಡೆಯಬೇಕಾದ ಫೆಬ್ರವರಿ 16 ರಂದು ಪೋಲೀಸರು ವ್ಯಾಪಕ ದಾಳಿ- ಬಂಧನಕ್ಕೆ ಮುಂದಾದರು. ಮಣಿಕುಂತಲ ಸೇನ್, ಸತ್ಯಪ್ರಿಯ ರಾಯ್, ಅನಿಲಾದೇವಿ, ಜ್ಯೋತಿಷ್ ಜೊವರ್‌ದಾರ್, ಶೈಲೇಸ್‌ರಾಯ್ ಮತ್ತು ಕನಯ್ ಭಟ್ಟಾಚಾರ್ಯ ಮೊದಲಾದವರು ಬಂಧಿತರಾದರು.

ನಾನು ಹಿಂದೂಸ್ತಾನ್ ಪಾರ್ಕ್‌ನ ನನ್ನ ಮನೆಯಲ್ಲಿ ಇರಲಿಲ್ಲ. ಮಾವನ ಮನೆಯಲ್ಲಿ ಇದ್ದೆ. ನನ್ನನ್ನು ಬಂಧಿಸಲೆಂದು ನನ್ನ ಮನೆಗೆ ಹೋಗಿದ್ದ ಪೊಲೀಸರು ಬರಿಗೈಯಲ್ಲಿ ವಾಪಸಾದರು. ನಮ್ಮ ಒಬ್ಬ ಸಂಗಾತಿ ಪ್ರಾಂತೀಯ ಸಮಿತಿ ಕಚೇರಿಯಲ್ಲಿ ಈ ಸುದ್ದಿ ಮುಟ್ಟಿಸಿದ. ವ್ಯಾಪಕ ಬಂಧನ ಮತ್ತು ದಾಳಿಯ ವಿವರಗಳನ್ನು ಕೂಡ ಆತ ನಮಗೆ ತಿಳಿಸಿದ. ಏನಾದರೂ ಮಾಡಿ ರ್‍ಯಾಲಿಯನ್ನು ವಿಫಲಗೊಳಿಸಲು ಸರಕಾರ ನಿರ್ಧರಿಸಿದಂತಿತ್ತು. ಆ ದಿನ ಬೆಳಿಗ್ಗೆ ಕನಿಷ್ಠ 500 ಶಿಕ್ಷಕರು ಮತ್ತು ಪ್ರತಿಪಕ್ಷ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ನಾನು ಕೂಡಾ ಬಂಧಿತನಾದರೆ ಒಳ್ಳೆಯದಾಗುವುದಿಲ್ಲ ಎಂದು ನಾನು ಆಕ್ಷಣವೇ ನಿರ್ಧರಿಸಿದೆ. ಶಿಕ್ಷಕರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ಸದನದಲ್ಲಿ ನಾನು ಪ್ರಸ್ತಾಪಿಸುವುದು ಅಗತ್ಯವಾಗಿತ್ತು ಅದಕ್ಕಿಂತ ಮುಂಚೆ ನನ್ನನ್ನು ಬಂಧಿಸಲು ಪೊಲೀಸರಿಗೆ ಅವಕಾಶ ಕೊಡುವುದು ತಪ್ಪಾಗುತ್ತದೆ ಎಂದು ಭಾವಿಸಿದೆ.

ಭದ್ರಕೋಟೆ ಮುರಿದು........

ನಾನು ಟ್ಯಾಕ್ಸಿಯಲ್ಲಿ ಗೆಳೆಯರೊಬ್ಬರ ಮನೆಗೆ ಹೋದೆ ಲಭ್ಯವಿದ್ದ ಎಲ್ಲ ಸಂಗಾತಿಗಳಿಗೆ ನನ್ನ ನಿರ್ಧಾರ ತಿಳಿಸಿದೆ. ಬಂಧಿತನಾಗದೆ ವಿಧಾನಸಭೆ ಪ್ರವೇಶಿಸುವ ತಂತ್ರವನ್ನು ರೂಪಿಸಿದೆ. ಅದರಲ್ಲಿ ಯಶಸ್ವಿ ಆಗುತ್ತೇನೋ ಇಲ್ಲವೋ ಗೊತ್ತಿರಲಿಲ್ಲ ಏನಿದ್ದರೂ ಒಂದು ಕೈ ನೋಡಿಯೇ ಬಿಡೋಣ ಎಂದು ನಿರ್ಧರಿಸಿದೆ.

ಎಂದಿನಂತೆ ನಾನು ಟ್ಯಾಕ್ಸಿಯಲ್ಲಿ ಹೊರಟೆ. ವಿಧಾನಸಭೆ ಆವರಣದ ಸುತ್ತ ಸಮವಸ್ತ್ರಧಾರಿ ಪೊಲೀಸರ ದಂಡೇ ಸೇರಿತ್ತು. ಅವರ ಕೈಗಳಲ್ಲಿ ಬಂದೂಕು ಇತ್ತು. ಬೇಹುಗಾರರೂ ಅಲ್ಲಿ ಜಮಾಯಿಸಿದ್ದರು. ಆದರೆ ನಾನು ಪ್ರತಿನಿತ್ಯದಂತೆ ಮುಖ್ಯ ದ್ವಾರದಿಂದ ಪ್ರವೇಶಿಸಿದೆ. ನಾನು ಆ ರೀತಿ ಧೈರ್ಯವಾಗಿ ಅಸೆಂಬ್ಲಿಗೆ ಹೋಗುತ್ತೇನೆ ಎಂದು ಮಾಮೂಲಿ ವಸ್ತ್ರದಲ್ಲಿದ್ದ ಪೊಲೀಸರು ಊಹಿಸಿರಲಿಕ್ಕೂ ಇಲ್ಲ. ಒಂದು ವೇಳೆ ಅವರೇನಾದರೂ ಹೆಚ್ಚು ಎಚ್ಚರದಿಂದ ಇದ್ದರೆ ನನ್ನನ್ನು ಖಂಡಿತ ಬಂಧಿಸುತ್ತಿದ್ದರು.

ಆದರೆ ಸದನದ ಒಳಗಿನಿಂದ ಸುದ್ದಿ ಹಬ್ಬಿದಾಗ ಅವರಿಗೆ ತಮ್ಮ ಲೋಪ ಗೊತ್ತಾಯಿತು. ಪೊಲೀಸರು ಗಲಿಬಿಲಿಗೊಂಡು ಓಡಾಡತೊಡಗಿದರು. ಅದಿವೇಶನ ನಡೆಯುತ್ತಿರುವಾಗ ಶಾಸಕರೊಬ್ಬರನ್ನು ಬಂಧಿಸಬಹುದೇ ಎಂಬ ಬಗ್ಗೆ ಉನ್ನತ ಮಟ್ಟದಲ್ಲಿ ಸಮಾಲೋಚನೆ ಆರಂಭವಾಯಿತು. ಇಂಥ ಒಂದು ಹೆಜ್ಜೆ ಸೂಕ್ತವಾಗದು ಎಂಬುದನ್ನು ಮುಖ್ಯಮಂತ್ರಿಯೇ ಅರಿತರು. ದಿನದ ಕಲಾಪ ಮಗಿದು ನಾನು ಅಸೆಂಬ್ಲಿ ಆವರಣದಿಂದ ಹೊರಹೋದ ಮೇಲೆ ನನ್ನನ್ನು ಬಂಧಿಸಲಾಗುತ್ತದೆ ಎಂದು ನನಗೆ ತಿಳಿಸಲಾಯಿತು.

(ಮುಂದುವರಿಯುವುದು)

ಅಭೂತಪೂರ್ವ ಗೆಲುವು

ಪುಟ 2 ರಿಂದ

Articales, Two wheeler scheme ಮುಂತಾದವುಗಳನ್ನು Market ಬೆಲೆಗಿಂತ ಹೆಚ್ಚಿನ ಬೆಲೆಗೆ ಕೊಡಿಸಿ ತನ್ನ ವ್ಯಾಪಾರ ಬುದ್ಧಿಯನ್ನು ಪ್ರದರ್ಶಿಸಿ ಲಕ್ಷಾಂತರ ರೂಪಾಯಿಗಳನ್ನು ಕೊಳ್ಳೆ ಹೊಡೆದರು.

CITU ವಿನ ಮೇಲಿನ ಕುರುಡು ವಿರೋಧದಿಂದ CPSTU ವಿನ ಯಾವುದೇ ತೀರ್ಮಾನವನ್ನು ಜಾರಿಮಾಡದೆ. JAF ನ ನಿರ್ಣಯಗಳನ್ನು ತಮಗೆ ಅನುಕೂಲವಾಗು ವಂತೆ ತನ್ನ ರಾಜಕೀಯ ದಣಿಗಳಿಗೆ ಅನುಕೂಲವಾಗುವಂತೆ ತಿರಿಚಿ ಜಾರಿ ಮಾಡುವುದು. CPSTU 1998 ಡಿಸೆಂಬರ್ 11 ರಂದು ದೇಶದಾದ್ಯಂತ ಒಂದು ದಿನದ ಮುಷ್ಕರಕ್ಕೆ ಕರೆ ಕೊಟ್ಟಿತು. ಆದರೆ ಅದನ್ನು ತೀರಾ ಸಣ್ಣ ಕಾರಣಕ್ಕಾಗಿ ಜಾರಿಮಾಡದೆ Dec 14ಕ್ಕೆ ಮುಂದೂಡಿ, ಸರ್ಕಾರದ ಮೇಲೆ ಒತ್ತಡ ತರುವುದರ ಬದಲು ಕಾರ್ಮಿಕರನ್ನು ಮುಖ್ಯವಾಹಿನಿಯಿಂದ ದೂರವಿಡುವ ಕೆಲಸ ವ್ಯವಸ್ಥಿತವಾಗಿ ಮಾಡಲಾಯಿತು.

ಸ್ವಜನ ಪಕ್ಷಪಾತ, ಲಂಚಗುಳಿತನ ಹಾಗೂ ಏಕವ್ಯಕ್ತಿ ಆಡಳಿತದಿಂದ ಬೇಸತ್ತ ಕಾರ್ಮಿಕರು ತಮ್ಮ ನೈಜ ಸಮಸ್ಯೆಗಳನ್ನು ಪರಿಹರಿಸಲು ಪರ್ಯಾಯಕ್ಕೆ ಕಾಯುತ್ತಿದ್ದರು. ಇಂತಹ ಸಂದರ್ಭದಲ್ಲಿ 1991ರಿಂದ ನಿರಂತರವಾಗಿ, ಹೊಸ ಆರ್ಥಿಕ ನೀತಿ, ಹೊಸ ಕೈಗಾರಿಕಾ ನೀತಿ, ಉದಾರಿಕರಣ, ಜಾಗತಿಕರಣ, ಖಾಸಗಿಕರಣ, ಕೋಮುವಾದ ಆಡಳಿತ ಮಂಡಳಿಯ ದುರಾಡಳಿತ. ಕೇಂದ್ರ ಸರ್ಕಾರದ ಕಾರ್ಮಿಕ ವಿರೋದಿನೀತಿಗಳನ್ನು ಕಾರ್ಮಿಕರು ಹಾಗೂ KGF ನಗರದ ಜನರ ಮಧ್ಯೆ ಪ್ರಚಾರ ಪ್ರಕ್ಷೋಭೆಗಳನ್ನು ಯಶಸ್ವಿಯಾದ J.A.C (ಜಂಟಿ ಕ್ರಿಯಾ ಸಮಿತಿ), ಒಂದು ಪರ್ಯಾಯವಾಗಿ ಕಾಣಿಸಿತು. ಪರ್ಯಾಯ ಕಾರ್ಯಕ್ರಮಗಳು ಇವೆ. ಎಂಬುದನ್ನು ತೋರಿಸಿತು. WUF ನ ಕಾರ್ಮಿಕ ವಿರೋಧಿ ನೀತಿಗಳು, ಆಡಳಿತ ಮಂಡಳಿಯೊಂದಿಗೆ ಶಾಮೀಲು ಮುಂತಾದುವುಗಳನ್ನು ವಿರೋಧಿಸುವರನ್ನೆಲ್ಲಾ ಒಂದುಗೂಡಿಸಿ, J.A.C ಚುನಾವಣೆ ಎದಿರಸಲು ತಯಾರು ನಡೆಸಿತು. 1991ರಿಂದ WUF ಜೊತೆಯಲ್ಲಿದ್ದ ಒಂದು ಸಣ್ಣ ಗುಂಪು ಅವರನ್ನು ವಿರೋಧಿಸಿ ಸ್ವತಂತ್ರವಾಗಿ ಸ್ಪರ್ಧಿಸಿ ಸರಾಸರಿ 200 ಓಟುಪಡೆಯಿತು. ದಿನಾಂಕ 29-12-99 ರಂದು ನಡೆದ ಚುನಾವಣೆ ಹೋರಾಟದಲ್ಲಿ 4 ಗುಂಪುಗಳು ಸ್ಪರ್ಧಿಸಿದವು. ನೇರ ಹಣಾಹಣಿ JAC ಮತ್ತು WUF ಮಧ್ಯೆ ನಡೆದು JAC ಅಭೂತ ಪೂರ್ವ ಗೆಲುವು ಸಾಧಿಸಿತು.

ಈ ಜಯ JAC ಯ ಗೆಲುವಲ್ಲ, ಇಡಿ ಕೆ.ಜಿ.ಎಫ್ ನಗರದ ಜನತೆಯ ಅಳಿವು ಉಳಿವಿನ ಗೆಲುವು ದಿನಕೂಲಿ ಕಾರ್ಮಿಕರ ಭವಿಷ್ಯದ ಗೆಲುವು, ಬಿ.ಇ.ಎಂ.ಎಲ್ ಕಾರ್ಮಿಕರ ಹೋರಾಟಕ್ಕೆ ಸ್ಫೂರ್ತಿಯ ಗೆಲುವು, ಕೇಂದ್ರ ಸರ್ಕಾರದ ಕಾರ್ಮಿಕರ ವಿರೋಧಿ ನೀತಿಗಳ ವಿರುದ್ಧದ ಗೆಲುವು ಎಂಬುದನ್ನು ತೋರಿಸಿಕೊಟ್ಟಿದೆ. ಬೇಡಿಕೆಗಳ ಆಧಾರದ ಮೇಲೆ public Sector ನ್ನು ಉಳಿಸಲು ವೇತನ ಪರಿಷ್ಕರಣೆ ಶೀಘ್ರ ಇತ್ಯರ್ಥಗೊಳಿಸಲು DPE Goldline ಮುರಿಯಲು Mohan Committe ಶಿಫಾರಸುಗಳನ್ನು ಜಾರಿ ಮಾಡಬಾರದೆಂದು CPSTU ನಡೆಸಲು ಉದ್ದೇಶಿಸಿರುವ Feb 2ರ ಒಂದು ದಿನದ ಮುಷ್ಕರಕ್ಕೆ ಜನಮತ ಅಭಿಪ್ರಾಯ ಜನವರಿ 11ರಂದು ನಡೆದು 6200 ಕಾರ್ಮಿಕರಲ್ಲಿ 6198 ಕಾರ್ಮಿಕರು ಹೌದು ಎಂದು ಮತ ಚಲಾಯಿಸಿ, ಹೋರಾಟಕ್ಕೆ ಸಜ್ಜಾಗಿದ್ದವೆ. ಮುಂದಿನ ದಿನಗಳಲ್ಲಿ ನಡೆಯಲಿರುವ ಐಕ್ಯ ಹೋರಾಟಗಳನ್ನು ಯಶಸ್ವಿಗೊಳಿಸುವ ದಿಶೆಯಲ್ಲಿ CPSTU ಮತ್ತು JAF ನಿರ್ಣಯಗಳನ್ನು ಜಾರಿ ಮಾಡಲು ಸದಾಸಿದ್ದವೆಂಬುದು ಈ ಗೆಲುವು ಖಾತರಿಪಡಿಸಿದೆ. 29-12-99ರಂದು

ಚುನಾವಣೆಯಲ್ಲಿ ಪಲಿತಾಂಶ

8ಜನ ಪದಾಧಿಕಾರಿಗಳಲ್ಲಿ JAC ಎಂಟರಲ್ಲಿ ಜಯಗಳಿಸಿದ್ದಾರೆ.

31 ಜನರ ಕಾರ್ಯಕಾರಿ ಸಮಿತಿಯಲ್ಲಿ JAC 18ರಲ್ಲಿ ಜಯಗಳಿಸಿದೆ. WUF 13ರಲ್ಲಿ ಜಯಗಳಿಸಿದೆ.


ಕಾರ್ಮಿಕರ ಕಲ್ಯಾಣ ನೀತಿ ಸಮಿತಿಯಲ್ಲಿ 4ರಲ್ಲಿ 4 ಜನ JAC ಗೆಲುವು


Works Committe ಯಲ್ಲಿ 10ಕ್ಕೆ 8ರಲ್ಲಿ JAC ಜಯಗಳಿಸಿದೆ. 2ರಲ್ಲಿ WUF ಜಯಗಳಿಸಿದೆ. Canteenr managing committe ಯಲ್ಲಿ 7ಕ್ಕೆ 6 JAC ಜಯಗಳಿಸಿದೆ. ಒಂದರಲ್ಲಿ WUF ಜಯಗಳಿಸಿದೆ.

	ಪದಾಧಿಕಾರಿಗಳು	ಮತಗಳು	ಅಂತರ
ಅಧ್ಯಕ್ಷರು	ವೇಣುಗೋಪಾಲ್	3068	8
ಉಪಾಧ್ಯಕ್ಷರು 1	ಎಲ್.ಶಿವಣ್ಣ	3527	887
ಉಪಾಧ್ಯಕ್ಷರು 2	ಜಿ.ಅರ್ಜುನ್	3311	521
ಕಾರ್ಯದರ್ಶಿ	ಪಿ.ಶ್ರೀನಿವಾಸ್	3191	436
ಜಂಟಿ ಕಾರ್ಯದರ್ಶಿ	ಯು.ಕರುಪ್ಪಯ್ಯ	3330	470
ಉಪ ಕಾರ್ಯದರ್ಶಿ	ಕೆ.ಮೂರ್ತಿ	3222	328
ಸಂಘಟನಾ ಕಾರ್ಯದರ್ಶಿ	ಡಿ.ಕೆ.ಅನುರಾಧಮೂರ್ತಿ	3238	410
ಕೋಶಾಧಿಕಾರಿ	ಡಿ.ನಾಗರಾಜನ್	3421	662

ಎರಡು ವರ್ಷಕ್ಕೆ ಉಡುಪಿ ಕೃಷ್ಣನ ಪೂಜಾರಿ ಯಾರಿರಬೇಕು ಎಂಬುದನ್ನೇ ಅದ್ದೂರಿ ಉತ್ಸವವಾಗಿ ಆಚರಿಸಿ, ಜಗದ ಗುರುಗಳು ತಾವೇ ಎಂದೂ, ತಮ್ಮದೇ ಅಧಿಕಾರವೆಂದು ಬೀಗಿ, ಭ್ರಮಾಲೋಕದಲ್ಲಿ ತೇಲಿದ 'ಪರ್ಯಾಯ ಉತ್ಸವ'ದ ಪರಿ ಎಲ್ಲರ ಮನಸ್ಸಿನಿಂದ ಇನ್ನೂ ಮರೆಯಾಗಿಲ್ಲ. ಎಲ್ಲಿಂದ ಬಂತು ಎಂದೂ ಕೇಳದ ಬೇಕಾ ಬಿಟ್ಟಿ ವೈಭವೋಪೇತವಾಗಿ ಖರ್ಚು ಮಾಡಿದ ಕೋಟಿ ಗಟ್ಟಲೆ ಹಣ ಹರಿದಾಡಿದ ಈ ಉತ್ಸವವನ್ನು ಟಿ.ವಿ., ಪತ್ರಿಕೆಳಂತಹ ಸಮೂಹ ಮಾಧ್ಯಮಗಳು ಹಿಗ್ಗಿಸಿ, ಹಿಗ್ಗಿಸಿ ಬರೆದು 'ಭಕ್ತಿ'ಯ(?) ಮಹಾಪೂರ ಹರಿಸಿ ಕೃತಾರ್ಥರಾದವು. ಕೇಂದ್ರ-ರಾಜ್ಯಗಳ ಸಚಿವರು, ಮುಖ್ಯಮಂತ್ರಿಯಾದಿಯಾಗಿ ಸ್ವಾಮಿಗಳ ಪಾದತಲದಲ್ಲಿ ಅಣಿನೆರೆದು, ತಮ್ಮ 'ಸೇವೆ' ಸಲ್ಲಿಸಿ ಧನ್ಯರಾದರು. ಮಠಾಧೀಶರುಗಳೋ ತಮ್ಮದೇ ಇನ್ನು ಅಧಿಕಾರವೆಂದು ಬೀಗುತ್ತಾ, ಭ್ರಮಾಲೋಕದಲ್ಲಿ ತೇಲುತ್ತಿದ್ದಾರೆ. ಆದರೆ ಮಠಗಳಲ್ಲಿ ಏನೇನು ನಡೆಯುತ್ತಿದೆ, ಹಿಂದೆ ಏನು ನಡೆದಿದೆ ಎಂಬುದನ್ನು ಅಲ್ಲಿನ ಆಚಾರ-ವಿಚಾರಗಳ ಕೊಳೆಯನ್ನು ಪ್ರತ್ಯಕ್ಷ ಕಂಡು-ಅನುಭವಿಸಿ ಪತ್ರಿಕೆಗಾಗಿ ಬಯಲುಗೊಳಿಸಿದ್ದಾರೆ ಸಿ.ಆರ್.ಭಟ್‌ರವರು.


ಮಠಗಳ ಅಂತರಂಗ ಬಹಿರಂಗ





ಉಡುಪಿ ಮಠಗಳ ಹಾಗೂ ಪರ್ಯಾಯ ಉತ್ಸವಗಳ ಕುರಿತು ಸಮೂಹ ಮಾಧ್ಯಮಗಳಲ್ಲಿ ಇತ್ತೀಚಿಗೆ ವೈಭವೀಕೃತ ಸುದ್ದಿ ಸಮಾಚಾರಗಳು ಹೇರಳವಾಗಿ ಪ್ರಕಟವಾಗುತ್ತಿವೆ. ಅವುಗಳ ಅಂತರಂಗ-ಬಹಿರಂಗದ ಕೆಲವು ಜೀವ ವಿರೋಧಿ ವಿದ್ಯಾಮಾನಗಳನ್ನು ನನ್ನ ನೆನಪಿನ ಆಳದಿಂದ ಜನರ ನಡುವೆ ವಿಚಾರ ಮಂಥನಕ್ಕಾಗಿ ತೆರೆದಿಡುತ್ತಿದ್ದೇನೆ.

ಊಟದಲ್ಲಿ ಪಕ್ಷಪಾತ: ಸುಮಾರು 60 ವರ್ಷಗಳ ಹಿಂದಿನ ನೆನಪು. ಉಡುಪಿ ಮಠದಲ್ಲಿ ಕಡು ಬಡ ಬ್ರಾಹ್ಮಣರಿಗೆ ಭೋಜನ ಶಾಲೆ. ಈ ಊಟ ಸಾಮಾನ್ಯವಾಗಿ ಸಂಜೆ: 3-4 ಗಂಟೆಯಷ್ಟು ತಡವಾಗಿ ಬಡಿಸುತ್ತಿದ್ದರು. ಅದಕ್ಕಾಗಿ ಮುಂಜಾನೆ 9-10 ಗಂಟೆಯೊಳಗಾಗಿ ಭೋಜನ ಶಾಲೆಗೆ ಹೋಗಿ ಜಾಗ ಕಾದಿರಿಸಿಕೊಳ್ಳಬೇಕಾಗುತ್ತಿತ್ತು. ತಡವಾಗಿ ಬಂದವರಿಗೆ ಜಾಗ ಸಿಗದಿದ್ದರೆ ಊಟ ತಪ್ಪುತ್ತಿತ್ತು. ಊಟದ ಜಾಗ ಮತ್ತು ಎಲೆ ಪಡೆಯಲು ಬಡ ಬ್ರಾಹ್ಮಣರಲ್ಲಿ ಪ್ರತಿದಿನ ಭಾರಿ ಜಗಳಗಳಾಗುತ್ತಿದ್ದವು. ಅಲ್ಲಿಯ ಪಾರುಪತ್ಯಗಾರರು ಪುಕ್ಕಟೆ ಊಟಕ್ಕೆ ಬಂದವರನ್ನು ದರ್ಪದಿಂದ ಕೀಳಾಗಿ ನೋಡುತ್ತಿದ್ದರು. ಉಡುಪಿಯ ಸುತ್ತಮುತ್ತಲಿನ ಪ್ರದೇಶಗಳ ಬಡ ಬ್ರಾಹ್ಮಣ ವಿಧವೆಯರೂ ಸೇರಿದಂತೆ ಮಹಿಳೆಯರೂ, ಪುರುಷರೂ, ಮಕ್ಕಳೂ, ಮುದುಕರೂ ಈ ಒಪ್ಪತ್ತಿನ ಉಚಿತ ಊಟದಿಂದಲೇ ಬದುಕುತ್ತಿದ್ದರು. ಇವರಿಗೆ ಬಡಿಸುತ್ತಿದ್ದ ಊಟ ಬಹಳ ಕಳಪೆಯದು. ಮುಗ್ಗಲು ಅಕ್ಕಿಯ ಅನ್ನದ ದುರ್ವಾಸನೆಯಿಂದ ಅದನ್ನು ಹೊಟ್ಟೆಗೆ ತುರುಕುವುದೇ ಕಷ್ಟವಾಗುತ್ತಿತ್ತು. ಬಾಳೆಯ ದಿಂಡಿನ ಉಪ್ಪಿನಕಾಯಿ, ಪಲ್ಯ, ಬೇಳೆ ಹಾಕದ ಸಾರು- ಸಾಂಬಾರು, ಕೊನೆಯಲ್ಲಿ ನೀರು ಮಜ್ಜಿಗೆ ಬಡಿಸುತ್ತಿದ್ದರು. ಗುಳಿ ಬಿದ್ದಿರುವ ನೆಲದ ಮೇಲೆ ಹರಿದ ಬಾಳೆಯ ದಿಂಡಿನ ಎಲೆಯಲ್ಲಿ ಬಡಿಸಿದ ಊಟ ಕೈಗೆ ಎತ್ತಿಕೊಳ್ಳುತ್ತಿದ್ದಂತೆ ನೆಲಕ್ಕೆ ಹರಿದು ಹೋಗುತ್ತಿತ್ತು. ಊಟ ಮಾಡುವುದರಲ್ಲಿ ಹಿಂದೆ ಬಿದ್ದರೆ, ಊಟದ ಎಲೆ ತಿನ್ನಲು ನುಗ್ಗಿ ಬರುತ್ತಿದ್ದ ಮಠದ ದನಗಳ ಒದೆತಗಳಿಗೆ ಈ ಬಡವರು ಬಲಿಯಾಗುತ್ತಿದ್ದರು.



ಇದೇ ಮಠದಲ್ಲಿ ದಿನ ನಿತ್ಯ ಇನ್ನೂ ಎರಡು ವಿಧದ ಊಟಗಳಿದ್ದವು. ಒಂದು ಮೃಷ್ಟಾನ್ನ ಊಟ ಮಧ್ಯಾಹ್ನ 11-12 ಗಂಟೆಗೆ. ಹೆಸರೇ ಸೂಚಿಸುವಂತೆ, ಇದು ಭರ್ಜರಿ ಊಟ. ಇದು ಉಡುಪಿ ಶ್ರೀ ಕೃಷ್ಣನಿಗೆ ವಿಶೇಷ ಹರಕೆ ಸೇವೆಗಳನ್ನು ಸಲ್ಲಿಸಿದ ಸಂಪತ್ ಭರಿತ ಬ್ರಾಹ್ಮಣ ಭಕ್ತರಿಗೆ, ಅತಿಥಿಗಳಿಗೆ. ಘಮಘಮಿಸುವ ಅನ್ನ, ವಿವಿಧ ತರಕಾರಿಗಳ ಕೋಸಂಬರಿ, ಗೊಜ್ಜು, ಪಲ್ಯ, ಸಾಂಬಾರು, ಬೇಳೆ ಸಾರು, ಸಿಹಿ ಹಾಗೂ ಖಾರ ತಿಂಡಿ ತಿನಿಸುಗಳು, ಪಾಯಸ, ಮೊಸರು, ಈ ಊಟದಲ್ಲಿ ಬಡಿಸುತ್ತಿದ್ದರು. ಇನ್ನೊಂದು ಚೌಕಿ ಊಟ ಮೃಷ್ಟಾನ್ನ ಊಟ ಆದೊಡನೆ ನಡೆಯುತ್ತಿದ್ದ ಈ ಪರ್ಯಾಯ ಮಠದ ಸ್ವಾಮಿಗಳಿಗೆ, ಅವರ ಸ್ನೇಹ ಸಂಪಾದಿಸಿರುವ ಅಷ್ಟ ಮಠಗಳ ಕೆಲವು ಸ್ವಾಮಿಗಳಿಗೆ, ಸ್ವಾಮಿಗಳ ಪೂರ್ವಾಶ್ರಮದವರಿಗೆ- ಬಂಧು ಬಳಗದವರಿಗೆ ಮಠದ ಪಾರುಪತ್ಯಗಾರರಿಗೆ ಸಂಸ್ಕೃತ ಪಾರಂಗತ ಬ್ರಾಹ್ಮಣೋತ್ತಮರಾದ ಆಚಾರ್ಯರುಗಳಿಗೆ ಮತ್ತು ಸ್ವಾಮಿಗಳ ವಿಶೇಷ ಅತಿಥಿಗಳಿಗೆ ಈ ಊಟ ಮೀಸಲಾಗಿರುತ್ತಿತ್ತು. ಚೌಕಾಕಾರದ ವಿಶಾಲ ಕೊಠಡಿಯಲ್ಲಿ ನಡೆಯುವ ಈ ರಾಜಭೋಗದ ಔತಣವೇ ಚೌಕಿ ಊಟ. ಚೌಕಿಯಲ್ಲಿರುವ ಕಲ್ಲು ಕಂಬಗಳಿಗೆ ತಾಗಿ ಸ್ವಾಮಿಗಳ ಎದುರಿಗೆ ಪ್ರತಿಷ್ಠಿತ ಆಚಾರ್ಯರುಗಳಿಗೆ ವಿಶೇಷ ಸ್ಥಾನ ನೀಡಿ ಅವರನ್ನು ಕಂಬದ ಆಚಾರ್ಯರೆಂದೇ ಗುರುತಿಸಲಾಗುತ್ತಿತ್ತು. ಅವರಿಗೆ ಮತ್ತು ಸ್ವಾಮಿಗಳಿಗೆ ನೀರು ಕುಡಿಯಲು ಬೆಳ್ಳಿಯ ಲೋಟ ಮತ್ತು ತಂಬಿಗೆಗಳನ್ನು ಒದಗಿಸಲಾಗುತ್ತಿತ್ತು. ಇಲ್ಲಿಯ ಊಟ ಮೃಷ್ಟಾನ್ನ ಊಟಕ್ಕಿಂತಲೂ ಹೆಚ್ಚು ಶ್ರೇಷ್ಠವಾದುದು. ಎಲೆಯ ಬಗೆ ಬಗೆಯ ರುಚಿರುಚಿಯ ಮತ್ತು ವಿವಿಧ ಋತು ಮಾಸಗಳಿಗನುಗುಣವಾದ ಗೊಜ್ಜು, ಪಲ್ಯ, ಸಾರು ಸಾಂಬಾರು, ಹಪ್ಪಳ, ಶಂಡಿಗೆ, ಕೋಸಂಬರಿ, ಕಡುಬು ಹೋಳಿಗೆ, ಜಿಲೇಬಿ, ಚಿರೋಟಿ, ಖಾರ ತಿಂಡಿಗಳು ಪಾಯಸ, ಕೊನೆಗೆ ಗಟ್ಟಿ ಮೊಸರು ಬಡಿಸುತ್ತಿದ್ದರು. ಮೇಲಿಂದ ಮೇಲೆ ಒತ್ತಾಯದಿಂದ ಅನಿಯಮಿತವಾಗಿ ಬಡಿಸುವ ಆದರಾತಿಥ್ಯ ಅಲ್ಲಿ ಇರುತ್ತಿತ್ತು. ಸ್ವಾಮಿಗಳ ಹಾಗೂ ಸಂಸ್ಕೃತ ಪಂಡಿತರ ನಡುವೆ ವಿದ್ವತ್‌ಪೂರ್ಣ, ಆಧ್ಯಾತ್ಮಿಕ, ಜಗತ್ ಕಲ್ಯಾಣ ವಿಷಯಗಳ ಕುರಿತು ಚರ್ಚೆಗಳು ಊಟದ ಉದ್ದಕ್ಕೂ ನಡೆಯುತ್ತಿದ್ದವು. ಕೆಲವೊಮ್ಮೆ ಚರ್ಚೆಗಳಲ್ಲಿ ಇ.ಎಂ.ಎಸ್. ನಂಬೂದರಿ ಪಾಡ್ ರಂಥವರು ಕಮ್ಯೂನಿಸ್ಟರಾದರೂ ಸಂಸ್ಕೃತದಲ್ಲಿ ಮಹಾ ಪಂಡಿತರೆಂದು ತೃಪ್ತಿ ಪಟ್ಟು ಊಟದ ರುಚಿ ಚಪ್ಪರಿಸುತ್ತಿದ್ದರು. ಊಟದ ವೇಳೆಯಲ್ಲಿ ಆಗಾಗ ಸಂಸ್ಕೃತ ಶ್ಲೋಕಗಳ ಉದ್ಘೋಷಗಳು ಮತ್ತು ಕೊನೆಯಲ್ಲಿ "ಗೋವಿಂದಾ ಗೋವಿಂದಾ ಎಂಬ ಸಮೂಹ ಘೋಷಣೆ ಗಳು ಮೊಳಗುತ್ತಿದ್ದವು. ಬ್ರಾಹ್ಮಣರು ಊಟ ಮಾಡಿದ್ದು ಪರಮಾತ್ಮನಾದ ಗೋವಿಂದನಿಗೆ ಸಮರ್ಪಣೆ ಎಂಬ ಭಾವನೆಯಿಂದ ಉಣುವವರು ಆಗಾಗ ಗೋವಿಂದ ಗೋವಿಂದ ಎಂದು ಉದ್ಗರಿಸುತ್ತಿದ್ದರು. ತೃಪ್ತಿಯಿಂದ ತೇಗುತ್ತಿದ್ದರು.

ಉಡುಪಿಯ ಊಟ ಈಗ ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿದೆ. ಈಗಿನ ಪಂಚತಾರಾ ಹೋಟಲ್‌ಗಳಲ್ಲಿ ಮಂತ್ರಿ ಮಾಗಧರ ಪಂತಿಗಳಲ್ಲಿ 15-20 ಸುತ್ತುಗಳಲ್ಲಿ ಬಡಿಸುವ ಊಟಗಳಿಗೆ ಹೋಲುವ ಮೃಷ್ಟಾನ್ನ ಹಾಗೂ ಚೌಕಿ ಊಟಗಳು ಒಂದು ಗಂಟೆಗಿಂತಲೂ ಹೆಚ್ಚು ಕಾಲ ನಡೆಯುತ್ತಿದ್ದವು. ಈ ವಿಶೇಷ ಊಟಗಳ ನಂತರ ಎಲೆಗಳನ್ನು ಮಠದ ಹೊರಾಂಗಣದಿಂದ ಅತಿ ದೂರದಲ್ಲಿ ಅಸ್ಪೃಶ್ಯರಾಗಿ ಆಸೆಗಣ್ಣುಗಳಿಂದ ಮತ್ತು ಹಸಿದ ಹೊಟ್ಟೆಗಳಿಂದ ಕಾಯುತ್ತಿದ್ದ ಚಾತುರ್‌ವರ್ಣಗಳಿಗೂ ಸೇರದ ಪಂಚಮರಾದ ಕಡು ಬಡವರಾದ ಕೊರಗರ ಕುಟುಂಬಗಳ ಎದುರಿಗೆ ಬಿಸಾಡುತ್ತಿದ್ದರು. ಬೀದಿ ನಾಯಿಗಳೂ, ದನಕರುಗಳೂ, ಈ ಎಂಜಲು ಎಲೆಗಳನ್ನು ತಿನ್ನಲು ಕಚ್ಚಾಡುತ್ತಿದ್ದವು. ಅವುಗಳನ್ನು ಹೊಡೆದೋಡಿಸಿ ಕೊರಗರು ಎಲೆಗಳಲ್ಲಿ ಬ್ರಾಹ್ಮಣೋತ್ತಮರು ತಿಂದು ತೇಗಿ ಉಳಿದವುಗಳನ್ನು ಆರಿಸಿ ತೆಗೆದುಕೊಂಡು ಹೋಗುತ್ತಿದ್ದರು ಹೆಚ್ಚಾದ ಅನ್ನವನ್ನು ಬಿಸಿಲಲ್ಲಿ ಒಣಗಿಸಿ ಮುಂದಿನ ದಿನಗಳಲ್ಲಿ ಪುನ: ಬಿಸಿ ಮಾಡಿ ತಿನ್ನುತ್ತಿದ್ದರು.

ಈ ಎರಡು ಊಟಗಳ ನಂತರ ಭೋಜನ ಶಾಲೆಯಲ್ಲಿ ಬಡ ಬ್ರಾಹ್ಮಣರಿಗೆ ಊಟ ಬಡಿಸುತ್ತಿದ್ದರು. ಅಲ್ಲಿಯವರೆಗೆ ಅವರಿಗೆ ಬಾಳೆ ಎಲೆ ಸರಿಪಡಿಸುವುದು, ದೊನ್ನೆಗಳನ್ನು ಮಾಡುವುದು, ಬಾಳೆ ದಿಂಡಿನ ಎಲೆಗಳನ್ನು ಮಾಡುವುದು, ದೇವರ ಪೂಜೆಗೆ ಹತ್ತಿಯ ಬತ್ತಿಗಳನ್ನು ಮತ್ತು ಮಣ್ಣಿನ ಹಣತೆಗಳನ್ನು ತಯಾರಿಸುವುದು ಇತ್ಯಾದಿ ಹತ್ತಾರು ಬಿಟ್ಟಿ ಕೆಲಸಗಳನ್ನು ಕೊಡಲಾಗುತ್ತಿತ್ತು. ಅವರಿಗೆ ನೀಡುತ್ತಿದ್ದ ಕಳಪೆ ಊಟಗಳಿಗೆ ಪೂರಕವಾಗಿ ಯಾರಾದರೂ ಮನೆಗಳಿಂದ ಉಪ್ಪಿನಕಾಯಿ, ಗೊಜ್ಜು, ಮಜ್ಜಿಗೆ ತಂದು ಬಳಸಿದರೆ, ಮಠದ ಪಾರುಪತ್ಯಗಾರರು ಸಿಟ್ಟಿನಿಂದ ಕೆಂಡಮಂಡಲವಾಗಿ ಅವುಗಳನ್ನು ಕಸಿದುಕೊಂಡು ಗಟಾರಕ್ಕೆ ಚೆಲ್ಲುತ್ತಿದ್ದರು ಮತ್ತು ಮರುದಿನ ಪುಕ್ಕಟೆ ಊಟಕ್ಕೆ ಬರಬಾರದೆಂಧು ತಾಕೀತು ಮಾಡುತ್ತಿದ್ದರು. ಆಚಾರ್ಯ ಮಧ್ವರು ಜನರ ಗುಣಲಕ್ಷಣಗಳಿಗನುಗುಣವಾಗಿ ಜೀವಿಗಳ ವರ್ಗೀಕರಣ ಪ್ರತಿಪಾದಿಸಿದ್ದರು. ಆದರೆ,ಅವರ ಶಿಷ್ಯ ಪರಂಪರೆ ಮಠದ ಊಟಗಳಲ್ಲಿಯೇ ಈ ತಾರತಮ್ಯಗಳನ್ನು ಇನ್ನೂ ಮುಂದುವರೆಸಿದ್ದಾರೆ.

ಸ್ವಾಮಿಗಳ ಕಾಮನೆಗಳು, ಕಚ್ಚಾಟಗಳು: ಉಡುಪಿ ಮಠದ ಸ್ವಾಮಿಗಳನ್ನು ಹೆಚ್ಚಾಗಿ ಪೀಠಸ್ಥ ಸ್ವಾಮಿಗಳ ಪೂರ್ವಾಶ್ರಮದ ಕುಟುಂಬಗಳಿಗೇ ಸೇರಿದ ಬಾಲವಟುಗಳಿಂದ ಆಯ್ಕೆ ಮಾಡಲಾಗುತ್ತಿದೆ. ನಂತರ ಅವರಿಗೆ ವೇದಾಧ್ಯಯನ ಮಾಡಿಸಲಾಗುತ್ತದೆ. ಸ್ವಾಮಿಗಳು ಪ್ರಾಯಕ್ಕೆ ಬರುವವರೆಗೆ ಮತ್ತು ಹೆಚ್ಚಾಗಿ ಆ ನಂತರವೂ ಅವರ ಪೂರ್ವಾಶ್ರಮದ ತಂದೆ, ಅಣ್ಣ-ತಮ್ಮ, ಭಾವ, ಮುಂತಾದ ನಿಕಟ ಸಂಬಂಧಿಕರೇ ಮಠದ ಆಸ್ತಿ, ಆದಾಯ, ಸಂಪತ್ತು, ಸ್ಥಾನಮಾನಗಳ ಪಾರುಪತ್ಯ ವಹಿಸುತ್ತಾರೆ. ಸ್ವಾಮಿಗಳ ಬಂಧು- ಬಳಗದವರು ಆಪ್ತರು ಅವರವರ ಅಷ್ಟ ಮಠಗಳಲ್ಲಿ ರಾಜಭೋಗಗಳಿಂದ ಇರುತ್ತಾರೆ. ಮಠಗಳಿಗೆ ಪರ್ಯಾಯ ಉತ್ಸವಗಳಿಗೆ ಬೇಕಾದ ದವಸ ಧಾನ್ಯ, ತರಕಾರಿ, ಬಾಳೆ ಎಲೆ, ಹಾಲು-ತುಪ್ಪ, ಕಟ್ಟಿಗೆ, ಮುಂತಾದವುಗಳನ್ನು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ನೆರೆ ಜಿಲ್ಲೆಗಳಲ್ಲಿರುವ ಮಠಗಳ ಅಪಾರ ವ್ಯವಸಾಯ ಭೂಹಿಡುವಳಿಗಳಲ್ಲಿ ಚಾಲಗೇಣಿಗೆ (ಅಲ್ಪಾವಧಿಗೆ ಗೇಣಿಗೆ ವ್ಯವಸಾಯ ಮಾಡುವ ವಿಧಾನ) ವ್ಯವಸಾಯ ಮಾಡುತ್ತಿದ್ದ ಅಸಂಖ್ಯಾತ ಬಡ ರೈತರು ಬಿಟ್ಟಿಯಾಗಿ, ಪುಕ್ಕಟೆಯಾಗಿ ಒದಗಿಸುತ್ತಿದ್ದರು. ಸ್ವಾಮಿಗಳು ಮಹಾತ್ಯಾಗಿಗಳು, ಸಂಸಾರ ಸಾಗರದಿಂದ ಪಾರಾದವರು, ವೇದಪಾರಂಗತರು, ದೇವರ ಪೂಜೆಗೆಂದೇ ಅವತರಿಸಿದ ಮಹಾನುಭಾವರು ಎಂದು ಬಡ ಜನರ ಮುಂದೆ ಪೂಜ್ಯ ಭಾವನೆ ಮೂಡಿಸಲಾಗುತ್ತಿತ್ತು.

ಪಾಪ-ಪುಣ್ಯ, ಸ್ವರ್ಗ ನರಕ, ಉನ್ನತ ಜಾತಿಯಲ್ಲಿ ಪುನರ್‌ಜನ್ಮ ಇತ್ಯಾದಿ ವಿಚಾರಗಳನ್ನು ಇವರ ಮನದಾಳದಲ್ಲಿ ಇಳಿಸಿ ಸದಾ ತಮ್ಮ ವಿಧೇಯ ಗುಲಾಮರಾಗಿರುವಂತೆ ಮತ್ತು ಮಠಗಳು ತಮ್ಮನ್ನು ಶೋಷಿಸುತ್ತಿರುವುದನ್ನು ಬಡ ಜನರು ತಿಳಿಯದಂತೆ ನೋಡಿಕೊಳ್ಳಲಾಗುತ್ತಿತ್ತು. ಮಠಗಳ ಧರ್ಮ ಪ್ರಚಾರಗಳಿಂದ ಪ್ರಭಾವಿತರಾಗಿ ಶ್ರೀ ಕೃಷ್ಣನ ಭಕ್ತರಾಗಿ ಇವೆಲ್ಲವುಗಳನ್ನು ಬಿಟ್ಟಿಯಾಗಿ ಕೊಡುತ್ತಿರುವುದನ್ನು ಸ್ವಾಗತಿಸಲಾಗುತ್ತಿತ್ತು. ಆದರೆ, ತಪ್ಪಿದವರಿಗೆ ಮಠಗಳ ಪಾರುಪತ್ಯಗಾರರು ತಮ್ಮ ನಂಬಿಗಸ್ಥ ಬಂಟರಿಂದ ಹೆದರಿಸಿ, ಬೆದರಿಸಿ ಬಲಾತ್ಕಾರದಿಂದ ತಮ್ಮ ಬಿಟ್ಟಿ ಚಾಕರಿ ಮಾಡಿಸಿಕೊಳ್ಳುತ್ತಿದ್ದರು. ಒಕ್ಕಲೆಬ್ಬಿಸುವ ಮತ್ತು ಸಾವನ್ನೋವುಗಳಿಗೆ ಗುರಿಪಡಿಸುವ ಬೆದರಿಕೆ ಬಡ ರೈತರ

ಮಠಗಳ ಸುದೀರ್ಘ ಚರಿತ್ರೆಯಲ್ಲಿ ಅನೇಕ ಲೋಕಸೇವಾಸಕ್ತ ಸ್ವಾಮಿಗಳು ಭಕ್ತಿ ಪಂಥವನ್ನು ಸಾರಿ ಒಂದೇ ದೇವರಲ್ಲಿ ನಂಬಿಕೆ, ದೇವರ ಮುಂದೆ ಎಲ್ಲರೂ ಸಮಾನರು, ಜಾತಿ ಕುಲಗಳ ಬೇಧ ಭಾವ ಬಿಡುವುದು, ಸಹಬಾಳುವೆ, ನೈತಿಕತೆ, ಇತ್ಯಾದಿಗಳ ಕುರಿತು ಜನರಲ್ಲಿ ಅರಿವು ಮೂಡಿಸಿ, ಪಾಳೆಯಗಾರಿ ವ್ಯವಸ್ಥೆಯ ದೌರ್ಜನ್ಯಗಳನ್ನು ಎದುರಿಸಲೂ ಮತ್ತು ಸಹಿಸಿಕೊಳ್ಳಲು ಮನೋಧೈರ್ಯವನ್ನು ಬಡರೈತರಲ್ಲಿ ಮೂಡಿಸಿರಬಹುದು. ಆ ಮೂಲಕ ಅವರು ತಮ್ಮ ವ್ಯವಸಾಯ ವೃತ್ತಿಗೆ ನಿಷ್ಠರಾಗಿರುವಂತೆ ಮಾಡಿರಬಹುದು. ಆದರೆ, ಸ್ವಾತಂತ್ರ್ಯ ಹೋರಾಟದ ಉದ್ದಕ್ಕೂ ಮತ್ತು ನಂತರ ಆಧುನಿಕ ಭಾರತದ ನಿರ್ಮಾಣದಲ್ಲಿ ರಾಜ ಮಹಾರಾಜರಂತೆಯೇ ಈ ಮಠಾಧಿಪತಿಗಳೂ ಯಾವ ಗಣನೀಯ ಪಾತ್ರ ವಹಿಸದಿರುವುದು ಕಂಡು ಬಂದಿದೆ. ಪರಿಣಾಮವಾಗಿ, ಮಠಗಳೂ, ಪಾಳೆಯಗಾರಿ ವ್ಯವಸ್ಥೆಯ ಅಂಗ ಸಂಸ್ಥೆಗಳಾಗಿಯೇ ಉಳಿದವು. ಬ್ರಾಹ್ಮಣೇತರರಾದ ಕನಕದಾಸ, ಪುರಂದರದಾಸರಂತಹ ಭಕ್ತಿ ಶ್ರೇಷ್ಠರನ್ನು ಈ ಮಠಗಳು ತಮ್ಮ ಸಾಂಪ್ರದಾಯಕ ಚೌಕಟ್ಟನ್ನು ಬಿಟ್ಟು ಗುರುತಿಸಿ ಗೌರವಿಸದಿರುವುದು ಈಗ ಇತಿಹಾಸವಾಗಿದೆ. ಈ ಮಠಗಳ ಸ್ವಾಮಿಗಳ, ಪಾರುಪತ್ಯಗಾರರ ಚೌಕಿ ಊಟ ಹಾಗೂ ಐಷಾರಾಮ್ಯ ಜೀವನಗಳ ಪರಿಣಾಮವಾಗಿ ಸಂಭವಿಸುತ್ತಿದ್ದ ಕೀಳು ಕಾಮನೆಗಳ ಮತ್ತು ಕಚ್ಚಾಟಗಳ ಪ್ರಕರಣಗಳೇ ಹೆಚ್ಚಾಗಿ ಕೇಳಿಬರುತ್ತಿದ್ದವು. ಭೋಜನ ಶಾಲೆಯ ಪುಕ್ಕಟೆ ಊಟದಿಂದ ಬದುಕುತ್ತಿದ್ದ ಬಡ ಬ್ರಾಹ್ಮಣ ವಿಧವೆಯರೂ ಸೇರಿದಂತೆ ಮಹಿಳೆಯರು ಮತ್ತು ಮಠಗಳ ವೈಭವೀಕೃತ ಜೀವನಕ್ಕೆ, ಪರ್ಯಾಯ ಉತ್ಸವಗಳಿಗೆ ಬಿಟ್ಟಿ ದುಡಿದು ತಂದು ಹಾಕುತ್ತಿದ್ದ ಬಡ ರೈತರ ಮಹಿಳೆಯರು ಸ್ವಾಮಿಗಳ ಹಾಗೂ ಪಾರುಪತ್ಯಗಾರರ ಕಾಮನೆಗಳಿಗೆ ಬಲಿಯಾಗುತ್ತಿದ್ದರು. ಮಠದ ಒಳಗೂ ಹೊರಗೂ ಇವರ ಅನೈತಿಕ ಸಂಬಂಧಗಳದ್ದೇ ಗುಸುಗುಸು ಸುದ್ದಿಗಳು. ಸ್ವಾಮಿಗಳ ಹಾಗೂ ಪಾರುಪತ್ಯಗಾರರ ಅನೈತಿಕ ಸಂಬಂಧದ ಮಕ್ಕಳುಗಳನ್ನು ಗುರುತಿಸಿ ಲೇವಡಿ ಮಾಡುತ್ತಿದ್ದರು. ಮನೆಗಳಲ್ಲಿ ದೊಡ್ಡವರು ಸ್ವಾಮಿಗಳ, ಪಾರುಪತ್ಯಗಾರರ ಕುರಿತು ಇಂತಹ ವಿಷಯಗಳನ್ನು ಮಾತಾಡಬಾರದೆಂದು ಮಕ್ಕಳಿಗೆ ಎಚ್ಚರಿಕೆ ನೀಡುತ್ತಿದ್ದರು.

ನದಿ ಮೂಲ ಋಷಿಮೂಲ ಶೋಧಿಸಬಾರದೆಂಬ ನಂಬಿಕೆ!

ಆಧುನಿಕ ಯುಗದಲ್ಲಿ ಮಠಗಳು ತಮ್ಮ ಧನಾತ್ಮಕ ಪಾತ್ರವನ್ನು ಕಳೆದುಕೊಳ್ಳುತ್ತಿರುವುದನ್ನು ಗಮನಿಸಿ, ಕಳೆದ ಐದಾರು ದಶಕಗಳಲ್ಲಿ ಉಡುಪಿ ಮಠಗಳ ಹಲವು ಸ್ವಾಮಿಗಳು ಸನ್ಯಾಸ ತೊರೆದು ಸಾಮಾನ್ಯ ಗೌರವಸ್ಥ ಸದಸ್ಯರಾಗಿರುವುದು ನಮಗೆ ತಿಳಿದಿದೆ. ಆದರೆ ಇದೇ ಕಾಲಘಟ್ಟದಲ್ಲಿ ಮಠಗಳ ಸ್ವಾಮಿಗಳು ತಮ್ಮ ಪೂಜಾ ಹಕ್ಕು, ಪೀಠದ ಹಕ್ಕು, ಆಸ್ತಿ ಅಧಿಕಾರದ ಹಕ್ಕುಗಳ ಕುರಿತು ಹಿಂದೆ ಇಂಗ್ಲೇಂಡಿನ ಪ್ರಿವಿ ಕೌನ್ಸಿಲ್, ನಂತರ ಭಾರತದ ಹೈಕೋರ್ಟ್- ಸುಪ್ರೀಂ ಕೋರ್ಟ್‌ಗಳಲ್ಲಿ ಧೀರ್ಘಕಾಲ ಭಾರಿ ಹಣ ಹರಿಸಿ ಪರಸ್ಪರ ಕಚ್ಚಾಟಗಳಲ್ಲಿ ತೊಡಗಿರುವುದನ್ನು ಗಮನಿಸಬಹುದು. ಈ ಮಠಗಳು ನಡೆಸುತ್ತಿರುವ ಸಿನಿಮಾ ಮಂದಿರ, ಕಲ್ಯಾಣ ಮಂಟಪ, ಲಾಭದಾಯಕ ಉದ್ದಿಮೆ, ವ್ಯವಸಾಯ ಭೂಮಿ, ಶಿಕ್ಷಣ ಸಂಸ್ಥೆ, ಧಾರ್ಮಿಕ ದತ್ತಿ ಮುಂತಾದವುಗಳ ಕುರಿತು ಹಾವು-ಮುಂಗುಸಿ ಅಂತಹ ಕಚ್ಚಾಟಗಳು ನಡೆಯುತ್ತಿವೆ. ಕೆಲವೊಮ್ಮೆ ಭಕ್ತರಿಗೆ ಬೇಸರ ಬಂದು ಪಂಚರ ಸಮಕ್ಷಮ ಸ್ವಾಮಿಗಳನ್ನು ಮತ್ತು ಪಾರುಪತ್ಯಗಾರರನ್ನು ಬದಲಾಯಿಸಿರುವ ಪ್ರಕರಣಗಳೂ ಇವೆ. ಸ್ವಾಮಿಗಳು ಹರಿಜನ ಕೇರಿಗೆ ಹೋಗಬಹುದೇ, ಅಂತರ್‌ಜಾತಿ ಭೋಜನ ಕೂಟ ಏರ್ಪಡಿಸಬಹುದೇ, ವಿದೇಶಿ ಪ್ರಯಾಣ ಮಾಡಬಹುದೇ ಎಂಬ ಕುರಿತು ಭೀಕರ ವಾಗ್‌ಯುದ್ಧಗಳು ನಡೆಯುತ್ತಿವೆ. ಇವರೊಳಗಿನ ಜಗಳಗಳಿಂದ ಅಷ್ಟ ಮಠಗಳ ಸ್ವಾಮಿಗಳಲ್ಲಿಯ ಕೆಲವರು ಪರ್ಯಾಯ ಉತ್ಸವಗಳನ್ನು ಬಹಿಷ್ಕರಿಸಿದ ಪ್ರಕರಣಗಳು ಇವೆ. ಸ್ವಾಮಿಗಳು ಪರ್ಯಾಯ ಬಿಟ್ಟು ಹೋಗುವಾಗ ಇನ್ನೊಬ್ಬ ಸ್ವಾಮಿಯ ಸರದಿ ಸುಗಮವಾಗದಂತೆ ದ್ವೇಷಾಸೂಯೆಗಳಿಂದ ಅಡಿಗೆ ಒಲೆಗಳನ್ನು ಕೆಡೆದು ಹಾಕುವ, ಶ್ರೀ ಕೃಷ್ಣ ದೇವಸ್ಥಾನದ ಬೀಗದ ಕೈ ಕೊಡದಿರುವ ಕೀಳು ಮಟ್ಟದ ಜಗಳಕ್ಕೂ ಇಳಿಯುತ್ತಾರೆ. ಈ ವರ್ಷ ಪರ್ಯಾಯ ಉತ್ಸವಗಳಿಗೆ ವಿದೇಶಿ ಪ್ರಯಾಣ ಮಾಡಿ ಬಂದ ಶಿರೂರು ಮಠದ ಸ್ವಾಮಿಗಳನ್ನು ಪ್ರಗತಿಪರ ಎಂದೆನಿಸಿದ ಪೇಜಾವರ ಸ್ವಾಮಿಗಳ ಏರಿಂಡಿಯಾದಲ್ಲಿಯೂ ಬಹಿಷ್ಕರಿಸಲಾಗುತ್ತಿದೆ.


ಸಂಪ್ರದಾಯದ ಸಂಕೋಲೆಗಳು:

(ಮುಂದಿನ ವಾರಕ್ಕೆ)

ಹಗರಿಬೊಮ್ಮನ ಹಳ್ಳಿಯ ಹಣೆಬರಹ ದಾವೋಸ್‌ನಲ್ಲಿ ಬರೆದರೇ?

ಕಳೆದವಾರ ದಾವೋಸ್ ಸುದ್ದಿಯಲ್ಲಿತ್ತು. ಕೃಷ್ಣ, ಚಂದ್ರಬಾಬು ನಾಯ್ಡು, ಯಶವಂತ ಸಿನ್ಹಾ ಎಲ್ಲಾ ಅಲ್ಲಿ ಹೋಗಿದ್ದರು. ದೇಶದ, ರಾಜ್ಯದ ಬೆಳವಣಿಗೆ ಹೇಂಗಾಗಬೇಕು? ಏನಾಗಬೇಕು? ಎಂದು ಅಲ್ಲಿ ಸೇರಿದ್ದ ಜಗತ್ತಿನ ಉದ್ಯಮಿಗಳು ಇವರಿಗೆ ಹೇಳಿದರಂತೆ. ಇವರು ಕೇಳಿಕೊಂಡು ಬಂದು ನಮಗೆ ಹೇಳುತ್ತಿದ್ದಾರೆ. ಏನಿದು ಹಗರಿಬೊಮ್ಮನಹಳ್ಳಿಯ ಹಣೆಬರಹ ದಾವೋಸ್‌ನಲ್ಲಿ ನಿರ್ಧರಿಸುವುದು? ದಾವೋಸ್ ಎಲ್ಲಿದೆ? ದಾವೋಸ್‌ನಲ್ಲಿ ಏನು ನಡೆಯಿತು? ನಮ್ಮ ಬೆಳವಣಿಗೆಯ ಬಗ್ಗೆ ದೈವೋಸ್‌ನಲ್ಲಿ ನಿರ್ಧರಿಸುವವರು ಯಾರು? ಎನ್ನುವ ಬಗ್ಗೆ ತಿಳಿಸುವ ಲೇಖನ.

ದಾವೋಸ್ ಸ್ವಿಡ್ಜರ್‌ಲ್ಯಾಂಡ್‌ನ 'ಯುರೋಪಿನ ಹಿಮಾಲಯ' ಎಂದು ಹೆಸರಾದ ಆಲ್ಪ್ಸ್ ಪರ್ವತದ ಸೆರಗಿನಲ್ಲಿರುವ ಚಿಕ್ಕ ಪಟ್ಟಣ, ಅಲ್ಲಿ ಪ್ರತಿ ವರ್ಷ ಈ ಹೊತ್ತಿಗೆ 'ವಿಶ್ವ ಆರ್ಥಿಕಫೋರಂ' ಎಂಬ ಸಂಘಟನೆ ಒಂದು ವಾರ್ಷಿಕ ಮೇಳ ನಡೆಸುತ್ತದೆ. ಇದು ಜಗತ್ತಿನ ದೈತ್ಯ ಕಂಪನಿಗಳ ಉದ್ಯಮಿಗಳನ್ನು, ರಾಜಕಾರಣಿಗಳನ್ನು, ಇತರ ಪ್ರಮುಖರನ್ನು ಕರೆಯುತ್ತದೆ. ಅಲ್ಲಿ ಜಗತ್ತಿನ ಪ್ರಮುಖ ಕಂಪನಿಗಳು, ಉದ್ಯಮಿಗಳು ಸೇರಿ ಎಲ್ಲಿ ಬಂಡವಾಳ ಹೂಡುವುದು ಎಂಬ ನಿರ್ಧಾರಕ್ಕೆ ಬರುತ್ತಾರೆ. ಪರಸ್ಪರ ವಿಚಾರವಿನಿಮಯ ಮಾಡಿಕೊಳ್ಳುತ್ತಾರೆ. ಯಾವ ದೇಶ, ಯಾವ ಪ್ರದೇಶ ಬಂಡವಾಳ ಹೂಡಲು ಪ್ರಶಸ್ತ ಎನ್ನುವುದರ ಬಗ್ಗೆ ಅಂದಾಜು ಮಾಡುತ್ತಾರೆ. ಇದು ವಿಶ್ವದ ಎಲ್ಲಾ ದೇಶಗಳು ಪ್ರತಿನಿಧಿಸಲ್ಪಟ್ಟಿರುವ ಸಂಸ್ಥೆ ಏನಲ್ಲ. ಜಗತ್ತಿನ ಜನರ, ದೇಶ-ಪ್ರದೇಶಗಳ ಬೆಳವಣಿಗೆ ಬಗ್ಗೆ ಯೋಚಿಸುವ ಸಂಸ್ಥೆ ಏನಲ್ಲ. ಉದ್ಯಮಿಗಳು ಅವರ ಕಂಪನಿಗಳ ಬೆಳವಣಿಗೆ ಮಾಡುವುದು, ಲಾಭ ಹೇಗೆ ಹೆಚ್ಚಿಸುವುದು? ಎಂಬ ಬಗ್ಗೆ ದಾವೋಸ್‌ನ ಸುಂದರ ಹಿಮಾಚ್ಛಾದಿತ ಪ್ರಕೃತಿಯನ್ನು ಅಸ್ವಾದಿಸುತ್ತಾ ನಿರ್ಧರಿಸುವ ಸಂಸ್ಥೆ.



ದಾವೋಸ್‌ನಲ್ಲಿ ಪ್ರತಿಭಟನಾಕಾರರನ್ನು ಎದುರಿಸಲು ಸಜ್ಜಾಗಿರುವ ಪೋಲೀಸ್

ಕೃಷ್ಣರಿಂಗೇನು ಕೆಲಸ ದಾವೋಸ್‌ನಲ್ಲಿ?

ಹಾಗಾದರೆ ಕೃಷ್ಣ, ಚಂದ್ರಬಾಬು ನಾಯ್ಡು, ಯಶವಂತ ಸಿನ್ಹಾಗಳಿಗೆ ಏನು ಕೆಲಸ ಅಂದಿರಾ? ಮೊದಲನೆಯದಾಗಿ ತಾವು ಹೋಗಬೇಕು ಅಂತ ನಿರ್ಧಾರ ಮಾಡಿ ಹೋಗುವುದಲ್ಲ. ಈ ಫೋರಂ ದೊಡ್ಡ ಉದ್ಯಮಿಗಳ, ಕಂಪನಿಗಳ ಬೆಳವಣಿಗೆ ಸಹಾಯ ಮಾಡಬಲ್ಲವರು ಯಾರು ಎಂದು ಗುರುತಿಸಿ ಅಂತಹವರನ್ನು ಅಲ್ಲಿಗೆ ಆಹ್ವಾನಿಸುತ್ತಾರೆ. ಅಂದರೆ ಅವರ ಉದ್ಯಮದ, ಕಂಪನಿಯ ಬಂಡವಾಳ ಹೂಡಲು ಪ್ರಶಸ್ತವಾದ ಪರಿಸರ ನಿರ್ಮಾಣ ಮಾಡಬಲ್ಲವರನ್ನು ಕರೆಯುತ್ತಾರೆ. ನೀವು ಏನು ಸಹಾಯಮಾಡ್ತೀರಿ? ಅವರು ನಿಮಗಿಂತ ಹೆಚ್ಚು ಸಹಾಯಮಾಡ್ತಾರಲ್ಲ? ನಿಮ್ಮದು ಅವರಿಗಿಂತ ಕಡಿಮೆ? ಎಂಬ ಚೌಕಾಸಿ ನಡೆಯುವ ಈ ಸಭೆ, ಈ ದಾವೋಸ್‌ನಲ್ಲಿ ಫೋರಂನ ಸಭೆ 90ರ ದಶಕದಲ್ಲಿ ಭಾರತದಲ್ಲಿ ಮತ್ತು ಇತರ ದೇಶಗಳಲ್ಲಿಯೂ 'ಜಾಗತೀಕರಣ' ಅಥವಾ ವಿಶ್ವಬ್ಯಾಂಕ್-ಐಎಂಎಫ್‌ನ ನೀತಿಗಳಂತೆ ಬಹುರಾಷ್ಟ್ರೀಯ ಕಂಪನಿ - ನಿರ್ದೇಶಿತ ಬೆಳವಣಿಗೆ ಆರಂಭವಾದ ಮೇಲೆ ಅತ್ಯಂತ ಪ್ರಾಮುಖ್ಯತೆ ಪಡೆದಿದೆ. ಯಾಕೆಂದರೆ ಈಗ ಭಾರತದಲ್ಲಿ ಮುಂದಿನ ಐದು ವರ್ಷಗಳಲ್ಲಿ ಯಾವ ಕ್ಷೇತ್ರದಲ್ಲಿ, ಯಾವ ಪ್ರದೇಶದಲ್ಲಿ ಯಾವ ರೀತಿಯ ಬೆಳವಣಿಗೆ ಆಗಬೇಕು? ಎಷ್ಟು ಬಂಡವಾಳ ಹೂಡಬೇಕು? ಎಂದು ನಿರ್ಧರಿಸುವುದು ಜನ ಆರಿಸಿದ ರಾಜ್ಯ ಅಥವಾ ಕೇಂದ್ರ ಸರ್ಕಾರವಲ್ಲ, ಪಾರ್ಲಿಮೆಂಟ್, ವಿಧಾನಸಭೆಗಳು, ಯೋಜನಾ ಆಯೋಗ ಸಹ ಅಲ್ಲ. ಇದನ್ನು ನಿರ್ಧರಿಸುವುದು ಬಹುರಾಷ್ಟ್ರೀಯ ಕಂಪನಿಗಳು. ಅವರ ನಿರ್ಧಾರಗಳನ್ನೆಲ್ಲಾ ಸಂಯೋಜಿಸುವುದು ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳು.

ನಮ್ಮ ಮುಖ್ಯಮಂತ್ರಿ ಕೃಷ್ಣರನ್ನು ಕರೆದರು ಎಂದು ಹೆಮ್ಮೆಪಡಬೇಡವೆ? ದೇಶದ ಅರ್ಥಮಂತ್ರಿ ಬಿಟ್ಟರೆ ಕರ್ನಾಟಕ, ಆಂಧ್ರದ ಮುಖ್ಯಮಂತ್ರಿಗಳನ್ನು ಕರೆದಿದ್ದಾರೆ ಎಂಬುದರ ಅರ್ಥ, ಅವರ ದೃಷ್ಟಿಯಿಂದ ಕರ್ನಾಟಕ - ಆಂಧ್ರಗಳು ಅವರ ಬಂಡವಾಳ ಹೂಡಿಕೆಗೆ ಪ್ರಶಸ್ತವಾಗಿದೆ, ಅಲ್ಲಿ ಅತ್ಯಂತ ಹೆಚ್ಚು ಸವಲತ್ತು ಸಿಗುತ್ತದೆ ಎಂದರ್ಥ. ಕರ್ನಾಟಕ - ಆಂಧ್ರದ ಹಿಂದುಳಿದ ಪ್ರದೇಶ, ಕ್ಷೇತ್ರಗಳನ್ನು ಬೆಳೆಸಲು ಆಸಕ್ತಿ ಇದೆ ಎಂದರ್ಥವಲ್ಲ. ಆದರೆ ಈ ರೀತಿ ಕರೆಯುವಾಗಲೇ ಪಶ್ಚಿಮ ಬಂಗಾಳ, ಕೇರಳ, ಉತ್ತರ ಪ್ರದೇಶ, ರಾಜಸ್ಥಾನ, ಒರಿಸ್ಸಾಗಳಲ್ಲಿ ಬಂಡವಾಳಹೂಡಿಕೆ ಬೆಳವಣಿಗೆಯಲ್ಲಿ ನಮಗೆ ಆಸಕ್ತಿ ಇಲ್ಲ ಅಥವಾ ಅವರು ಕೊಟ್ಟಿರುವ ಸವಲತ್ತುಗಳು ಸಾಲದು ಎಂತಲೂ ಅರ್ಥ. ಇದು ನಮ್ಮ ದೇಶದ ಯೋಜಿತ ಬೆಳವಣಿಗೆ ಮೇಲೆ ಎಂತಹ ಪ್ರಭಾವ ಬೀರಿತು ಎಂದು ಅಂದಾಜು ಮಾಡಬಹುದು.

ದಾವೋಸ್ ಸಿಯಾಟಲ್‌ಗೆ ಪರಿಹಾರ

ಈ ಬಾರಿಯ ದಾವೋಸ್ ಮೇಳ ಇನ್ನಷ್ಟು ಕುತೂಹಲ ಕೆರಳಿಸಿತ್ತು. ಹಲವು ಕಾರಣಗಳಿಗೆ ಜಗತ್ತಿನ ಜನಸಾಮಾನ್ಯರ ಬೆಳವಣಿಗೆಗೆ ಅನುಕೂಲವಾದ ನಿರ್ಧಾರಗಳು ಬಂದಾವು? ಎಂಬ ನಿರೀಕ್ಷೆಯಂತೂ ಇದರಲ್ಲಿ ಖಂಡಿತಾ ಸೇರಿಲ್ಲ. ಮೊದಲನೆಯದಾಗಿ 'ಜಾಗತೀಕರಣ' ಮಾದರಿಯ ಬೆಳವಣಿಗೆಯನ್ನು ಹೆಚ್ಚಿನ ದೇಶದ ಆಳರಸರು ಒಪ್ಪಿಕೊಂಡಿರಬಹುದು. ಆದರೆ ಅಭಿವೃದ್ಧ ದೇಶಗಳು ಸೇರಿದಂತೆ ಎಲ್ಲಾ ದೇಶಗಳ ದುಡಿಯುವ ಜನ ಪ್ರಶ್ನಿಸುತ್ತಿದ್ದಾರೆ. ಅದರ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಸಿಯಾಟಲ್‌ನಲ್ಲಿ ಇದು ಸ್ಪಷ್ಟವಾಗಿ ಕಂಡು ಬಂದಿತ್ತು. 'ಜಾಗತೀಕರಣ' ಜನರ ಹಿತಾಸಕ್ತಿಗಳ ಕಾಪಾಡಬಲ್ಲ ಬೆಳವಣಿಗೆ ಮಾದರಿ ಎಂದು ನಂಬಿದ್ದ ಹಲವರ ಭ್ರಮೆ ನಿರಸನವಾಗುತ್ತಿದೆ.

'ಜಾಗತೀಕರಣ'ದ ವಿರುದ್ಧ ಎಲ್ಲೆಡೆ ಏಳುತ್ತಿರುವ ಪ್ರತಿಭಟನೆಯ ಅಲೆ ಕಂಡು ಈ ದೈತ್ಯ ಕಂಪನಿಗಳ ಮಾಲಿಕರಿಗೆ ಭಯವಾಗಿದೆ. 'ಜಾಗತೀಕರಣ' ಹಲವು ದೇಶಗಳಲ್ಲಿ ಸಾಮಾಜಿಕ ಆಸ್ಫೋಟಗೊಂಡಿತು. ಹಲವು ದೇಶಗಳ ಪ್ರತಿಭಟನೆ, ಆಸ್ಫೋಟಗಳ ನಡುವೆ ಸಂಯೋಜನೆ ಸಾಧ್ಯವಾದರೆ ವಿಶ್ವ ಬಂಡವಾಳಶಾಹಿ ವ್ಯವಸ್ಥೆ ಕುಸಿದು ಬಿದ್ದೀತು ಎಂಬ ಭಯ ಇವರೆಲ್ಲರಿಗೂ ಇದೆ. ಸಿಯಾಟಲ್‌ನಲ್ಲಿ ವಿಶ್ವವಾಣಿಜ್ಯದ ಬಗ್ಗೆ ಅಭಿವೃದ್ಧ ದೇಶಗಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಳರಸರ ನಡುವೆ ಬಿದ್ದು ಹೋದ ಸಂವಾದ ಮುಂದಕ್ಕೆ ಒಯ್ಯಲು ಸಾಧ್ಯವಾದೀತೆ ಎಂಬ ಆಸೆ ಹಲವರಿಗಿತ್ತು. ಉದ್ಯಮಿಗಳಿಗೆ ಅಭಿವೃದ್ಧ ದೇಶಗಳ ಆಳರಸರಿಗೆ ತಮ್ಮ ನಿಲುವಿಗೆ ಅಭಿವೃದ್ಧಿಹೊಂದುತ್ತಿರುವ ದೇಶಗಳ ಆಳರಸರಲ್ಲಿ ಮುಗಿಸಬಹುದು ಎಂಬ ಆತ್ಮವಿಶ್ವಾಸ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಳರಸರಲ್ಲಿ, ಉದ್ಯಮಿಗಳು-ಅಭಿವೃದ್ಧ ದೇಶಗಳ ಆಳರಸರು ತಮ್ಮ ಕೆಲವಾದರೂ ಒತ್ತಾಯಗಳಿಗೆ ಕಿವಿಕೊಟ್ಟಾರು ಎನ್ನು ಆಸೆ.

> **ಮುಕ್ತ ಮಾರುಕಟ್ಟೆ ಕೋಳಿಗೂಡಿನಲ್ಲಿ ತೋಳ ಬಿದ್ದಂತೆ**
>
> *ಅಪ್ಪಟ ಮುಕ್ತ- ಮಾರುಕಟ್ಟೆ ಆರ್ಥಿಕವೆಂದರೆ ಕೋಳಿಗೂಡಿಗೆ ತೋಳವನ್ನು ಬಿಟ್ಟಂತೆ. ಕೋಳಿಗಳಂತೂ ಇದನ್ನು ಖಂಡಿತ ಇಷ್ಟ ಪಡುವುದಿಲ್ಲ. ತೋಳಗಳಿಗೂ ಒಳ್ಳೆಯದಾಗಲಿಕ್ಕಿಲ್ಲ ಇದು. ಯಾಕೆಂದರೆ ಎಲ್ಲಾ ಕೋಳಿಗಳನ್ನು ಒಮ್ಮೆಗೆ ತಿಂದು ಹಾಕಿಬಿಟ್ಟರೆ ಮುಂದೆ ತೋಳಗಳು ಉಪವಾಸ ಸಾಯಬೇಕಾದಿತು.*
>
> **ದಾವೋಸ್‌ನಲ್ಲಿ ಫ್ರೆಂಚ್ ದೈತ್ಯಕಾರು ಕಂಪನಿ ಲೆನಾಪ್ಟನ್ ಮುಖ್ಯಸ್ಥ ಲೂಯಿ ಶ್ವೆತ್ಸರ್ ಉದ್ಗಾರ.**

ದಾವೋಸ್ ಸಾಮಾನ್ಯವಾಗಿ ಇಂತಹ ಚರ್ಚೆ ನಡೆಯುವ ಅಲ್ಲಿವಾದರೂ ಇಂತಹ ನಿರೀಕ್ಷೆ ಹಾವರಿಸಿತ್ತು.

ಸಿಯಾಟಲ್ ಘರ್ಷಣೆ ಮುಂದುವರಿಕೆ

ಆದರೆ ಇಂತಹುದೇನೂ ನಡೆಯಲಿಲ್ಲ. ಬದಲಿಗೆ ಸಿಯಾಟಲ್‌ನಲ್ಲಿ (ವಿಶ್ವ ವಾಣಿಜ್ಯ ಸಂಘಟನೆ - WTO ಸಮ್ಮೇಳನದ ಒಳಗೂ ಹೊರಗೂ) ನಡೆದ ಘರ್ಷಣೆ ಮುಂದುವರೆಯಿತು. ಸಿಯಾಟಲ್‌ನಂತೆ ದಾವೋಸ್‌ನಲ್ಲೂ ಹಿಂದೆಂದೂ ಕಾಣದ ಭಾರೀ ಪ್ರತಿಭಟನಾ ಪ್ರದರ್ಶನಗಳಾಗಿ ನಡೆದವು. ಪ್ರತಿಭಟನಾಕಾರರು 'ಜಾಗತೀಕರಣ' ಜಗತ್ತಿನ ಎಲ್ಲಾ ದೇಶಗಳ ಜನರ ಬಾಳನ್ನು ಬೆಂಗಾಡು ಮಾಡುತ್ತಿರುವುದತ್ತ ಗಮನ ಸೆಳೆದರು. ಮುಖ್ಯ ಪ್ರತಿಭಟನಾಕಾರರು ಫ್ರೆಂಚ್ ಮತ್ತು ಇಟಲಿಯ ರೈತರಾಗಿದ್ದರು. 40 ಕಿ.ಮೀ. ದೂರದಲ್ಲಿ ರೈತರ ಬಸ್ಸುಗಳನ್ನು ತಡೆದರೂ ಇಳಿದು ಬೇರೆ ವಾಹನಗಳಲ್ಲಿ ಬಂದು ಸೇರಿದರು. ಪೊಲೀಸರು ಅಶ್ರುಸೆಲ್‌ಗಳನ್ನು ಬಳಸಿದರು. ಅಮೆರಿಕದ ಅಧ್ಯಕ್ಷ ಕ್ಲಿಂಟನ್ ವಿಶೇಷವಾಗಿ ಅತ್ಯಂತ ಹೆಚ್ಚಿನ ಪ್ರತಿಭಟನೆ ಎದುರಿಸಬೇಕಾಯಿತು.

ದಾವೋಸ್ ಮೇಳದ ಒಳಗೂ ಸಿಯಾಟಲ್‌ನ ಘರ್ಷಣೆ ಮುಂದುವರೆಯಿತು. ಬ್ರಿಟನ್ ಪ್ರಧಾನಿ ಬ್ಲೇರ್ ಮತ್ತು ಅಮೇರಿಕದ ಅಧ್ಯಕ್ಷ ಕ್ಲಿಂಟನ್ ಸಿಯಾಟಲ್‌ನಲ್ಲಿ ಮುರಿದು ಬಿದ್ದ ಸಂವಾದ ಮುಂದುವರೆಸಬೇಕು. ಮೂರನೇ ಜಗತಿನ ದೇಶಗಳ ರಫ್ತಿನ ಮೇಲೆ ಇನ್ನಷ್ಟು ಪ್ರತಿಬಂಧ ಹೇರುವ ಮತ್ತು ಕಾರ್ಮಿಕ- ಸಾಮಾಜಿಕ ವಿಷಯಗಳನ್ನು ವಾಣಿಜ್ಯದ ಜತೆ ತಳಕು ಹಾಕುವುದರ ಬಗ್ಗೆ ಚರ್ಚೆ ಮುಂದುವರೆಸಬೇಕು ಎಂದು ಪುನಃ ಪ್ರತಿಪಾದಿಸಿದರು. ಅಂದರೆ ಸಿಯಾಟಲ್‌ನ ತಮ್ಮ ಹಠವನ್ನು ಮುಂದುವರೆಸಿದರು. ಮೂರನೇ ಜಗತ್ತಿನ ದೇಶಗಳು ತಮ್ಮ ರಫ್ತಿನ ಮೇಲೆ ಹೆಚ್ಚಿನ ಪ್ರತಿಬಂಧ ಹೇರುವ ಹೊಸ ವಿಷಯಗಳ ಚರ್ಚೆಯನ್ನು ವಿರೋಧಿಸಿದರು. ಈಗಾಗಲೇ ಅಂಗೀಕರಿಸಿದ 'ಜಾಗತೀಕರಣ' ಕ್ರಮಗಳು ತಮ್ಮ ದೇಶಗಳ ಮೇಲೆ ಬೀರಿದ ದುಷ್ಪರಿಣಾಮಗಳ ಬಗ್ಗೆ ವಿಮರ್ಶೆ ಆಗಬೇಕೆಂದು ವಾದಿಸಿದರು. ಇದು ಸಮಾಜವಾದ ಮುಂದುವರಿಕೆಯಾಗಿತ್ತು.


ದಾವೋಸ್ ಈ ದಿಕ್ಕಿನಲ್ಲಿ ಏನೂ ಸಾಧಿಸಲಿಲ್ಲ ಎಂಬುದನ್ನು ವಿಶ್ವವಾಣಿಜ್ಯ ಸಂಘಟನೆಯ ಡೈರೆಕ್ಟರ್ ಜನರಲ್ ಮೈಕೆಲ್‌ಮೂರ್ ದಾವೋಸ್ 'ಜಾಗತಿಕರಣಕ್ಕೆ' ಕೆಂಪುದೀಪದ ಬದಲು ಹಳದಿ ದೀಪ ತೋರಿಸದೆ, ಹಸಿರು ದೀಪ ತೋರಿಸಿಲ್ಲ ಎಂಬ ಉದ್ಗಾರ ಸ್ಪಷ್ಟವಾಗಿ ಸೂಚಿಸಿದೆ. ಹಾಗಾದರೆ ದಾವೋಸ್‌ನಲ್ಲಿ ಸಾಧಿಸಿದ್ದೇನು?

ದಾವೋಸ್ ತನ್ನ ಮಾಮೂಲಿ ಚಟುವಟಿಕೆ ನಡೆಸಿತು. ಎಲ್ಲೆಲ್ಲಿ ಬಂಡವಾಳ ಹೂಡುವುದು ಅನುಕೂಲ? ಎಲ್ಲಿ ಎಷ್ಟು ಸವಲತ್ತುಗಳು ದೊರೆತೀತು? ಎಂಬ ಬಗ್ಗೆ ಉದ್ಯಮಿಗಳು ಅಂದಾಜು ಮಾಡಿದರು.

ವಿದ್ಯುತ್, ಮಾಹಿತಿ ತಂತ್ರಜ್ಞಾನ, ಮೂಲ ಸೌಕರ್ಯದ ಕ್ಷೇತ್ರಗಳಲ್ಲಿ ಹಲವು ವಿದೇಶಿ ಉದ್ಯಮಿಗಳು ಬಂಡವಾಳ ಹೂಡಲು ಮುಂದೆ ಬಂದಿದ್ದಾರೆ ಎಂಬುದನ್ನು ಕೃಷ್ಣ ಪ್ರಕಟಿಸಿದ್ದಾರೆ. ಇದರಲ್ಲಿ ಎನ್ರೋನ್ ಸೇರಿದೆಯಂತೆ. ಎನ್ರೋನ್ - ಕೋಜೆಂಟ್ರಿಕ್ಸ್‌ನಂತಹ ಬಂಡವಾಳ ಹೂಡಿಕೆ ರಾಜ್ಯದ ಅಭಿವೃದ್ಧಿಗೆ ಏನು ಮಾಡೀತು? ಮಾಡಿದೆ ಎಂಬುದನ್ನು ಕಳೆದವಾರ ನಾವು ನೋಡಿದ್ದೇವೆ. ಅಲ್ಲದೆ ಇವರಿಗೆಲ್ಲ ಯಾವ ರೀತಿಯ ಸವಲತ್ತುಗಳ ಆಶ್ವಾಸನೆ ಕೊಟ್ಟಿದ್ದಾರೆ, ಯಾವ ರೀತಿಯ ಶರತ್ತುಗಳಿಗೆ ಒಪ್ಪಿದ್ದಾರೆ ಎಂಬುದು ಗೊತ್ತಾಗಿಲ್ಲ, ಗೊತ್ತಾಗುವುದೂ ಇಲ್ಲ. ಕಳೆದ ವರ್ಷ ವಿಶ್ವಬ್ಯಾಂಕ್‌ಗಳೂ ವಿದೇಶಿ ಬಂಡವಾಳ ಹೂಡಿಕೆಯ ಶರತ್ತಾಗಿ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಒಪ್ಪಿಕೊಂಡ ವಿಷಯಗಳು ರಾಜ್ಯದ ಮುಂದಿನ ಬೆಳವಣಿಗೆಯನ್ನೇ ನಿಲ್ಲಿಸುವಂತಹದು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಅಲ್ಲದೆ ಕರ್ನಾಟಕಕ್ಕೆ ವಿದೇಶಿ ಬಂಡವಾಳ (ಅದರಲ್ಲೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದ) ಆಕರ್ಷಿತವಾಗಿದ್ದರೆ ಅದು ನಮ್ಮ ರಾಷ್ಟ್ರವನ್ನು ಬೆಳೆಸಲು ಇಲ್ಲಿ ಈಗಾಗಲೇ ಸ್ವತಂತ್ರ ಭಾವನೆಯ ನಮ್ಮದೇ ಸಂಪನ್ಮೂಲಗಳಿಂದ ಆಗಿರುವ ಬೆಳವಣಿಗೆಯ ಫಲ ಉಣ್ಣಲು ಅಷ್ಟೇ ಎಂಬುದನ್ನು ನೆನಪಿಸಿಕೊಳ್ಳಬೇಕು. ಅದೇ ನೀತಿಯನ್ನು ಮುಂದುವರೆಸಿದರೆ ಹಗರಿಬೊಮ್ಮನಹಳ್ಳಿಯ

> **ಮಾರುಕಟ್ಟೆ ಸಾಮಾಜಿಕ ನ್ಯಾಯ ಪ್ರಶ್ನೆ ಬಗೆಹರಿಸಲ್ಲ**
>
> ಜಾಗತೀಕರಣದ ವಿರುದ್ಧ 'ಸಿಯಾಟಲ್ ಮನುಜ' ತೋರಿಸಿದ ತಪ್ಪು ಸಂದೇಹಗಳನ್ನು 'ದಾವೋಸ್ ಮನುಜ' ಸರಿ ಮಾಡಬೇಕು.
>
> ಅಮೇರಿಕ ಪ್ರಸಿದ್ಧ ವಿಶ್ವವಿದ್ಯಾಲಯ ಎಂ.ಐ.ಟಿಯ ಪ್ರೋಫೆಸರ್ **ಪಾಲ್ ಕ್ರುಗೌಮರ್**
>
> ಸಾಮಾಜಿಕ ನ್ಯಾಯ ಮತ್ತು ನೈತಿಕತೆಯ ಪ್ರಶ್ನೆಗಳನ್ನು ಮಾರುಕಟ್ಟೆ ಅದರ ಪ್ರಭಾವದಿಂದಾಗೇ ಪರಿಹರಿಸಲು ಸಾಧ್ಯವಿಲ್ಲ.
>
> - ತುರ್ಕಿ ಪ್ರದಾನಿ **ಬುಲೆಂಟ್ ಇಸೆವಿಟ್**

> **ದಾವೋಸ್‌ನಲ್ಲಿ ಬಜೆಟ್ ನೀತಿ ಸಾರುವುದು ದೇಶದ ಸ್ವಾಭಿಮಾನಕ್ಕೆ ಘಾತಕ**
>
> ದಾವೋಸ್‌ನಲ್ಲಿ ಅರ್ಥಮಂತ್ರಿ ಯಶವಂತ್ ಸಿನ್ಹಾ ಮುಂಬರಲಿರುವ ಬಜೆಟ್‌ನಲ್ಲಿ ರಕ್ಷಣೆ ಬಿಟ್ಟು ಇತರ ಎಲ್ಲಾ ಕ್ಷೇತ್ರಗಳಲ್ಲಿ ವಿದೇಶಿ ಖಾಸಗಿ ಬಂಡವಾಳ ಹೂಡಿಕೆಗೆ ಇರುವ ನಿಯಂತ್ರಣಗಳನ್ನು ಕಿತ್ತುಹಾಕಲಾಗುವುದು ಎಂದು ಪ್ರಕಟಿಸಿದ್ದಾರೆ. ದೇಶದ ಪಾರ್ಲಿಮೆಂಟ್, ಜನತೆಗೆ ಮುಂದೆ ಇನ್ನೂ ಇಡಬೇಕಾದ ಬಜೆಟ್‌ನ ನೀತಿಗಳನ್ನು, ದಿಕ್ಕಿನ ಬಗ್ಗೆ ವಿದೇಶಿ ಬಂಡವಾಳಶಾಹಿಗಳ ವಿರುದ್ಧ ಡೊಗ್ಗು ಸಲಾಮು ಹೊಡೆದು ಕೈಕಟ್ಟಿ ನಿಂತುಕೊಂಡಿರುವುದು ದೇಶದ ಸ್ವಾಭಿಮಾನಕ್ಕೆ ಘಾತಕ. ಈ ಬಗ್ಗೆ ಬಿಜೆಪಿ ಸರ್ಕಾರದ ನೀತಿಗಳನ್ನು ಜನ ಒಪ್ಪುವುದಿಲ್ಲ ಎಂದು ಇತ್ತೀಚಿಗೆ ನಡೆದ ಸಾರ್ವಜನಿಕ ಕ್ಷೇತ್ರದ ಇತರ ಕಾರ್ಮಿಕರ ಭಾರೀ ಹೋರಾಟಗಳು ಮತ್ತು ಪ್ರತಿಭಟನೆಗಳು ವ್ಯಕ್ತಪಡಿಸಿವೆ. ಇದನ್ನು ನಿರ್ಲಕ್ಷಿಸಿ ವಿದೇಶಿ ಬಂಡವಾಳದ ಮುಂದೆ ಮಣಿಯುವ ಬಿಜೆಪಿ ಸರ್ಕಾರದ ನೀತಿಯನ್ನು ಜನ ಸಹಿಸಲಾಗದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.



ಅಭಿವೃದ್ಧಿ ಶೃಂಗಸಭೆ

ಸುಂದರ ನಗರದ 'ಸಿಂಗಾಪುರವೋ'? ಮಾಯಾನಗರದ 'ಮಾರಾಟವೋ'?

ಗೋಪಾಲಕೃಷ್ಣ ಅರಳಹಳ್ಳಿ

ರಾಜ್ಯದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಬೆಂಗಳೂರು ಮಹಾನಗರವನ್ನು 'ಸಿಂಗಾಪುರ' ಮಾಡುವ ಹಗಲುಗನಸಿನಲ್ಲಿ ಮಾಯಾಲೋಕವನ್ನೇ ಸೃಷ್ಟಿಸಿದ್ದಾರೆ. ಬೆಂಗಳೂರು ಅಭಿವೃದ್ಧಿ ಯಾರಿಗೆ ಬೇಕಿಲ್ಲ? ಇದಕ್ಕಾಗಿ 'ಶೃಂಗಸಭೆ' ನಡೆಸಿ ಖಾಸಗಿ ಮಾಲೀಕರನ್ನು, ಬಹುರಾಷ್ಟ್ರೀಯ ವಿದೇಶಿ ಕಂಪನಿಗಳನ್ನು ಮೇರುಮಟ್ಟಕ್ಕೇರಿಸಿ ಓಲೈಸುವ ಅವಶ್ಯಕತೆಯಾದರೂ ಏನು?

ನೂರು ವಿಭಾಗ(ವಾರ್ಡ್)ಗಳನ್ನು ಹೊಂದಿರುವ ಬೆಂಗಳೂರು ಮಹಾನಗರ ಪಾಲಿಕೆ ನೂರಾರು ನಾಗರೀಕ ಸಮಸ್ಯೆಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ ಎಂಬುದು ನಿಜವಾದರೂ, ಈ ಸಮಸ್ಯೆಗಳನ್ನು ಪರಿಹರಿಸಲು ಮಹಾನಗರ ಪಾಲಿಕೆಗೆ ಸಾಧ್ಯವಾಗಿಲ್ಲ. ಕಾರಣವಾದರೂ ಏನು? ಮಹಾನಗರ ಪಾಲಿಕೆಯ ಅದಕ್ಷತೆ, ಚುನಾಯಿತ ಪ್ರತಿನಿಧಿಗಳ ಭ್ರಷ್ಟಾಚಾರ, ಅಧಿಕಾರಿಗಳ ಬೇಜವಾಬ್ದಾರಿ ಸ್ಪಷ್ಟವಾಗಿ ಕಾಣುತ್ತದೆ.

ಇದುವರವಿಗೂ ಮಹಾನಗರ ಪಾಲಿಕೆ 1998-99ನೇ ಸಾಲಿನಲ್ಲಿ 481.6959 ಕೋಟಿ ರೂ.ಗಳನ್ನು ಖರ್ಚು ಮಾಡಿದೆ. 1999-2000 ಸಾಲಿನಲ್ಲಿ 700.2735 ಕೋಟಿ ರೂ.ಗಳನ್ನು ಖರ್ಚು ಮಾಡುವ ಅಂದಾಜಿನಲ್ಲಿದೆ ಕೋಟಿಗಟ್ಟಲೆ ಖರ್ಚು ಮಾಡುವ ಹಲವು ಯೋಜನೆಗಳನ್ನು ರೂಪಿಸುತ್ತಿದೆ.

ಇದಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಗೆ ನಾಗರೀಕರಿಂದ, ಆಸ್ತಿಗಳಿಂದ 1998-99ರಲ್ಲಿ 512.1597 ಕೋಟಿ ವರಮಾನ ಸಂಗ್ರಹಿಸಿದೆ. 1999-2000 ದಲ್ಲಿ 702.3288 ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ.

ಆದರೆ ಇಂತಹ ಬೃಹತ್ ಸಂಸ್ಥೆ ಬೆಂಗಳೂರನ್ನು ಸಮರ್ಥವಾಗಿ ಅಭಿವೃದ್ಧಿಗೊಳಿಸಲು ಏಕೆ ಸಾಧ್ಯವಾಗಿಲ್ಲ. ಇದಕ್ಕೆ ಸರ್ಕಾರದ ಅದಕ್ಷತೆಯು ಕಾರಣವಾಗಿರಬಹುದು.

ಖಾಸಗೀಕರಣದ ಅಮಲಿನಲ್ಲಿ ಅಭಿವೃದ್ಧಿ ಸೋಗು

ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆಯನ್ನು ತಂದು ಭ್ರಷ್ಟಾಚಾರ ತಡೆಯುವ ಬದಲು, ವಿದೇಶಿ ಬಹುರಾಷ್ಟ್ರೀಯ ಕಂಪನಿಯವರು ಖಾಸಗೀ ಕಂಪನಿ ಮಾಲೀಕರು ನಮ್ಮ ಉದ್ಧಾರಕರೆಂದು ಭ್ರಮೆ ಹುಟ್ಟಿಸುವ ಪ್ರಯತ್ನದಲ್ಲಿ 'ಶೃಂಗಸಭೆ'ಯನ್ನು ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಮಾಡುತ್ತಿದ್ದಾರೆ. ಬೆಂಗಳೂರಿನ ಜನತೆಯ ಜೀವನದ ಮೇಲೆ ಈ ನೀತಿ ದುಷ್ಪರಿಣಾಮ ಬೀರುವುದು ಖಚಿತ.

ಬೆಳ್ಳಗಿರುವುದೆಲ್ಲ ಹಾಲಲ್ಲ

'ಶೃಂಗಸಭೆ' ನೇತೃತ್ವ ವಹಿಸಿರುವ ಖಾಸಗೀ ಕಂಪನಿಯ ಮಾಲೀಕರಿಗೆ ಬೆಂಗಳೂರಿನ ಮೇಲೆ ಇಷ್ಟೊಂದು ಪ್ರೀತಿ ಎಲ್ಲಿಂದ ಬಂತು. ವಿದೇಶಿ ಕಂಪನಿಗಳ ಈ ಆಸಕ್ತಿ ನಮ್ಮನ್ನು ಬೆರಗುಗೊಳಿಸುತ್ತದೆ. ಗತಕಾಲದ ಬಿಳಿಯರ ಆಗಮನದ ಕಥೆಯನ್ನು ಮನದಲ್ಲಿ ಮರುಕಳಿಸುತ್ತದೆ. 'ಈ ಅಭಿವೃದ್ಧಿಯ ಸೋಗಿಗೆ ರಾಜ್ಯದ ಜನತೆ ತುಂಬಾ ಬೆಲೆ ತೆರಬೇಕಾಗುತ್ತದೆ!'

ಒಂದು ಕಾಲಕ್ಕೆ ಬೆಂಗಳೂರು ಮಹಾನಗರ ಮಾಯಾನಗರವಾಗಿ ಬಹುರಾಷ್ಟ್ರೀಯ ಕಂಪನಿಗಳು ಈ ನಗರವನ್ನು ಆಕ್ರಮಿಸುವುದರಲ್ಲಿ ಸಂದೇಹವಿಲ್ಲ. ಬಿಜೆಪಿ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ತೀವ್ರರೀತಿಯಲ್ಲಿ ಜಾರಿಯಾಗುತ್ತಿರುವಾಗ, ನಾವೇನು ಕಡಿಮೆ? ಹೊಸ ಆರ್ಥಿಕ ನೀತಿಗೆ ತಳಪಾಯ ಹಾಕಿದವರು ನಾವು, ವಿದೇಶಿ ಬಂಡವಾಳ ಆಕರ್ಷಿಸಲು ನಾವು ಹಿಂದೆ ಬೀಳುವುದಿಲ್ಲ. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರನ್ನು ಮೀರಿಸುತ್ತೇವೆಂದು ಕಂಕಣಕಟ್ಟಿ ನಿಂತಿದ್ದಾರೆ ಮುಖ್ಯಮಂತ್ರಿ ಕೃಷ್ಣರವರು.

ಈ ಹೊಸ ಆರ್ಥಿಕ ಕೈಗಾರಿಕಾ ನೀತಿಗಳ ಫಲವೇನು?

ಬೆಂಗಳೂರು ನಗರದ ಹೊರವಲಯಗಳಲ್ಲಿ 'ಸಿಂಗಪುರ' ಟೆಕ್ನಾಲಜಿ ಪಾರ್ಕ್ ನಂತಹ ಅನೇಕ ವಿದೇಶಿ ಕಂಪನಿಗಳು ತಲೆ ಎತ್ತಿವೆ. ಮಾಹಿತಿ ತಂತ್ರಜ್ಞಾನದಲ್ಲಿ ಬೆಂಗಳೂರು ಮುಂದುವರೆದಿರುವುದು, ಇನ್ನೂ ಹೆಚ್ಚು ಪ್ರಗತಿ ಸಾಧಿಸುವ ಪ್ರಯತ್ನಗಳು ಸ್ವಾಗತಾರ್ಹ. ಆದರಿಂದ ವಿಜ್ಞಾನಿಗಳಿಗೆ ಉದ್ಯೋಗವಕಾಶಗಳು ಲಭ್ಯವಾಗುವುದು, ದೇಶಕ್ಕೆ ಹೆಚ್ಚಿನ ಆದಾಯ, ವಿದೇಶಿ ವಿನಿಮಯ ಲಭ್ಯವಾಗುವುದೂ ಸ್ವಾಗತಾರ್ಹ. ಆದರೆ ಈ ಪ್ರದೇಶದಲ್ಲಿರುವ ಜನರಿಗೆ ಉದ್ಯೋಗ ಸಿಗುವ ಖಾತ್ರಿಗಳು ಮಾತ್ರ ಇಲ್ಲ. ವಿದೇಶಿ ಪ್ರಧಾನಿಗಳು, ಕೇಂದ್ರದ ಮಂತ್ರಿಮಾನ್ಯರ ಹಾರಾಟ ಹೆಚ್ಚಾಗಿ ಜನರ ಮನಸ್ಸಿನಲ್ಲಿ ಭಯದ ಭಾವನೆ ಉಂಟಾಗಿದೆ. ಜಮೀನುಗಳನ್ನು ಕಳೆದುಕೊಂಡ ರೈತಾಪಿ ಜನ ತಮ್ಮ ಕುಟುಂಬದ ಮಕ್ಕಳಿಗೆ ಉದ್ಯೋಗ ಸಿಗುತ್ತಿಲ್ಲವೆಂದು ಕಳವಳ ಪಡುತ್ತಿದ್ದಾರೆ.

ಪ್ರಧಾನಿ ವಾಜಪೇಯಿಯವರು ಉದ್ಯೋಗ ಕಡಿತ ಮಾಡುವ ಆಲೋಚನೆಗಳನ್ನು ಜನತೆ ಮುಂದಿಟ್ಟಿದ್ದಾರೆ. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಜನತೆ ಇದನ್ನ ಸಹಿಸಿಕೊಳ್ಳಬೇಕೆಂದು ಹೇಳುತ್ತಿರುವುದನ್ನು ಮರೆಯಲಾಗದು!

ಶೃಂಗಸಭೆಯಲ್ಲಿ 'ಶೃಂಗಾರ ಕಾವ್ಯ'

ಬೆಂಗಳೂರು ಸುಂದರ ನಗರ ಮಾಡಲು ಬೆಂಗಳೂರಿನ ಟಾಟಾ ಸಭಾಂಗಣದಲ್ಲಿ ಸೇರಿದ್ದ ಮಾಲೀಕರು, ಸರ್ಕಾರದ ಮಂತ್ರಿಗಳು, ಅಧಿಕಾರಿಗಳು, ತಜ್ಞರು ಇತ್ಯಾದಿ ಎಲ್ಲರೂ ಸುಂದರದ ನಗರದ ತುತ್ತೂರಿ ಊದಿದ್ದಾರೆ. ಬೆಂಗಳೂರು ಅಭಿವೃದ್ಧಿಗೆ ಸರ್ಕಾರದ ಜೊತೆ ಖಾಸಗೀ ಮಾಲೀಕರು ಕೈ ಜೋಡಿಸಿದ್ದಾರೆ. ಮೊದಲ ಬಾರಿಗೆ 25 ಕೋಟಿ ರೂ.ಗಳ ಸಹಕಾರ ಘೋಷಿಸಿದ್ದಾರೆ. ಇದರ ಗುಟ್ಟೇನು?


ಈ ಅಭಿವೃದ್ಧಿ ಯೋಜನೆಗೆ ಬೆಂಗಳೂರನ್ನು ಸಿಗಿದು ಪಾಲು ಮಾಡಿಕೊಂಡಿದ್ದಾರೆ. ಖಾಸಗಿ ಕಂಪನಿ ಮಾಲೀಕರು ತಮ್ಮ ಪಾಲಿಗೆ ಬಂದಿರುವ ರಸ್ತೆಗಳನ್ನು ಗುತ್ತಿಗೆ ಪಡೆದಿದ್ದಾರೆ. ಇಲ್ಲಿನ ಎಲ್ಲಾ ಕಸರತ್ತುಗಳಿಗೂ ಇವರೇ ಮುಖ್ಯಸ್ಥರು. ಹನ್ನೆರಡು ಖಾಸಗೀ ಮಾಲೀಕರು ನಗರಪಾಲಿಕೆ ಶಾಲೆ, ರಸ್ತೆ ಅಭಿವೃದ್ಧಿ, ನಿರ್ಮಲ ಕಾರ್ಯಕ್ರಮಕ್ಕೆ ಹಣ ನೀಡಿದ್ದಾರೆ.

ಪುಟ 11 ಕ್ಕೆ

ಸಾರ್ವಜನಿಕ ವಲಯದ ಫೆ. 2 ರ ಮುಷ್ಕರ

ಸರ್ಕಾರಕ್ಕೆ ಎಚ್ಚರಿಕೆಯ ಕರೆ ಘಂಟೆ

ಫೆ. 2 ನೇ ತಾರೀಖು ದೇಶಾದ್ಯಂತ 20 ಲಕ್ಷ ಸಾರ್ವಜನಿಕ ವಲಯ ಕಾರ್ಮಿಕರ ಮುಷ್ಕರ ರಭಸದಿಂದ ಸಾರ್ವಜನಿಕ ವಲಯದ ಕೇಂದ್ರ ಸರ್ಕಾರ ಕೈಗಾರಿಕೆಗಳನ್ನು ಖಾಸಗಿಯವರಿಗೆ ಒಪ್ಪಿಸುವ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವ ವಾಜಪೇಯಿ ಸರಕಾರಕ್ಕೆ ಎಚ್ಚರಿಕೆಯ ಕರೆಗಂಟೆ ಈ ಮುಷ್ಕರ. ಈ ಎಚ್ಚರಿಕೆಗೆ ವಾಜಪೇಯಿ ಸರ್ಕಾರ ಕಿವುಡಾದರೆ ತೀವ್ರ ಹೋರಾಟಕ್ಕೆ ನಾಂದಿಯಾಗುತ್ತದೆ. ದೇಶದಲ್ಲಿ ಈಗಾಗಲೇ ಪುಟಿಯುತ್ತಿರುವ ಹೋರಾಟದ ಸೆಲೆಗಳು ಅಲೆಯಲೆಯಾಗಿ ದೇಶವನ್ನೆಲ್ಲಾ ವ್ಯಾಪಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ. ಸೂರಿಯವರೊಂದಿಗೆ ಸಂದರ್ಶನ.



ಫೆ. 2 ರ ಮುಷ್ಕರ ಎಲ್ಲೆಲ್ಲಿ ಹೇಗೆ ನಡೆಯಿತು?

ಫೆ.2 ರ ಮುಷ್ಕರ ಅಖಿಲ ಭಾರತ ಮುಷ್ಕರ ಅದೊಂದು ಎಚ್ಚರಿಕೆಯ ಮುಷ್ಕರ. ಈ ಮುಷ್ಕರ ದೇಶದೆಲ್ಲೆಡೆ ಯಶಸ್ವಿಯಾಗಿ ನಡೆದಿದೆ. ಬಿಹಾರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳಗಳಲ್ಲಿ ಮುಷ್ಕರ ಯಶಸ್ವಿಯಾಗಿ ನಡೆದಿದೆ. ಕರ್ನಾಟಕದಲ್ಲೂ ಮುಷ್ಕರ ಯಶಸ್ವಿಯಾಗಿದೆ.

ಬೆಂಗಳೂರಿನ ಹೆಚ್.ಎ.ಎಲ್., ಐ.ಟಿ.ಐ., ಬಿಇಎಂಎಲ್, ಬಿಹೆಚ್ಇಎಲ್‌ಗಳಲ್ಲಿ ಕಾರ್ಮಿಕರು, ಕಾಂಟ್ರಾಕ್ಟ್ ಕಾರ್ಮಿಕರು ಮಾತ್ರವಲ್ಲ ಅಧಿಕಾರಗಳೂ ಸಹ ಮುಷ್ಕರದಲ್ಲಿ ಭಾಗವಹಿಸಿದ್ದು ಮುಷ್ಕರ ಶೇ 100 ರಷ್ಟು ಯಶಸ್ವಿಯಾಗಿದೆ. ಈ ಮುಷ್ಕರವನ್ನು ಇಂಟಕ್ ಹಾಗೂ ಬಿಎಂಎಸ್ (ಆರೆಸ್ಸೆಸ್ ಅಂಗಸಂಸ್ಥೆ) ಕಾರ್ಮಿಕ ಸಂಘಗಳು ವಿರೋಧಿಸಿದವು. ಈ ವಿರೋಧದ ಮಧ್ಯೆಯೂ ಆ ಸಂಘಗಳ ಹಿಂದಿರುವ ಕಾರ್ಮಿಕರು ಅತೀ ದೊಡ್ಡ ರೀತಿಯಲ್ಲಿ ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಹೀಗಾಗಿ ಫೆ 2 ರ ಮುಷ್ಕರ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ದೇಶವ್ಯಾಪಿ ಯಶಸ್ವಿ ಎಚ್ಚರಿಕೆಯ ಮುಷ್ಕರ.

ಕಾರ್ಮಿಕರ ಈ ಸ್ಪಂದನೆಗೆ ಮುಖ್ಯ ಕಾರಣ ಏನು?

... ನೀತಿಯೇ ಈ ಸ್ಪಂದನೆಗೆ ಮುಖ್ಯ ಕಾರಣ. ಹೊಸ ಆರ್ಥಿಕ ನೀತಿ, ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸುವುದು, ಈ ಉದ್ದಿಮೆಗಳಲ್ಲಿಯ ಶೇರುಗಳನ್ನು ಖಾಸಗಿಯವರಿಗೆ ಕೊಡುವುದು, ರೋಗಗ್ರಸ್ತ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ನಿರಾಕರಿಸುತ್ತಿರುವುದು, ಕಾರ್ಮಿಕರ ಹಕ್ಕುಗಳನ್ನು ಕಸಿಯುತ್ತಿರುವ 2ನೇ ರಾಷ್ಟ್ರೀಯಕಾರ್ಮಿಕ ಆಯೋಗ, ಡಿಪಿಇಪಿ ಆದೇಶದ

ಜನತೆಯ ಪ್ರತಿಭಟನೆಗೆ ಸರ್ಕಾರ ಬಗ್ಗಲೇಬೇಕು

ಹೆಸರಿನಲ್ಲಿ 10 ವರ್ಷಗಳ ಒಪ್ಪಂದದ ಅವಧಿ, ಮನೆ ಬಾಡಿಗೆ ಕಡಿತ ಈ ಎಲ್ಲಾ ನೀತಿಗಳು ದೇಶೀಯ ಹಾಗೂ ವಿದೇಶಿ ಉದ್ದಿಮೆಗಳಿಗೆ ಲೂಟಿ ಮಾಡಲು ಮುಕ್ತ ಅವಕಾಶ ಕೊಡುವ ನೀತಿಗಳಾಗಿವೆ. ಕಾರ್ಮಿಕರ ಹಕ್ಕುಗಳಿಗೆ ಸಂಚಕಾರ ತರುವ ನೀತಿಗಳಾಗಿವೆ. ದೇಶದ ಸ್ವಾವಲಂಬನೆಯನ್ನೇ ಸಂಪೂರ್ಣ ನಾಶ ಮಾಡುವ ನೀತಿಗಳಾಗಿವೆ. ಈ ನೀತಿಗಳನ್ನು ಹಿಮ್ಮೆಟ್ಟಿಸಲು ಕಳೆದ ಡಿಸೆಂಬರ್ 16 ರಂದು ದೆಹಲಿಯಲ್ಲಿ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಒಕ್ಕೂಟ ಸಭೆ ಸೇರಿ ಒಂದು ದೀರ್ಘಕಾಲದ ಹೋರಾಟವನ್ನು ನಡೆಸುವ ಕುರಿತು ಜನವರಿ 11-2000 ದಂದು ಕಾರ್ಮಿಕರಿಂದ ... 11 ರ ಮತ ಸಂಗ್ರಹಣೆಯಲ್ಲಿ ಕಾರ್ಮಿಕರು ಅತ್ಯುತ್ಸಾಹದಿಂದ ಹೋರಾಟವನ್ನು ನಡೆಸಲು ಬೆಂಬಲಿಸಿದರು. ಆ ಅಭಿಪ್ರಾಯದಂತೆ ನೇರವಾಗಿ ಅನಿರ್ದಿಷ್ಟಕಾಲ ಹೋರಾಟಕ್ಕೆ ಹೋಗುವ ಬದಲು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ಕೊಡಲು ಒಂದು ದಿನ ಎಚ್ಚರಿಕೆಯ ಮುಷ್ಕರವನ್ನು ನಡೆಸಲಾಯಿತು.

ಈ ಮುಷ್ಕರದಿಂದ ಭಾರತದ ಬಂಡವಾಳಶಾಹಿಗಳಿಗೆ ಆದ ನಷ್ಟ ಎಷ್ಟು?


ಈ ಮುಷ್ಕರದಿಂದ ಬಂಡವಾಳ ಶಾಹಿಗಳಿಗೆ ಒಂದು ದಿನದ ಉತ್ಪಾದನೆ ಸ್ಥಗಿತಗೊಂಡಿದೆ. ಕೇಂದ್ರ ಸರ್ಕಾರ ಇದನ್ನು ಉಪೇಕ್ಷಿಸಿದರೆ ಕಾರ್ಮಿಕರ ಮತಗಣನೆ ಪ್ರಕಾರ ಅನಿರ್ದಿಷ್ಟಾವಧಿ ಹೋರಾಟ ಅನಿವಾರ್ಯವಾಗುತ್ತದೆ. ಇದರಿಂದ ದೇಶದ ಎಲ್ಲಾ ಉದ್ದಿಮೆಗಳಲ್ಲಿ ಉತ್ಪಾದನೆ ಸ್ಥಗಿತವಾಗುತ್ತದೆ. ಆಗ ಈ ಉದ್ದಿಮೆಗಳ ಮೇಲೆ ಅವಲಂಬನೆಯಾಗಿರುವ ಸಣ್ಣ ಉದ್ದಿಮೆಗಳು ಸಂಕಷ್ಟಕ್ಕೆ ಸಿಲುಕುತ್ತವೆ. ಹೀಗೆ ಅನಿರ್ದಿಷ್ಟಾವಧಿ ಹೋರಾಟದಿಂದ ಒಟ್ಟಾರೆ ಉತ್ಪಾದನಾ ಪ್ರಕ್ರಿಯೆಯೇ ಸ್ಥಗಿತಗೊಂಡು ಬಂಡವಾಳಶಾಹಿ ಬಾರಿ ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಈ ಹೋರಾಟವನ್ನು ಮುಂದುವರಿಸಲು ಮುಂದಿನ ಯೋಜನೆಗಳೇನು?

ಕೇಂದ್ರ ಸರ್ಕಾರದ ಖಾಸಗೀಕರಣ ಹಾಗೂ ... ಜಾಗತೀಕರಣ ನೀತಿಗಳು ರಾಜಕೀಯ ತೀರ್ಮಾನಗಳು. ಈ ನೀತಿಗಳು ಕಾರ್ಮಿಕರನ್ನು ಮಾತ್ರವಲ್ಲದೆ, ದೇಶದ ಇತರ ಎಲ್ಲಾ ಜನವಿಭಾಗಗಳನ್ನು ರೈತರು, ಕೃಷಿಕೂಲಿಕಾರ್ಮಿಕರನ್ನು, ಮಹಿಳೆಯರು, ಯುವಜನರು ಹಾಗೂ ವಿದ್ಯಾರ್ಥಿಗಳನ್ನು ತೀವ್ರ ಸಂಕಷ್ಟಕ್ಕೀಡು ಮಾಡುವ ನೀತಿಗಳಾಗಿದ್ದು ಸಾರ್ವಜನಿಕ ವಲಯದ ಕಾರ್ಮಿಕರು ಇತರೆ ಜನವಿಭಾಗಗಳೊಡಗೂಡಿ ಕೇಂದ್ರ ಸರ್ಕಾರದ ಮೇಲೆ ಪ್ರಬಲವಾದ ಪ್ರಹಾರಕ್ಕೆ ತೀರ್ಮಾನಿಸಿದ್ದಾರೆ. ಈ ನಿಟ್ಟಿನಲ್ಲಿ ನಮ್ಮ ದೇಶದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಹಮ್ಮಿಕೊಂಡಿರುವ ಮಾರ್ಚ್ 9 ರ ರ‍್ಯಾಲಿಯಲ್ಲಿ ಬೃಹತ್ ಪ್ರಮಾಣದ ಸಂಖ್ಯೆಯಲ್ಲಿ ಭಾಗವಹಿಸಲು ತೀರ್ಮಾನಿಸಲಾಗಿದೆ. ರ‍್ಯಾಲಿಯ ನಂತರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ನಡೆಸಲು ತೀರ್ಮಾನಿಸಲಾಗಿದೆ. ದೇಶದ 20 ಲಕ್ಷ ಕಾರ್ಮಿಕರು ಕೇಂದ್ರ ಸರ್ಕಾರದ ಜನವಿರೋಧಿ-ದೇಶ ವಿರೋಧಿ ಜಾಗತೀಕರಣ ಹಾಗೂ ಖಾಸಗೀಕರಣದಂತಹ ದೇಶದ್ರೋಹಿ ನೀತಿಗಳನ್ನು ಹಿಮ್ಮೆಟ್ಟಿಸಲು ಪ್ರಬಲವಾದ ಸಿದ್ಧತೆ ನಡೆಸುತ್ತಿದ್ದಾರೆ.

ಒಂದಂತೂ ಸ್ಪಷ್ಟ ಜನತೆಯ ಹೋರಾಟಕ್ಕೆ ಸರ್ಕಾರ ಬಗ್ಗಲೇಬೇಕು.

ಸಂದರ್ಶನ: ಕೆ.ಶ್ರೀನಿವಾಸ್




ಆಲಮಟ್ಟಿ ಅಣೆಕಟ್ಟು ಹುಟ್ಟು-ಬೆಳವಣಿಗೆ

ಎನ್.ಕೆ.ಉಪಾಧ್ಯಾಯ

ಆಲಮಟ್ಟಿ ಆಣೆಕಟ್ಟಿನ ಎತ್ತರದ ಕುರಿತು ಕೇಂದ್ರದಲ್ಲಿಯ ವಾಜಪೇಯಿ ಸರಕಾರ ಆಂಧ್ರ ಸರ್ಕಾರದ ಒತ್ತಡಕ್ಕೆ ಮಣಿದು ತಮ್ಮ ಸರಕಾರದ ಭದ್ರತೆಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಆಣೆಕಟ್ಟಿನ ಕೃಷ್ಣ ಮೇಲ್ದಂಡೆಯ ಮೊದಲನೇ ಹಂತಕ್ಕೆ ಮಾತ್ರ ಸೀಮಿತಗೊಳಿಸಬೇಕೆಂದು ಅಫಿಡವಿಟ್ ಸಲ್ಲಿಸಿದ ಪರಿಣಾಮವಾಗಿ ದಿಢೀರನೆ ಎದ್ದಿರುವ ಅಸಮಾಧಾನದ ಲಾಭ ಪಡೆಯಲು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಂದಿನಿಂದಲೂ ಅನಂತರ ಕರ್ನಾಟಕದ ಏಕೀಕರಣವಾದಂದಿನಿಂದಲೂ ಕೃಷ್ಣಾ ನದಿಯ ಯೋಜನೆಗಳನ್ನೆಲ್ಲಾ ನಿರ್ಲಕ್ಷಿಸಿ ರೈತ ಸಮುದಾಯಕ್ಕೆ ದ್ರೋಹ ಬಗೆದು ಆಳಿದ, ಆಳಲು ಸಿದ್ಧತೆ ನಡೆಸುತ್ತಿರುವ ಪಕ್ಷಗಳು ಹವಣಿಸುತ್ತಿರುವುದನ್ನೀಗ ಕಾಣುತ್ತೇವೆ. ಆದರೆ ಸ್ವಾತಂತ್ರ್ಯ ಪೂರ್ವದಿಂದಲೂ ಅನಂತರವೂ ರಾಜ್ಯ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ನಿರಂತರ ಹೋರಾಡುತ್ತಾ ಬಂದ ಪಕ್ಷ ಕಮ್ಯುನಿಸ್ಟ್ ಪಕ್ಷ ಮತ್ತು ರೈತ ಸಂಘ.

ಬಿಜಾಪುರ ಜಿಲ್ಲೆಯ ಆಲಮಟ್ಟಿ ಯೋಜನೆಯ ಹೋರಾಟ ವೈಶಿಷ್ಟತೆ ಪಡೆಯಲು ಕಾರಣವೇನು? ಇಡೀ ರಾಜ್ಯದಲ್ಲಿ ಅತಿಕಡಿಮೆ ಮಳೆಯಿಂದಾಗಿ ಅತಿ ಹೆಚ್ಚು ಬರಗಾಲದಬವಣೆ ಅನುಭವಿಸುವ ಜಿಲ್ಲೆ ಬಿಜಾಪುರ. ಹೊಟ್ಟೆಪಾಡಿಗಾಗಿ ಅತಿ ಹೆಚ್ಚು ಜನ ಊರುಬಿಟ್ಟು ಗುಳೇ ಹೋಗುವವರು ಬಿಜಾಪುರ ಜಿಲ್ಲೆಯಿಂದದಾಗಿತ್ತು. ಬರಗಾಲವೆಂದು ಸಾರಲ್ಪಟ್ಟು ಅತಿ ಹೆಚ್ಚು ಭೂಕಂದಾಯ ಮಾಫಿಯಾಗುವ ಪ್ರದೇಶ ಬಿಜಾಪುರ ಜಿಲ್ಲೆ.

1952 ರಲ್ಲಿ ಕೃಷ್ಣ-ಗೋದಾವರಿ ನದಿ ನೀರಿನ ಬಳಕೆಯ ಕುರಿತು ಅಂತರಾಜ್ಯ ಸಮ್ಮೇಳನ ನಡೆಯಿತು. ಅದರಲ್ಲಿ ಅತಿ ಕಡಿಮೆ ಸಮಯದಲ್ಲಿ ಅತಿಹೆಚ್ಚು ಆಹಾರಧಾನ್ಯ ಬೆಳೆಯಲು ಹಾಗೆಯೇ ಅತಿ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಲು ಸೂಚನೆಗಳನ್ನು ರೂಪಿಸಲಾಯಿತು. ಆ ಕಮಿಟಿಯ ಅಧ್ಯಕ್ಷರಾದ ಎನ್.ವಿ.ಗಾಡಗೀಳ ಅವರು ಬಿಜಾಪುರ ಜಿಲ್ಲೆಗೆ ನೀರಾವರಿ ಮತ್ತು ವಿದ್ಯುತ್ ಯೋಜನೆಗಳಿಗೆ ಪ್ರಾಶಸ್ತ್ಯ ನೀಡುವಂತೆ ಒತ್ತಾಯಿಸಿದರು. ಪ್ರಥಮ ಪಂಚವಾರ್ಷಿಕ ಯೋಜನೆಯ ಕೊನೆಯ ಅರ್ಧಭಾಗದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸೇರಿಸುವಂತೆ ಸೂಚಿಸಿದರು. ಆದರೆ ಮೂರನೇ ಪಂಚವಾರ್ಷಿಕ ಯೋಜನೆ ತಯಾರಿಸುವ ತನಕ ಸುಮಾರು 10 ವರ್ಷ ಕಾಲ ರಾಜ್ಯದ ಆಳುವ ಕಾಂಗ್ರೆಸ್ ಸರಕಾರ ಇದನ್ನು ಸಂಪೂರ್ಣ ಕಡೆಗಣಿಸಿತು. ಕೊನೆಗೆ ಜನರ ಹಾಗೆಯೇ ಕಮ್ಯುನಿಸ್ಟ್ ಪಕ್ಷಗಳ ಒತ್ತಡಕ್ಕೆ ಮಣಿದ ಕಾಂಗ್ರೆಸ್ ಸರ್ಕಾರ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಗುಲ್ಬರ್ಗ, ರಾಯಚೂರು ಜಿಲ್ಲೆಗಳಿಗೆ ಅನುಕೂಲವಾಗುವ ನಾರಾಯಣಪುರ ಆಣೆಕಟ್ಟು ಮತ್ತು ಬಿಜಾಪುರ ಜಿಲ್ಲೆಗೆ ಅನುಕೂಲವಾಗುವ ಆಲಮಟ್ಟಿ ಆಣೆಕಟ್ಟಿನ ಯೋಜನೆ ತಯಾರಿಸಿ, ಕೇಂದ್ರ ಸರಕಾರಕ್ಕೆ ಜುಲೈ 1963 ರಂದು ಮಂಜೂರಿಗಾಗಿ ಕಳುಹಿಸಿಕೊಟ್ಟಿತು. ಆಗ ಅದರ ಒಟ್ಟು ಖರ್ಚು ನಾರಾಯಣಪುರ ಆಣೆಕಟ್ಟು ಮತ್ತು ಕಾಲುವೆಗೆ ರೂ. 26.40 ಕೋಟಿ, ಆಲಮಟ್ಟಿ ಆಣೆಕಟ್ಟು ಮತ್ತು ಕಾಲುವೆಗೆ ರೂ. 15.23 ಕೋಟಿ, ಆಣೆಕಟ್ಟೆಯಲ್ಲಿ ನೀರು ನಿಲ್ಲುವ ಪ್ರದೇಶ ನಾರಾಯಣಪುರ 18,521 ಚೌರಸ್ ಮೈಲು, ಆಲಮಟ್ಟಿ 13,871 ಚೌರಸ್ ಮೈಲು. ನಾರಾಯಣಪುರ ಡಾಮ್ ಎತ್ತರ145 ಅಡಿ, ಆಲಮಟ್ಟಿ ಡ್ಯಾಂ ಎತ್ತರ 111 ಅಡಿ. ತಡವಾಗಿ ಈ ಸೂಚನೆ ಕೇಂದ್ರ ಸರಕಾರಕ್ಕೆ ಕಳುಹಿಸಿದಾಗ, ಕೇಂದ್ರ ಸರ್ಕಾರ ಉತ್ಸಾಹದಿಂದ ಈ ಯೋಜನೆಗೆ ಮಂಜೂರಾತಿ ನೀಡಬೇಕಿತ್ತು. ಆದರೆ ಯೋಜನಾ ಆಯೋಗ ಆಲಮಟ್ಟಿ ಆಣೆಕಟ್ಟನ್ನು ಕೈಬಿಟ್ಟು ನಾರಾಯಣಪುರ ಯೋಜನೆಗಷ್ಟೇ ಒಪ್ಪಿಗೆ ನೀಡಿತು. ಯೋಜನಾ ಆಯೋಗದ ಉಪಾಧ್ಯಕ್ಷರಾದ ಅಶೋಕ ಮೆಹತಾರವರು 28.1.1964 ರಂದು ಬರೆದ ಒಂದು ಪತ್ರದಲ್ಲಿ ರಾಜ್ಯ ಸರಕಾರದ ಯೋಜನೆಯಲ್ಲಿ ತಿದ್ದುಪಡಿ ಮಾಡಿ ಗುಲ್ಬರ್ಗ ಜಿಲ್ಲೆಯ 6 ಲಕ್ಷ ಎಕ್ರೆಗೆ ನೀರುಣಿಸುವ ನಾರಾಯಣಪುರ ಯೋಜನೆಗಷ್ಟೆ ಒಪ್ಪಿಗೆ ನೀಡಿ, ಆಲಮಟ್ಟಿ ಯೋಜನೆಯನ್ನು ಕೈಬಿಡಲಾಗಿದೆಂದು ತಿಳಿಸಿದರು. ಅಶೋಕ ಮೆಹತಾ ಅವರ ಪತ್ರದ ವಿಚಾರ ಕಾಡ್ಗಿಚ್ಚಿನಂತೆ ಹರಡಿತು. ಕೃಷ್ಣಾ ಮೇಲ್ದಂಡೆ ಯೋಜನೆಯ ಕುರಿತು ಆಳವಾಗಿ ಅಭ್ಯಾಸ ಮಾಡಿ ಹೋರಾಟಕ್ಕೆ ನಮ್ಮನ್ನು ಪ್ರಚೋದಿಸುತ್ತಿದ್ದ ಎಂ.ಎಸ್.ಸುಗಂಧಿಯವರು ಕಮ್ಯುನಿಸ್ಟ್ ಪಾರ್ಟಿಯವರಾದ ನಾವು ಸೇರಿ, ನೇರ ಹೋರಾಟದ ವಿಚಾರ ಮಾಡಿದೆವು. ಹತ್ತು-ಹದಿನೈದು ಸದಸ್ಯರ ಚಿಕ್ಕ ಕಮ್ಯುನಿಸ್ಟ್ ಪಾರ್ಟಿ ನಮ್ಮದು. 50 ಕ್ಕೂ ಮೇಲ್ಪಟ್ಟು ಹಳ್ಳಿಗಳಲ್ಲಿ ಪ್ರಭಾವ ಹೊಂದಿದ ರೈತ ಸಂಘ, 3 ಸಾವಿರದಷ್ಟು ಸದಸ್ಯ ಹೊಂದಿದ ಕಾರ್ಮಿಕ ಸಂಘಟನೆಗಳ ಬೆಬಂಲವಿತ್ತು. ಆಂಧ್ರದಲ್ಲಿ ಕೃಷ್ಣಾನದಿಗೆ ನಾಗಾರ್ಜುನ ಸಾಗರ ಕೆಲಸ ಮುಗಿದು ರೈತರು ಧಾರಾಳ ಅಕ್ಕಿ ಬೆಳೆಯಲು ಪ್ರಾರಂಭಿಸಿದ್ದಾರೆ. ಮಹಾರಾಷ್ಟ್ರ ಕೋಯಿನಾ ಯೋಜನೆ ಪ್ರಾರಂಭ ಮಾಡಿದೆ. ಆದರೆ ಬಿಜಾಪುರ ಜಿಲ್ಲೆಯ ಬಡತನಕ್ಕೆ ರಾಮಬಾಣವಾಗಬೇಕಾಗಿರುವ ಆಲಮಟ್ಟಿ ಯೋಜನೆಯನ್ನು ಕೇಂದ್ರ ಸರಕಾರ ಕೈಬಿಟ್ಟಿದೆ. ನಿರ್ಣಯದ ಮೂಲಕ ಪ್ರತಿಭಟನೆಯೇ, ನೇರ ಹೋರಾಟದ ಮೂಲಕವೋ ಎಂಬ ಪ್ರಶ್ನೆ ಮುಂದೆ ಬಂದಾಗ ಜಿಲ್ಲೆಯ ಜನರ ದಾರುಣ ಪರಿಸ್ಥಿತಿ ನೇರ ಹೋರಾಟವೇ ಇದಕ್ಕೆ ಪರಿಹಾರವೆಂದು ಕಾಗಿತು. ಆ ಕೂಗಿಗೆ ಕಮ್ಯುನಿಸ್ಟ್ ಪಾರ್ಟಿ ಓಗೊಟ್ಟಿತು. 1964 ಫೆಬ್ರವರಿ ತಿಂಗಳಲ್ಲಿ ಕೇಂದ್ರ ಮತ್ತುರಾಜ್ಯ ಸರ್ಕಾರಕ್ಕೆ 30 ದಿವಸದ ನೋಟಿಸುಕೊಡಲಾಯಿತು. 1964 ಮಾರ್ಚ್ ತಿಂಗಳಲ್ಲಿ ಉಪವಾಸ ಸತ್ಯಾಗ್ರಹ ಪ್ರಾರಂಭವಾಯಿತು. ವಕೀಲರು, ವ್ಯಾಪಾರಸ್ಥರೂ, ಇಡೀ ನಗರಸಭೆ, ವಿದ್ಯಾರ್ಥಿಗಳೂ, ರೈತರೂ, ಬಿಜಾಪುರ, ಬಾಗಲಕೋಟೆಯ ಕಾರ್ಮಿಕರೂ ಹಾಗೆಯೇ ತಾಲೂಕುಗಳಲ್ಲಿ ತಾಲೂಕು ಕೇಂದ್ರ ಮತ್ತು ಹಳ್ಳಿಗಳಲ್ಲಿ ಪಕ್ಷ ಭೇದ ಮರೆತು ಹೋರಾಟ ನಡೆಯಿತು. ಈ ಹೋರಾಟದ ಬಿರುಸಿಗೆ ಓಗೊಟ್ಟು ಕೇಂದ್ರದ ಬೃಹತ್ ನೀರಾವರಿ ಮಂತ್ರಿ ಡಾ. ಕೆ.ಎಲ್.ರಾವ್ ಅವರು ಬಿಜಾಪುರಕ್ಕೆ ಬಂದರು. ಮನವಿಗಳನ್ನು ಸ್ವೀಕರಿಸಿ, ಆಲಮಟ್ಟಿ ಪ್ರದೇಶವನ್ನು ಸಂದರ್ಶಿಸಿ, ಅಲ್ಲಿಯೇ ಆಲಮಟ್ಟಿ ಮತ್ತು ನಾರಾಯಣಪುರ ಎರಡೂ ಯೋಜನೆಗಳನ್ನು ಕೈಗೊಳ್ಳುವ ನಿರ್ಧಾರವನ್ನು ಪ್ರಕಟಿಸಿದರು. ಅಡಿಗಲ್ಲು ಸಮಾರಂಭಕ್ಕೆ ಲಾಲಾಬಹುದ್ದೂರ್ ಶಾಸ್ತ್ರಿ ಬಂದರು. ಅಡಿಗಲ್ಲು ಸಮಾರಂಭದಲ್ಲಿ ಭಾಷಣ ಮಾಡುತ್ತಾ ಈ ಯೋಜನೆ ಐದು ವರ್ಷಗಳಲ್ಲಿ ಮುಗಿಯಬೇಕಾಗಿದೆ ನಿಜ, ಆದರೆ ಭಾರತ ದೇಶಕ್ಕೆ ಆಹಾರ ಧಾನ್ಯ ಬೇಕಾಗಿದೆ. ಈ ಯೋಜನೆಯನ್ನು ನಾಲ್ಕೇ ವರ್ಷದಲ್ಲಿ ಮುಗಿಸುತ್ತೀರೆಂದು ಭಾವಿಸಿದ್ದೇನೆಂದು ಹೇಳಿದರು. ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ ಲಾಲ ಬಹುದ್ದೂರ ಶಾಸ್ತ್ರಿಯವರ ಅಪೇಕ್ಷೆಯಂತೆ ಈ ಯೋಜನೆಯನ್ನು ನಾಲ್ಕೇ ವರ್ಷದಲ್ಲಿ ಮುಗಿಸುತ್ತೇವೆಂದು ವಚನ ಕೊಟ್ಟರು. ನಿಜಲಿಂಗಪ್ಪನವರು ತಮ್ಮ ವಚನದಂತೆ ನಡೆಯಲಿಲ್ಲ, ಬಾಗಲಕೋಟೆಯ ರಾಜಕೀಯಕ್ಕೆ ಮಣಿದರು. ಬಾಗಲಕೋಟೆ ಮುಳುಗುತ್ತದೆ, ಆಲಮಟ್ಟಿ ಆಣೆಕಟ್ಟು ಬೇಡವೆಂದು ಬಾಗಕೋಟೆಯಿಂದಲೇ ವಿಧಾನಸಭೆಗೆ ಬಂದು ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನವರು ಈ ನೀರಾವರಿ ಯೋಜನೆಗೆ ಅನಾಸ್ಥೆ ತೋರಿಸಿ ಬಿಜಾಪುರ ಜಿಲ್ಲೆಯ ರೈತರಿಗೆ ಮೋಸ ಮಾಡಿದರು. 1962 ರಿಂದಲೂ ಆರಿಸಿ ಹೋದ ಜನಪ್ರತಿನಿಧಿಗಳೂ ಯೋಜನೆಯ ಕುರಿತು ಚಿಂತಿಸಲಿಲ್ಲ. ಕಮ್ಯುನಿಸ್ಟ್ ಪಾರ್ಟಿ ಮತ್ತು ರೈತ ಸಂಘ ನಿರಂತರ ಮಧ್ಯ ಪ್ರವೇಶಿಸುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಬಿಜಾಪುರ, ಗುಲ್ಬರ್ಗ, ರಾಯಚೂರಿನ ರೈತ ಸಂಘಗಳು ಮಾತ್ರ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಚಳುವಳಿ ನಡೆಸುತ್ತಾ ಬಂದಿದೆ. ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಡೆಸಿದೆ.




1964 ರ ಪತ್ರಿಕೆಯೊಂದರಲ್ಲಿ ಆಲಮಟ್ಟಿ ಆಣೆಕಟ್ಟಿಗೆ ಸಂಬಂಧಪಟ್ಟ ವರದಿ

1963 ರಲ್ಲಿ ರಾಜ್ಯ ಸರಕಾರ ಆಲಮಟ್ಟಿ, ನಾರಾಯಣಪುರದಂಥ ಬೃಹತ್ ಯೋಜನೆಗಳನ್ನು ಕೈಗೊಂಡಾಗ, ಅವುಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಸಂಪನ್ಮೂಲಗಳ ಕ್ರೋಢೀಕರಿಸಿ, ಕಾಲುವೆಗಾಗಿ ಭೂಮಿ ಪಡೆಯುವ ವ್ಯವಸ್ಥೆ, ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ ಮುಂತಾದ ವಿಚಾರಗಳ ಕುರಿತು ನಿರ್ದಿಷ್ಟ ನಿಲುಮೆ, ಕಾರ್ಯಕ್ರಮಗಳನ್ನು ನಿರ್ಧರಿಸಿ ಕೊಳ್ಳಬೇಕಾಗಿತ್ತು. ಇವುಗಳ ವ್ಯವಸ್ಥೆಯಿಲ್ಲದೆ, ಇಂಥ ಬೃಹತ್ ಯೋಜನೆಗಳು ಸಫಲವಾಗುವುದಿಲ್ಲ. ಅದರ ಪ್ರತಿಫಲ, ರೈತರಿಗೆ ಲಭ್ಯವಾಗುವುದಿಲ್ಲ. ನಮ್ಮನ್ನಾಳುತ್ತಾ ಬಂದ ಕಾಂಗ್ರೆಸ್ ಮತ್ತಿನ್ನಿತರ ಪಕ್ಷಗಳ ಸರಕಾರಗಳು ಸಂಪನ್ಮೂಲ, ಪುನರ್ವಸತಿಗಳ ಕುರಿತು ಕಿಂಚಿತ್ತೂ ಚಿಂತಿಸಲಿಲ್ಲ. ಹೀಗಾಗಿ ಈಗ ನಾವು ಇಂಥ ಗಂಭೀರ ಪರಿಸ್ಥಿತಿಯನ್ನೆದುರಿಸುತ್ತಿದ್ದೇವೆ.

ಆಲಮಟ್ಟಿ ಆಣೆಕಟ್ಟನ್ನು ಕೈ ಬಿಟ್ಟಿದ್ದೇವೆ, ನೀರಾವರಿಯ ಎಕ್ರೆವಾರು ಖರ್ಚು ಜಾಸ್ತಿಯಾಗುತ್ತದೆಂಬ ಒಂದೇ ಒಂದು ಕಾರಣದಿಂದಾಗಿ, ಬೇರೆ ಪಕ್ಷಗಳು, ಸಂಘಟನೆಗಳು ಏನು ಮಾಡಬೇಕೆಂಬ ದೃಢ ನಿರ್ಧಾರಕ್ಕೆ ಬರಲು ಹಿಂಜರಿಯುತ್ತಿದ್ದಾಗ, ಈ ಮಹತ್ವದ ನೀರಾವರಿ ಯೋಜನೆಗಾಗಿ ಹೋರಾಟ ನಡೆಸಿದರೆ ಜನ ಬೆಂಬಲ ಸಿಕ್ಕೇ ಸಿಗುತ್ತದೆ, ಜನಬೆಂಬಲ ದೊರತರೆ, ನಾವು ಗುರಿಸಾಧಿಸಿಯೇ ತೀರುತ್ತೇವೆಂಬ ದೃಢ ಸಂಕಲ್ಪದಿಂದ ಕಮ್ಯುನಿಸ್ಟ್ ಪಾರ್ಟಿ 1964 ರಲ್ಲಿ ಹೋರಾಟ ಮಾಡಿದ್ದರಿಂದ ಇಂದು ಆಲಮಟ್ಟಿಯಲ್ಲಿ ಬೃಹದಾಕಾರದ ಜಲಾಶಯವನ್ನು ಕಾಣುತ್ತಿದ್ದೇವೆ. ಆಲಮಟ್ಟಿ ಆಣೆಕಟ್ಟೆಯ ಹಿನ್ನೀರಿನಿಂದ ಬಾಗಲಕೋಟೆಯ ಕೆಲವು ಭಾಗ ಮುಳುಗಡೆಯಾಗುತ್ತಿರುವುದನ್ನು ತಪ್ಪಿಸಲು ಅಂದು ಕಮ್ಯುನಿಸ್ಟ್ ಪಾರ್ಟಿ ಮತ್ತು ಎಂ.ಎಸ್. ಸುಗಂಧಿಯವರು ಮುಂದೆ ಮಾಡಿದ್ದ ಸೂಚನೆಗಳನ್ನು ರಾಜ್ಯ ಸರಕಾರ ಹಾಗೆಯೇ ಯೋಜನಾ ಆಯೋಗ ಮತ್ತು ಕೇಂದ್ರ ಸರಕಾರ ಒಪ್ಪಿಕೊಂಡಿದ್ದಾರೆ. ಬಾಗಲಕೋಟೆ ನಗರದ ಮುಳುಗಡೆಯ ಗಂಭೀರ ಸಮಸ್ಯೆ, ಪುನರ್ವಸತಿ ಗೊಂದಲ ಹಾಗೆಯೇ ಬಿಜಾಪುರ ಉತ್ತರ ಭಾಗದ ಜನತೆ ಆಲಮಟ್ಟಿ ಯೋಜನೆಗಾಗಿ ಹೋರಾಟ ನಡಸುತ್ತಿರುವಾಗ, ಬಾಗಲಕೋಟೆಯ ಕಾಂಗ್ರೆಸ್ ಪುಢಾರಿಗಳು ಬಾಗಲಕೋಟೆ ಮುಳುಗುತ್ತದೆಂಬ ನೆವ ಮುಂದೆ ಮಾಡಿ ಯೋಜನೆ ಅನುಷ್ಠಾನದಲ್ಲಿ ಬಾರದಂತೆ ರಾಜ್ಯ ಸರಕಾರದ ಮೇಲೆ ರಾಜಕೀಯ ಒತ್ತಡ ತರುವ ಆ ಮೂಲಕ ಜಿಲ್ಲೆಯ ರೈತರಿಗೆ ದ್ರೋಹ ಬಗೆಯುವ ಸಂದರ್ಭವೂ ಬರುತ್ತಿರಲಿಲ್ಲ.

ರೈತರ ಸಂಘದ ಸೂಚನೆಗಳನ್ನು ಡಾ. ಕೆ.ಎಲ್.ರಾವ್ ಅದಕ್ಕೆ ಒಪ್ಪಿಗೆ ನೀಡಬಹುದೆಂದು ಹೇಳಿದ್ದರು. ರಾಜ್ಯ ಸರಕಾರ ಬಹುತೇಕ ಮುತುವರ್ಜಿ ವಹಿಸಿಲ್ಲ. ಯೋಜನೆ ಮುಂದೆ ಹಾಕಲು ಅವರಿಗೆ ರಾಜಕೀಯ ನೆವಬೇಕಿತ್ತೆಂದು ಕಾಣುತ್ತದೆ. ಹಾಗಾಗಿ ಇಂದು ಹಲವಾರು ತರದ ಅಡೆತಡೆಗಳನ್ನು ವಿನಾಕಾರಣ ಎದುರಿಸುವ ಸಂಭವ ಉಂಟಾಗಿದೆ. ಬಂಡವಾಳಶಾಹಿ ವ್ಯವಸ್ಥೆಯ ಅವಶೇಷ ಇದಲ್ಲವೇ?

ಆಲಮಟ್ಟಿ ಆಣೆಕಟ್ಟಿನ ನೀರಾವರಿ ಪ್ರದೇಶ



ಕಥೆ

ಇದೊಂದು ಆಸ್ಟ್ರೇಲಿಯ ದೇಶದ ಕಥೆ. ಇದು ಸ್ವತಃ ಒಂದು ಖಂಡವೂ ಹೌದು. ಜಗತ್ತಿನ ಆರು ಖಂಡಗಳಲ್ಲಿ ಒಂದು ಇದು. ವಿಶಾಲವಾದ ದೇಶ. ಆದರೆ ಜನಸಂಖ್ಯೆ ವಿಪರೀತ ಕಡಿಮೆ. ಒಂದು ಚ.ಕಿ.ಮೀಟರಿಗೆ...... (ಅದೇ ಭಾರತದಲ್ಲಿ ಜನಸಾಂದ್ರತೆ.....) ಈ ಜನಸಂಖ್ಯೆಯ ಬಹುಭಾಗ ಯುರೋಪಿನಿಂದ ಬಹುದೂರದ ದೇಶವಾದ ಆಸ್ಟ್ರೇಲಿಯಾಕ್ಕೆ ವಲಸೆ ಬಂದವರು. ಹೀಗೆ ವಲಸೆ ಬಂದವರು ಆಸ್ಟ್ರೇಲಿಯಾದ ಮೂಲ ನಿವಾಸಿಗಳ - ಮಾವೋರಿಗಳ ಮೇಲೆ ಧಾಳಿ ಮಾಡಿ (ಅವರೇನು ಬಹಳ ದೊಡ್ಡ ಸಂಖ್ಯೆಯಲ್ಲಿರಲಿಲ್ಲ) ಆಕ್ರಮಣ ಮಾಡಿದರು. ಲಕ್ಷಾಂತರ ಸಾವು ನೋವುಗಳಿಗೆ ಈಡು ಮಾಡಿದರು. 1806 ಮೊದಲ್ಗೊಂಡು ಮೂಲನಿವಾಸಿಗಳನ್ನು ನಿರ್ನಾಮ ಮಾಡುವ ಸಮರ ಶುರುವಾಯಿತು. ಬಂಜರು ಸ್ಥಳಕ್ಕೆ ಅವರನ್ನು ತಳ್ಳಿದರು. ಕಾಂಗರೂಗಳನ್ನು ಕೊಲ್ಲುವಂತೆ ಗುಂಡಿಕ್ಕಿಕೊಂದರು, ವಿಷಮಿಶ್ರಿತ ಆಹಾರ ಕೊಟ್ಟು ಸಾಯಿಸಿದರು; ಮಾದಕ ಪಾನೀಯಗಳನ್ನು ಕುಡಿಸಿ, ತಮ್ಮ ತಮ್ಮೊಳಗೇ ಅವರು ಹೊಡೆದಾಡಿ ನಾಶವಾಗುವಂತೆ ಮಾಡಿದರು.

ಕುಕ್ ಆಸ್ಟ್ರೇಲಿಯವನ್ನು ಕಂಡುಹಿಡಿದಾಗ ಅಲ್ಲಿ 300,000 ಆದಿವಾಸಿ ಗಳಿದ್ದರಂತೆ. ಯಾವ ಗಣತಿಯ ಆಧಾರವೂ ಇಲ್ಲದ ಅಂದಾಜು ಸಂಖ್ಯೆ, ದೊಡ್ಡ ಸಂಖ್ಯೆ ಕೊಟ್ಟರೆ ಅಷ್ಟೊಂದು ಜನರನ್ನು ಇವರು ನಾಶ ಮಾಡಿದರಲ್ಲ ಎಂದು ಟೀಕಿಸಬಹುದು ಯಾರಾದರೂ! ಸುಮಾರು 200 ವರ್ಷ ಆದಮೇಲೆ - ಈಗ -ಇರುವ ಆದಿವಾಸಿಗಳೆಷ್ಟು? 46,000! ಇವರಲ್ಲದೆ 75,000 ಮಿಶ್ರತಳಿಯವರೂ ಇರುವರಂತೆ!

ಈ ಕ್ರೂರ ಘಟನೆಗಳ, ಮಾವೋರಿಗಳನ್ನು ಸದೆಬಡಿದು ಮೂಲೆಗುಂಪು ಮಾಡಿದ ಹಲವು ದಶಕಗಳ ನಂತರದ ಕಥೆಯಿದು. ಅಲ್ಲಿನ ಸರ್ಕಾರ ಈ ಕ್ರೌರ್ಯವನ್ನು ಕಾನೂನಾಗಿಸಿ ನಿರಂತರವಾಗಿಸಿದ ಪರಿಸ್ಥಿತಿಯ ದಾರುಣತೆ ಪ್ರತಿಬಿಂಬ. ದ.ಆಫ್ರಿಕಾ ದೇಶದ 'ಅಪಾರ್ಥೀಡ್' -ಕಪ್ಪು ಜನರನ್ನು ಗುಲಾಮರನ್ನಾಗಿ ನಡೆಸಿಕೊಳ್ಳಲು ರೂಪಿಸಿದ ದಬ್ಬಾಳಿಕೆ, ದಮನಕಾರಿ ನೀತಿ - ಬಗ್ಗೆ ಮಾತ್ರ ನಾವು ಕೇಳಿದ್ದೇವೆ. ಈ ಅಪಾರ್ಥೀಡ್ ಹಲವು ರೂಪದಲ್ಲಿ, ಹಲವು ದೇಶಗಳಲ್ಲಿ ಜನಾಂಗಗಳ ದಮನವಾಗಿ ವಿಶ್ವಾದ್ಯಂತ ಕೋಟ್ಯಾಂತರ ಜನರನ್ನು ಕಾಡುತ್ತಿರುವ ಒಂದು ಉದಾಹರಣೆ ಇಲ್ಲಿದೆ. ಬಂಡವಾಳಶಾಹಿಯ-ಅದರ ಮುಂದುವರಿದ ಕ್ರೌರ್ಯದ ಚರಮಘಟ್ಟ ಸಾಮ್ರಾಜ್ಯಶಾಹಿಯ ವಿಶ್ವವ್ಯಾಪಿ ದರ್ಬಾರಿನ ತುಳಿತದ ಈ ಜೀವಂತ ಉದಾಹರಣೆಯನ್ನು ಇಂತಹ ಹಲವು ಕಥೆ, ಕಾದಂಬರಿಗಳನ್ನು - ಆಫ್ರಿಕ, ದ.ಆಫ್ರಿಕ ಹಾಗೂ ಲ್ಯಾಟಿನ್ ಅಮೆರಿಕದ, ಏಷ್ಯಾದ ಕಥೆಗಳನ್ನು ದಯವಿಟ್ಟು ಓದಿ.

ಎನ್'ಗೂಲಾ

ಕೆಥರಿನ್ ಸುಸನ್ನ ಪ್ರಿಚರ್ಡ್ (ಆಸ್ಟ್ರೇಲಿಯ)

ಜೋಲಿ ಹೋಗುತ್ತಿದ್ದ ಮುದಿ ಮನುಷ್ಯ ಕುಪಿಸುತ್ತ ಗುಡ್ಡದ ಬದಿಯ ಕಲ್ಲು ಮರಳು ತುಂಬಿದ ದಾರಿಯನ್ನು ಕ್ರಮಿಸುತ್ತಿದ್ದ. ನೆಲದ ಮೇಲೆ ಆವರಿಸಿದ್ದ ಮುಳ್ಳೆಲೆಗಳೂ, ಮುಳ್ಳು ಗಂಟಿಗಳೂ ಆತನ ಕಾಲಿಗೆ ಚುಚ್ಚಿ ಗಾಯಗೊಳಿಸುತ್ತಿದ್ದವು.

ಹತ್ತಿರದಲ್ಲೇ ಇದ್ದ ನಗರಿಯಿಂದ ದಿನದ ಹೊರೆಯನ್ನು ತೀರಿಸಿಕೊಂಡು ಬರುತ್ತಿದ್ದ ಮೇರಿ ವೃದ್ಧನನ್ನು ದಾಟಿಕೊಂಡು ಬಂದಳು. ವೃದ್ಧ ಮನುಷ್ಯ ಒಮ್ಮೆ ಆಕೆಯನ್ನು ಕೂಗಿದ. ಕೂಗನ್ನು ಕೇಳಿ ಮೇರಿ ನಿಂತುಕೊಂಡಾಗ ಬಳಲಿದ್ದ ಮುದುಕ ಬವಳಿ ಬಂದವರಂತೆ ಆಕೆಯ ಕಡೆಗೆ ಜೋಲಿ ಹೋಗಿ ಬೀಳುವಂತಾದ. ಮೈಯಲ್ಲಿ ಬರೀ ಮೂಳೆಗಳು ಹರಕು ಮೆಟ್ಟುಗಳಲ್ಲಿದ್ದ ಬರಿಗಾಲುಗಳು, ದಟ್ಟವಾದ ಕೆಂಧೂಳು ಮುಸುಕಿಕೊಂಡಿತ್ತು. ''ಬ ಹ' ಳ' ದೂರದಿಂದ ಬಂದಿದ್ದೇನೆ" ಎಂದ ಬಸವಳಿದಿದ್ದ ಮುದುಕ.

"ಎನ್' ಗೂಲ!" ವೃದ್ಧ ಅರಚಿದ. "ದೇಶೀಯರ ಶಿಬಿರದಲ್ಲಿ ಎನ್'ಗೂಲ ಎಂಬ ಹುಡುಗಿಯಿದ್ದಳು, ನಿನಗೇನಾದರೂ ಗೊತ್ತೆ?"ವೃದ್ಧಪ್ರಶ್ನಿಸಿದ.

"ಎಂದೆಂದೂ ನಾನು ಆಕೆಯ ಬಗ್ಗೆ ಏನೇನೂ ಕೇಳಿ ತಿಳಿಯೆ" ಎಂದು ಮೇರಿನುಡಿದು ಮುಂದೆ ನಡೆದೇಬಿಟ್ಟಳು.

ಅಂದು ಶನಿವಾರ ಮಧ್ಯಾಹ್ನ. ಆಕೆ ಬೇಗನೆ ಮನೆ ಸೇರುವ ಅವಸರದಲ್ಲದ್ದಳು. ವಾರಾಂತ್ಯದ ವಿಶೇಷಕ್ಕೆ ಕೊಂಡಿದ್ದ ಮಾಂಸ, ತರಕಾರಿಗಳು ತುಂಬಿದ್ದ ಚೀಲವೊಂದು ಭುಜದಲ್ಲಿ ನೇತಾಡುತ್ತಿತ್ತು. ಹೆಚ್ಚು ಕಡಿಮೆ ಮೂವತ್ತರ ಮಹಿಳೆಆಕೆ. ಮೈಮೇಲೆ ಅಚ್ಚು ಕಟ್ಟಾದ ನೂಲಿನ ಬಟ್ಟೆ. ಎದುರಿಗೆ ಸಿಕ್ಕ ಮುದುಕನ ಕಣ್ಣುಗಳಲ್ಲಿ ಅಂದದ ಕಂದು ಬಣ್ಣದ ಹೊಳಪು ಥಲಥಳಿಸುತ್ತಿತ್ತು. ಆದರೆ ತನ್ನ ಕಂದು ಬಣ್ಣದ ಕೇಶರಾಶಿಗೆ ಕಪ್ಪಿನ ರಂಗು ಇದ್ದರೆ ಮೈ ಚರ್ಮವು ಕೊಂಚ ಪೀತಛಾಯೆಯಿಂದ ಸೊಬಗುಗೊಂಡಿತ್ತು.

ವೃದ್ಧ ಮನುಷ್ಯ ಈ ಭಾಗಕ್ಕೆ ಪರಕೀಯನೆಂದು ಆಕೆ ಊಹಿಸಿದಳು, ಗುಡ್ಡದಾಚೆಯ ಗುಡಿಸಲುಗಳಲ್ಲಿ ಜೀವಿಸುತ್ತಿದ್ದ ಬುಡಕಟ್ಟಿನ ಜನರಲ್ಲೆಲ್ಲ ಸುತ್ತಿಬಂದ ಬುಡಕಟ್ಟಿನವರ ಅವಶೇಷದಂತೆ ವೃದ್ಧ ತೋರುತ್ತಿದ್ದ. ಅದು, ಆ ಸ್ಥಳ-ವೃದ್ಧನ ಮತ್ತು ಆಕೆಯ ಕುಲಕ್ಕೆ ಸೇರಿದ್ದ, ಇಂದಿಗೂ ಕೂಡ ಮೂಲ ನಿವಾಸಿಗಳೇ ಎಂದು ಪರಿಗಣಿಸಲ್ಪಟ್ಟ ಸಮಿಶ್ರ ರಕ್ತದ ಸ್ತ್ರೀ ಪುರುಷರು ವಾಸಿಸುತ್ತದ್ದ ಬಹಿಷ್ಕೃತರ ಪ್ರದೇಶ।

ಮೇರಿಯು ಅಲ್ಲಿನ ಹಿರಿಯರೊಡನೆಲ್ಲ ಮೈತ್ರಿ ಭಾವನೆಯಿಂದಲೇ ಇದ್ದರೂ ಕೂಡ ಅಲ್ಲಿ ಕೂಡಿ ಬಿದ್ದಿದ್ದ ಅಲೆ ಮಾರಿಗಳಂತೆ ಬದುಕುತ್ತಿದ್ದ ಕಾಡು ಜನರ ಕುಟುಂಬಗಳೊಡನೆ ಮಾತ್ರ ಆಕೆ ಅಷ್ಟಕ್ಕಷ್ಟೇ. ಮೇರಿಯು ಇವರ ಸೆಟ್ಲ್‌ಮೆಂಟಿನ (ವಸಾಹತು) ಹೊರ ವಲಯದಲ್ಲಿ ವಾಸವಾಗಿದ್ದಳು.

ಮಿಷನ್ ಶಾಲೆಗ್ಗಳ ಶಿಕ್ಷಣ ಪಡೆದ ಆಕೆ ತನ್ನ ಮನೆಯನ್ನು ಅಚ್ಚುಕಟ್ಟಾಗಿಇಟ್ಟುಕೊಳ್ಳುತ್ತಿದ್ದಳು. ತಾನು ಕೂಡ ಗೌರವಸ್ಥರಂತೆ ಮತ್ತು ಬಿಳಿಯರ ತರಹ ಬಾಳಲು ಪ್ರಯತ್ನಿಸುತ್ತಿದ್ದಳು. ಅವಳ ಗಂಡ - ಆಕೆಯ ಬಣ್ಣದವನೇ ಆಗಿದ್ದರೂ ಹೆಂಡತಿ ಬಿಳಿಯರಂತೆ ಬಾಳಲು ಪ್ರಯತ್ನಿಸುವುದನ್ನು ಕಂಡು ಆಗಾಗ ಅಪಹಾಸ್ಯ ಮಾಡುತ್ತಿದ್ದ.

ಅವಳ ಮನೆ ಅಷ್ಟೇನೂ ದೂರವಿರಲಿಲ್ಲ. ಆ ಮನೆಯೊ! ಹರಕು - ಮುರುಕು ಕಟ್ಟಿಗೆಯ ತುಂಡು; ತಗಡುಗಳಿಂದ ನಿರ್ಮಿತವಾಗಿದ್ದ ವಕ್ರವಕ್ರವಾದ ಕುಳ್ಳಗಿನ ಕತ್ತಲುಗವಿ ಚಳಿಗಾಲದಲ್ಲಿ ಮಳೆ ಬಂದಾಗ ಅದೆಲ್ಲ ಛಾವಣಿಯಿಂದ ಇಳಿದು ಬರುತ್ತಿತ್ತು. ಆದರೆ ಈ ಗುಡಿಸಲು, ನೆಲೆಸಿದ ನೆಲ ಆಕೆಯ ಸ್ವಂತ ನೆಲ. ಮೇರಿಗೆ ಆ ಬಗ್ಗೆ ಬಹಳ ಅಭಿಮಾನವಿತ್ತು. ಹತ್ತಿರದ ನಗರಿಯಲ್ಲಿ ಕಸ - ಮುಸುರೆ ಹಾಗೂ ಇನ್ನಿತರ ಕೆಲಸಗಳನ್ನು ಮಾಡಿಕೊಂಡು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಸುರಕ್ಷಿತವಾಗಿ ವರುಷಗಟ್ಟಳೆ ಇಟ್ಟುಕೊಂಡು ಸಂಪಾದಿಸಿದ ಮನೆ ಅದು. ತನ್ನ ಜಮಿನಿನಲ್ಲೇ ಇನ್ನೂ ಉತ್ತಮವಾದ ಸ್ವಂತ ಮನೆಯನ್ನು ಕಟ್ಟಿಕೊಳ್ಳಲು ಆಕೆ ಶ್ರಮಿಸುತ್ತಿದ್ದಳು. ಅದಕ್ಕಾಗಿಯೇ ಜೀವಿಸಿದಂತಿದ್ದಳು.

ತನ್ನ ತೋಟವೆಂದು ಕರೆದುಕೊಳ್ಳುತ್ತಿದ್ದ ಆ ಒಣ ಮರಳುಭೂಮಿಯಲ್ಲಿ ಕೆಲವು ಟೊಮಾಟೊ ಹಾಗೂ ಇನ್ನಿತರ ತರಕಾರಿಗಳನ್ನು ನೆಟ್ಟಿದ್ದಳು. ಮೇರಿ ಬಂದು ತನ್ನ ಕುಟೀರವನ್ನು ಪ್ರವೇಶಿಸುವುದಕ್ಕಿಂತ ಮುನ್ನ ಅಂತಃಕರಣದಿಂದ ಅವನ್ನೆಲ್ಲ ಒಮ್ಮೆನೋಡುತ್ತಿದ್ದಳು.

ಪತಿರಾಯ ಊಟ ಮುಗಿಸಿಕೊಂಡು ಎಲ್ಲ ಹರವಿ ಮೇಜುಗಳನ್ನು ಕೊಳೆ ಮಾಡಿ ಹೊರಟುಹೋಗಿದ್ದ. ಮೇರಿ ಚೀಲವನ್ನು ಬದಿಗಿಟ್ಟು ಕೆಲಸಕ್ಕೆ ತೊಡಗಿದಳು. ಮಾಂಸ, ತರಕಾರಿಗಳನ್ನು ಅಣಿಗೊಳಿಸಿಕೊಂಡ[illegible]ಗಿ ಆರಂಭಿಸಿದಳು. ಇನ್ನೇನು ಟೆಡ್ [illegible] ಬಂದರೂ ಬರಬಹುದೆಂದು ಯೋಚ[illegible] ಮಾನ್ಯವಾಗಿ ಆತ ಶನಿವಾರ ವಿಪರೀತ ಕು[illegible]ಡೇ ಬರುತ್ತಿದ್ದ ಬಂದವನೇ ಹಾಸಿಗೆಯ ಮೇಲೆ ಬಿದ್ದುಕೊಳ್ಳುತ್ತಿದ್ದ. ಆದರೂ ಅವನಿಗಾಗಿ ಆಕೆ ನಿರೀಕ್ಷಿಸುತ್ತಿದ್ದಳು.

ಮೇರಿ ಮನೆಗೆಲಸವನ್ನೆಲ್ಲ ಪೂರೈಸಿ ಕ್ಷಣಕಾಲ ಹೊರಗೆ ಬಂದು ನಿಂತುಕೊಂಡಳು. ದಾರಿಯಲ್ಲಿ ತನಗೆ ಸಿಕ್ಕಿದ ಮುದುಕ ಸೆಟ್ಲ್‌ಮೆಂಟ್ ಕಡೆಗೇನಾದರೂ ಹೋದನೊ ಹೇಗೆ ಎಂದುಕೊಂಡಳು. ಪಾಪ, ಆ ಬಡ ಮುದುಕನೊಂದಿಗೆ ತಾನು ಅಷ್ಟೊಂದು ಒರಟಾಗಿ ವರ್ತಿಸಬಾರದಿತ್ತು ಎಂದುಕೊಂಡಳು. ಆ ದಾರಿಯ ಗುಂಟ ದೃಷ್ಟಿಯನ್ನು ಓಡಿಸಿ ನೋಡಿದಳು. ಗುಡ್ಡದ ತಲೆಯ ಮೇಲೆ ಆ ಮುದುಕ ಉರಿಹಾಕಿಕೊಂಡು ಕುಳಿತುದು ಕಂಡುಬಂತು. ಆತ ತನ್ನಷ್ಟಕ್ಕೆ ತಾನೇ ವ್ಯಾಕುಲ ಧ್ವನಿಯಲ್ಲಿ ಹಾಡಿಕೊಳ್ಳುತ್ತಿರುವಂತೆಯೂ ಮೇರಿಗೆ ಕೇಳಿತು.

ದೇಶೀಯ ಹೆಸರಿದ್ದ ಹುಡುಗಿಯೊಬ್ಬಳ ಬಗ್ಗೆ ಯಾಕೆ ಆತ ಪ್ರಶ್ನಿಸಿದ? ಅದು ಯಾರಿಗೂ ತಿಳಿಯದು! ಸೆಟ್ಲ್‌ಮೆಂಟಿನಲ್ಲಿರುವ ಈಗಿನ ಹುಡುಗಿಯರಿಗೆ ತಮಗೆ ಎಂದಾದರೂ ದೇಶೀಯ ಹೆಸರುಗಳಿದ್ದುವೆ ಎಂಬುದು ಕೂಡ ಗೊತ್ತಾಗದು. ಈ ಕಾಲದಲ್ಲಿ ಇವರೆಲ್ಲ ಅವರೆಲ್ಲ ಜೀನ್ಸ್, ಜಾನಿಗಳು, ಡಲ್ಸೀಗಳು, ಹೀಗೆ ಏನೇನೋ!

"ಎನ್' ಗೂಲ!" ಈ ಹೆಸರಿನೊಂದಿಗೆ ತನಗೇನೋ ಬಳಕೆ ಇದ್ದಂತಿತ್ತು ಎನಿಸಿ ಮೇರಿಯ ಮನಸ್ಸಿನ ಸ್ವಾಸ್ಥ್ಯ ಕದಡಿತು. ಈ ಹೆಸರನ್ನು ತಾನು ಈ ಮೊದಲು ಕೇಳಿದಂತೆನಿಸಿತು. ಆದರೆ "ಎಲ್ಲಿ, ಯಾವಾಗ?" ಎಂಬುದು ಮಾತ್ರ ಆಕೆಗೆ ಗೊತ್ತಾಗಲಿಲ್ಲ, ನೆನಪಾಗಲಿಲ್ಲ.

ಸೂರ್ಯ ಅಸ್ತಂಗತನಾಗುವ ಸಮಯ ಮೇರಿ ದಿನದ ದುಡಿಮೆಯ ಬೇಸರವನ್ನು ಕಳೆದುಕೊಳ್ಳಲು ಬಾಗಿಲ ಬಳಿಯಿದ್ದ ಪೆಟ್ಟಿಗೆಯೊಂದರ ಮೇಲೆ ವಿರಮಿಸಿದಳು. ಸೂರ್ಯಾಸ್ತದ ಸೊಬಗನ್ನು ಅಲ್ಲಿ ಕುಳಿತುಕೊಂಡು ಮೇರಿ ಅದೆಷ್ಟೋ ಸಲ ಸವಿದಿದ್ದಳು. ಆ ಪ್ರದೇಶದ ಗಲೀಜನ್ನೆಲ್ಲ ಧ್ವಂಸ ಮಾಡಲು ಗುಡ್ಡದ ಮೇಲಿನ ಆ ಹಾಳು ಮನೆಯೊಂದರಲ್ಲಿ ಕೂಡಿ ಹಾಕಲಾಗಿತ್ತು. ಅದರ ಕೊಳಕು ವಾಸನೆ ಬರುತ್ತಿತ್ತಾದರೂ ಗತಿಸಿದ ಸೊಬಗಿನ ಸಂಜೆಗಳ ಸ್ಮರಣೆಯಲ್ಲಿ ಅವಳಿಗೆ ಅದರ ಪರಿವೆಯೇ ಇರಲಿಲ್ಲ.

(ಮುಂದಿನ ವಾರಕ್ಕೆ)

ಪಾಬ್ಲೋ ನರೂಡ ಚಿಲಿ ದೇಶದ (ದಕ್ಷಿಣ ಅಮೆರಿಕದ ಪಶ್ಚಿಮ ತೀರದಲ್ಲಿ ದೇಶ) ಪ್ರಸಿದ್ಧ ಕವಿ. ತಾಮ್ರದ ಗಣಿಗಳ ಸಾವಿರಾರು ಕಾರ್ಮಿಕರ ಮುಂದೆ ತನ್ನ ಕವಿತೆಗಳನ್ನು ಹಾಡುವುದರಲ್ಲಿ ಸಂತೋಷ ಪಡುತ್ತಿದ್ದ, ಚಿಲಿದೇಶದ ಬಡವರೊಂದಿಗೆ ಬೆರತು ಹೋಗಿದ್ದ ಜನರ ಕವಿ. ಚಿಲಿದೇಶದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದ ಸಾಲ್ವಡೋರ್ ಅಲೆಂಡೆ ಜೊತೆಗಾರ.

ಅವರ ಜನಪರ ದೃಷ್ಟಿಕೋನಕ್ಕಾಗಿ ಅವರಿಗೆ ವಿಶ್ವದ ಪ್ರತಿಷ್ಠಿತ ನೋಬೆಲ್ ಬಹುಮಾನವನ್ನು ವಂಚಿಸಿದಾಗ ವಿಶ್ವದ ಖ್ಯಾತ ಸಾಹಿತಿಗಳು ಪ್ರತಿಭಟಿಸಿದರು. ನಂತರ ಅವರಿಗೆ ನೊಬೆಲ್ ಬಹುಮಾನ ನೀಡಲಾಯಿತು.

ಚಿಲಿಯಲ್ಲಿ ಅಲ್ಪಕಾಲ ಆಳಿದ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಅವರು ಭಾರತದಲ್ಲಿ ರಾಯಭಾರಿಯಾಗಿದ್ದರು. ಭಾರತದಲ್ಲಿ ಅವರು ಕಳೆದ ಕಾಲದ ಬಗ್ಗೆ ತಮ್ಮ ನೆನಪುಗಳಲ್ಲಿ ದಾಖಲಿಸಿದ್ದಾರೆ.

'ಅಮೇರಿಕದ ಹಿತ್ತಲು' ಎಂದು ಅವರು ಪರಿಗಣಿಸಿದ ಲ್ಯಾಟಿನ್ ಅಮೆರಿಕಾದ ದೇಶಗಳಲ್ಲಿ ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಗಳ ಹಾವಳಿಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಕವನದಲ್ಲಿ

ಯುನೈಟೆಡ್ ಫ್ರೂಟ್ ಕಂಪೆನಿ

ತುತ್ತೂರಿಯ ದನಿ ಆದಾಗ
ನೆಲದಮೇಲೆಲ್ಲ ಸಿದ್ಧವಾಗಿತ್ತು,
ಜೆಹೋವಾ ಭೂಮಿಯನ್ನು ಭಾಗಮಾಡಿ
ಕೋಕಾ ಕೋಲಾ ಕಂಪೆನಿಗೆ, ಅನಕೋಂಡಾ,
ಫೋರ್ಡ್ ಮೋಟರ್ಸ್ ಮತ್ತಿತರರಿಗೆ ಹಂಚಿದ.
ಫ್ರೂಟ್ ಕಂಪೆನಿ ತನಗಾಗಿ ಮೀಸಲಿರಿಸಿತು.
ಅಮೇರಿಕದ ಕೋಮಲ ನಡುವನ್ನು
ಎಲ್ಲಕ್ಕಿಂತ ರುಚಿಯಾದ
ನನ್ನ ದೇಶದ ಮುಖ್ಯ ಕರಾವಳಿಯನ್ನು.
ಅದೀನ ರಾಷ್ಟ್ರಗಳಿಗೆ
ಮತ್ತೆ ನಾಮಕರಣಮಾಡಿ
'ಬಾಳೆಹಣ್ಣಿನ ಗಣರಾಜ್ಯಗಳು',
ಎಂದು ಕರೆದು.
ಸತ್ತು ನಿದ್ರಿಸುವವರ ಮೇಲೆ
ಆ ಹಿರಿಮೆ, ಬಿಡುಗಡೆ, ಬಾವುಟವ ತಂದ
ಅಶಾಂತ ನಾಯಕರ ಮೇಲೆ
ಒಂದು ಹಾಸ್ಯ ನಾಟಕವನ್ನು ಹೂಡಿತು.
ಸ್ವತಂತ್ರ ರಾಷ್ಟ್ರಗಳನ್ನು ರದ್ದುಗೊಳಿಸಿ
ಸೀಸರನ ಕಿರೀಟಗಳನ್ನು ಬಹುಮಾನವಾಗಿ ನೀಡಿ
ಅಸೂಯೆಯನ್ನು ಒರೆಯಿಂದ ಹಿರಿದು,
ತ್ರುಹೀಯೋ ನೋಣ ಟಾಚೋ ನೋಣ
ಕಾರೀಯಾಸ್ ನೊಣ ಮಾರ್ತಿನೆಸ್ ನೊಣ
ಉಬಿಕೋ ನೊಣ
ಸಂಕೋಚ ರಕ್ತದ ಹಣ್ಣು ಮುರಬ್ಬದ
ಒದ್ದೆ ನೊಣಗಳು,
ಸಾಮಾನ್ಯ ಸಮಾಧಿಗಳ ಮೇಲೆ
ಜೇಗುಡುವ ಕುಡುಕ ನೋಣಗಳ ಗುಂಪು,
ಸರ್ಕಸ್ಸಿನ ನೋಣ
ದಬ್ಬಾಳಿಕೆಯಲ್ಲಿ ಚೆನ್ನಾಗಿ ಪಳಗಿದ ವಿವೇಕಿ
ನೊಣಗಳು
ಇವುಗಳ ಮಧ್ಯೆ
ಫ್ರೂಟ್ ಕಂಪೆನಿ ಅಣಿಮಾಡಿತು ಸರ್ವಾಧಿಕಾರಕ್ಕೆ.
ರಕ್ತದಾಹದ ನೊಣಗಳ ಮಧ್ಯೆ
ಕಾಫಿಯನ್ನೂ ಹಣ್ಣನ್ನೂ ತುಂಬಿಕೊಂಡು
ಹೋಗಲು ಫ್ರೂಟ್ ಕಂಪೆನಿ ತನ್ನ ಹಡಗುಗಳನ್ನು
ದಡ ಸೇರಿಸುತ್ತಿದೆ;
ನಮ್ಮ ಮುಳುಗಡೆಯಾದ ನೆಲದ ನಿಧಿ
ತಟ್ಟೆಯಲ್ಲಿಟ್ಟು ಕೊಟ್ಟಂತೆ
ನಾವೆಗಳ ಒಳಕ್ಕೆ ಹರಿಯುತ್ತದೆ.
ಈ ನಡುವೆ
ರೆಡ್ ಇಂಡಿಯನ್ನರು
ಬಂದರದ ಸಕ್ಕರೆಯ ಬಿರುಕುಗಳಲ್ಲಿ
ಬಿಳುತ್ತ
ಮುಂಜಾವದ ಮಂಜಿನಲ್ಲಿ ಕೊನೆಯ ಸಂಸ್ಕಾರಕ್ಕೆ
ಸಿದ್ಧರಾಗಿದ್ದಾರೆ;
ಹೆಸರಿಲ್ಲದ ಒಂದು ವಸ್ತುವಿನಂತೆ
ಉರುಳಿ ಬಿದ್ದ ಸೊನ್ನೆಯಂತೆ,
ರಾಶಿಯ ಮೇಲೊಗೆದ
ಸತ್ತ ಹಣ್ಣಿನ ಗೊಂಚಲಿನಂತೆ
ಉರುಳುತ್ತದೆ ಒಂದು ದೇಹ.

ಸಿನೆಮಾ ಇಂದು ಅತ್ಯಂತ ಜನಪ್ರಿಯ ಮನರಂಜನಾ ಸಾಮೂಹಿಕ ಮಾಧ್ಯಮ. 1895 ರಲ್ಲಿ ಜಗತ್ತಿನ ಮೊದಲ ಸಿನೆಮಾ ತಯಾರಿಸಲಾದರೂ, ಕೇವಲ 20 ವರ್ಷಗಲ್ಲಿ ಅದು ಅತ್ಯಂತ ಜನಪ್ರಿಯ ಮಾಧ್ಯಮ ಮಾತ್ರವಲ್ಲ, ಮೂರನೇ ಅತಿದೊಡ್ಡ ಉದ್ಯಮ ಸಹ ಆಗಿತ್ತು. 20ನೇ ಶತಮಾನದ ಮಾನವ ಸಮಾಜದ ವೈಜ್ಞಾನಿಕ, ಕಲಾ ಪ್ರಾಕಾರದ ಉನ್ನತ ಸಾಧನೆಗಳಲ್ಲೊಂದು ಸಿನೇಮಾ. ಸಿನೇಮಾ ಒಂದು ಪ್ರಮುಖ ಕಲಾ ಮಾಧ್ಯಮ ಸಹ. ಸಿನೇಮಾ ಉದ್ಯಮ ಅತಿಯಾಗಿ ಕಮರ್ಶಿಯಲ್ ಆಗಿರುವುದರಿಂದಲೂ, ಜನರನ್ನು ಕಲೆಯಿಂದ ದೂರವಿಡುವ ಆಳುವ ವರ್ಗಗಳ ಹುನ್ನಾರಗಳಿಂದಲೂ ಅತ್ಯುತ್ತಮ ಕಲಾಕೃತಿಗಳಾದ ಸಿನೇಮಾಗಳು ಜನಸಾಮಾನ್ಯರಿಗೆ ನಿಲುಕದ್ದಾಗಿದೆ. ಸಿನೇಮಾದ ಈ ಆಯಾಮವನ್ನು ಜನಪ್ರಿಯ ಮಾಡಲು 70 ರ ದಶಕದಲ್ಲೇ 'ಫಿಲಂ ಸೊಸೈಟಿ'ಗಳು ಹುಟ್ಟಿಕೊಂಡವು. ಜಗತ್ತಿನ ಮಹಾನ್ ಸಿನೇಮಾ ಕಲಾಕೃತಿಗಳು ಸೊಸೈಟಿಗಳ ಮೂಲಕ ಜನಸಾಮಾನ್ಯರನ್ನು ತಲುಪುತ್ತಿವೆ. ಬೆಂಗಳೂರು ಫಿಲಂ ಸೊಸೈಟಿ 'ಚಳುವಳಿ'ಯ ಪ್ರಬಲ ಕೇಂದ್ರಗಳಲ್ಲಿ ಒಂದಾಗಿತ್ತು. ಬೆಂಗಳೂರು ಫಿಲಂ ಸೊಸೈಟಿ ಇಂತಹ ಸೊಸೈಟಿಗಳಲ್ಲೊಂದು. 21ನೇ ಶತಮಾನದ ಆದಿವರ್ಷದಲ್ಲಿ 20ನೇ ಶತಮಾನದ ಸಿನೇಮಾದ 'ಸಿಂಹಾವಲೋಕನ' ಮಾಡುವ ಮಹತ್ವಾಕಾಂಕ್ಷೆಯನ್ನು ಈ ಸೊಸೈಟಿ ಹೊಂದಿದೆ. ಇದರ ಮೊದಲ ಭಾಗವಾಗಿ 20ನೇ ಶತಮಾನದ 10 'ಮಹಾನ್ ಸಿನೇಮಾ'ಗಳ ಪ್ರದರ್ಶನವನ್ನು ಬಾಲಭವನದಲ್ಲಿ ಜನವರಿ 28 ರಿಂದ ಫೆಬ್ರವರಿ 6 ರವರೆಗೆ ಹಮ್ಮಿಕೊಂಡಿತ್ತು. ಅಲ್ಲಿ ತೋರಿಸಿದ 10 ಸಿನೇಮಾಗಳೇ ಶತಮಾನದ ಮಹಾನ್ ಸಿನೇಮಾಗಳು ಎಂದು ಎಲ್ಲರೂ ಒಪ್ಪಲಾರರು. ಆದರೂ ಇವುಗಳಲ್ಲಿ 'ಪೊಟೆಮ್‌ಕಿನ್ ಯುದ್ಧ ನೌಕೆ' 'ಬೈಸಿಕಲ್ ಕಳ್ಳರು' ಮತ್ತು 'ಏಳು ಬಂಟರು' ಸಿನೇಮಾಗಳು ದುಡಿಯುವ ಜನರ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ ಹಾಗೂ ಮಹಾನ್ ಚಿತ್ರಗಳು. ಇವುಗಳ ಪರಿಚಯ ಮಾಡಬಯಸುತ್ತದೆ.

ಈ ವಾರ 1925 ರಲ್ಲಿ ಮಹಾನ್ ರಶ್ಯಾನ್ ನಿರ್ದೇಶಕ ಸರ್ಜೆಯ್ ಐಸನ್ ಟೈನ್ 1905 ರ ರಶ್ಯನ್ ಕ್ರಾಂತಿಯ ಮೇಲೆ ತಯಾರಿಸಿದ ಚಿತ್ರ 'ಯುದ್ಧ ನೌಕೆ ಪೊಟೆಮ್ಕಿನ್'ದ ಪರಿಚಯ. ಚಿತ್ರದ ಸ್ಥೂಲ ಕಥಾವಸ್ತು, ಅದರ ಕಲಾತ್ಮಕ ಮಹತ್ವ, ರಶ್ಯನ್ ಸಿನೇಮಾದ ಹಿನ್ನೆಲೆ, ಐಸೈನ್ ಸ್ಟೈನ್ ಪರಿಚಯ ಇದೆ ಇಲ್ಲಿ.

ಆಗಿನ ಜರ್ಮನಿಯಲ್ಲಿ ಒಂದು ವರ್ಷ ಕಾಲ ಈ ಚಿತ್ರವನ್ನು ನಿಷೇಧಿಸಿದ್ದರಂತೆ. ಭಾರಿ ಪ್ರತಿಭಟನೆ ನಂತರ ನಿಷೇಧ ತೆಗೆದಾಗಲೂ ಜರ್ಮನ್ ಸೈನಿಕರು ಅದನ್ನು ನೋಡಬಾರದು ಎಂಬ ನಿರ್ಬಂಧ ಇತ್ತಂತೆ. 'ಒಡೆಸ್ಸಾ ಮೆಟ್ಟಿಲು'ಗಳ ಪ್ರಸಿದ್ಧ ದೃಶ್ಯವನ್ನು 'ಕಟ್'ಮಾಡಲಾಗಿತ್ತು. ಪೊಟೆಮ್ಕಿನ್ ಅಷ್ಟು ಜನಪ್ರಿಯತೆ ಪಡೆದ ಚಿತ್ರ. 'ಪೊಟೆಮ್ಕಿನ್' ಸಿನೇಮಾ ಮಾನವ ಕುಲದ ಅದರಲ್ಲೂ ದುಡಿಯುವ ಜನರ ಹೆಮ್ಮೆಯ ಕಲಾತ್ಮಕ ಪರಂಪರೆಯ ಪ್ರಮುಖ ಭಾಗ.

ಸಮಗ್ರ ಸಂಕೇತವಾಗಿಬಿಡುತ್ತದೆ.

ಐಸೆನ್‌ಸ್ಟೈನ್‌ನ ಕಲಾಕೃತಿಗಳಲ್ಲಿ ಹೆಚ್ಚು ಭಾಗ 'ಸಮೂಹದ ಮಹಾಕಾವ್ಯ' ಗಳು ಎನ್ನಬಹುದು. ಪೊಟೆಮ್‌ಕಿನ್ ಕೂಡ ಹಾಗೆ. ಇಲ್ಲಿ ಯಾವುದೇ ಪಾತ್ರ ಮುಖ್ಯವಾಗದೆ ಇಡೀ ಕ್ರಾಂತಿಯೇ ಮುಖ್ಯವಾಗುತ್ತದೆ. ಒಂದೊಂದು ಪಾತ್ರವೂ ಒಂದೊಂದು ವಿಶಿಷ್ಟ ಅಸ್ತಿತ್ವವೆನಿಸಿ ಮೆರೆಯದೆ, ಅದು ಒಂದು ವರ್ಗದ 'ವ್ಯಕ್ತಿ ಮಾದರಿ'ಯಾಗುತ್ತದೆ. ವ್ಯಕ್ತಿ ಮಾದರಿಗಳಿಂದ ಬದುಕಿನ ಗತಿ ರೂಪಿತವಾಗುವುದನ್ನು ಕಾಣಿಸಬೇಕು ಎಂಬ ಆತನ'ವ್ಯಕ್ತಿ ಮಾದರಿ ಸಿದ್ಧಾಂತ' (Typage)ವನ್ನು ಈ ಚಿತ್ರ ಸಮರ್ಥಿಸುತ್ತದೆ. ಈ ಕಾರಣದಿಂದಲೇ ಈ ಚಿತ್ರದ ಪಾತ್ರಗಳಿಗೆ ನುರಿತ ನಟರನ್ನು ಬಳಸಿಕೊಳ್ಳದೆ, ಬೇರೆ ಬೇರೆ ವೃತ್ತಿಗಳಿದ್ದ ಸಾಮಾನ್ಯ ಜನರನ್ನೇ ಬಳಸಿಕೊಳ್ಳಲಾಗಿದೆ.

ಈ ಚಿತ್ರದ ಒಟ್ಟು ಕಟ್ಟಡದಲ್ಲಿ ಕಾಣುವ ಐಕ್ಯತೆ, ಅದನ್ನು ಸಾಧಿಸಿದ ಬಗೆ ಇವುಗಳನ್ನು ಕುರಿತು

ಶತಮಾನದ ಹತ್ತು ಮಹಾನ್ ಸಿನಿಮಾಗಳಲ್ಲೊಂದು

'ಪ್ರೊಟೆಮ್ಕಿನ್ ಯುದ್ಧನೌಕೆ'



1905 ರ ರಶ್ಯನ್ ಕ್ರಾಂತಿಯ ಬಗ್ಗೆ 'ಸಮೂಹ ಕಾವ್ಯ'

'ಯುದ್ಧ ನೌಕೆ ಪೊಟೆಮ್ಕಿನ್' ಕಥಾವಸ್ತು

1905 ರ ರಷ್ಯನ್ ಕ್ರಾಂತಿಯಲ್ಲಿನ ಒಂದು ಪ್ರಸಂಗವನ್ನು ಕುರಿತದ್ದು 'ಬ್ಯಾಟಲ್‌ಶಿಪ್ ಪೊಟೆಮ್‌ಕಿನ್'. ಪೊಟೆಮ್‌ಕಿನ್ ಎಂಬ ಹೆಸರಿನ ಯುದ್ಧನೌಕೆಯಲ್ಲಿ ನಾವಿಕರು ಅಧಿಕಾರಿಗಳ ಕ್ರೌರ್ಯದ ವಿರುದ್ಧ ಬಂಡೆದ್ದು ಹೋರಾಡಿದ ಕಥೆ, ಕಥೆಯ ಸ್ಥೂಲರೂಪ ಹೀಗಿದೆ:

ಭಾಗ-1: ಯುದ್ಧ ನೌಕೆ ಪೊಟೆಮ್‌ಕಿನ್ ರೇವಿನಲ್ಲಿ ಲಂಗರು ಹಾಕಿ ನಿಂತಿದೆ. ಅದರಲ್ಲಿನ ನಾವಿಕರ ಬದುಕಿನ ಸ್ಥಿತಿ ಹೀನವಾಗಿದೆ. ಇದರ ಮೇಲೆ ಅಧಿಕಾರಿಗಳ ಕ್ರೌರ್ಯ ದಬ್ಬಾಳಿಕೆಗಳಿಂದ ಅವರು ರೋಸಿ ಹೋಗಿದ್ದಾರೆ: ಅವರಿಗೆ ಕೊಡುವ ಮಾಂಸ ಕೊಳೆತು ಹುಳುವಾದದ್ದು. ಅವರಲ್ಲೇ ಕೆಲವರು, ಇಡೀ ರಷ್ಯಾ ಕ್ರಾಂತಿಗೆ ಸಿದ್ಧಗೊಳ್ಳುತ್ತಿರುವುದನ್ನು ಅರಿತು, ತಾವೂ ಕ್ರಾಂತಿಯಲ್ಲಿ ಸೇರಿಕೊಳ್ಳಬೇಕೆಂದು ಪ್ರಚಾರ ಮಾಡುತ್ತಾರೆ. ನಾವಿಕರೆಲ್ಲರೂ ಬಂಡೇಳುತ್ತಾರೆ. ಹುಳುಗೊಳೆತ ಮಾಂಸವನ್ನು ತಿರಸ್ಕರಿಸುತ್ತಾರೆ.

ಭಾಗ-2: ಅಧಿಕಾರಿಗಳು ದಂಗೆಯನ್ನಡಗಿಸಲು ಯತ್ನಿಸುತ್ತಾರೆ. ಕ್ರಾಂತಿಕಾರಿ ನಾವಿಕರನ್ನು ಟಾರ್ಪಲಿನ್‌ನಲ್ಲಿ ಕಟ್ಟಿ ಗುಂಡು ಹಾರಿಸಲು ಆಜ್ಞೆ ಮಾಡುತ್ತಾರೆ. ಆದರೆ, ನಾವಿಕರ ಮನವಿ ಕೇಳಿದ ಕೆಳ ಅಧಿಕಾರಿಗಳು ಗುಂಡು ಹಾರಿಸಲು ಒಪ್ಪದೆ ನಿಲ್ಲುತ್ತಾರೆ. ಅಧಿಕಾರಿಗಳು ಹತಾಶರಾಗಿ ತಾವೇ ಗುಂಡು ಹಾರಿಸುತ್ತಾರೆ. ನಾವಿಕರು ಮೇಲೆ ಬಿದ್ದು ಅಧಿಕಾರಿಗಳನ್ನು ಕೊಲ್ಲತೊಡಗುತ್ತಾರೆ. ಕೊನೆಯಲ್ಲಿ ಮುಖ್ಯ ಅಧಿಕಾರಿಯ ವಧೆಯಾಗುತ್ತದೆ. ಜತೆಗೆ ನಾವಿಕರ ನಾಯಕನಾದ ವಾಕುಲಿಂಚುಕ್ ಎಂಬಾತ ಕೂಡ ಗುಂಡಿಗೆ ಬಲಿಯಾಗಿ ಸಾಯುತ್ತಾನೆ.

ಭಾಗ-3 : ನಾವಿಕರೆಲ್ಲರೂ ಕೂಡಿ ವಾಕುಲಿಂಚುಕ್‌ನ ಶವವನ್ನು ರೇವು ಪಟ್ಟಣವಾದ ಒಡೆಸ್ಸ ನಗರವಿರುವ ತೀರಕ್ಕೆ ಒಯ್ದು ಅಲ್ಲಿ ಟೆಂಟ್ ಹಾಕಿ ಅದರಲ್ಲಿಟ್ಟು ಗೌರವ ಸಲ್ಲಿಸುತ್ತಾರೆ. ಒಡೆಸ್ಸ ನಗರದ ಜನರೆಲ್ಲ ಅಲ್ಲಿ ಬಂದು ಕೂಡುತ್ತಾರೆ. ಎಲ್ಲರೂ ಮೃತನ ಬಗ್ಗೆ ಅನುಕಂಪ ತಾಳಿ ಗೌರವ ಸಲ್ಲಿಸುತ್ತಾರೆ; ನಾವಿಕರ ಕ್ರಾಂತಿಯ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತಾರೆ. ಯುದ್ಧನೌಕೆಯ ಮೇಲೆ ನಾವಿಕರು ಕ್ರಾಂತಿಯ ಕೆಂಬಾವುಟ ಹಾರಿಸುತ್ತಾರೆ.

ಭಾಗ-4: ಒಡೆಸ್ಸ ಜನ ನಾವಿಕರೊಡನೆ ಒಂದಾಗಿದ್ದಾರೆ. ದೋಣಿಗಳಲ್ಲಿ ಆಹಾರವನ್ನು ಒಯ್ದು ನೌಕೆಯಲ್ಲಿರುವ ನಾವಿಕರಿಗೆ ಕೊಟ್ಟು ಅವರನ್ನು ಅಭಿನಂದಿಸುತ್ತಾರೆ. ತೀರದ ಉದ್ದಕ್ಕೂ, ತೀರದಲ್ಲಿ ಕಟ್ಟಿರುವ ಕಲ್ಲಿನ ಸೋಪಾನಪಂಕ್ತಿಗಳನ್ನು ತುಂಬಿ ಜನಸಂದಣಿ ನೆರೆದಿದೆ. ಇದ್ದಕ್ಕಿದ್ದಂತೆ, ಸೋಪಾನದ ಮೇಲ್ಭಾಗದಿಂದ ಬಂದೂಕುಧಾರಿ ಸಿಪಾಯಿಗಳು ಕಾಣಿಸಿಕೊಳ್ಳುತ್ತಾರೆ; ಜನರ ಮೇಲೆ ಗುಂಡು ಹಾರಿಸತೊಡಗುತ್ತಾರೆ. ಕೆಳಗಿನಿಂದ ಕುದುರೆ ಸವಾರರು ಜನರ ಮೇಲೆ ಧಾಳಿ ಮಾಡುತ್ತಾರೆ. ವೃದ್ಧರು, ಹೆಂಗಸರು, ಮಕ್ಕಳು, ಭಿಕ್ಷುಕರು, ಅಂಗವಿಕಲರು - ಮೊದಲಾಗಿ ನಗರದ ಜನಸಂದಣಿಯ ಮೇಲೆ ಕ್ರೂರ ಹಲ್ಲೆ ನಡೆಯುತ್ತದೆ. ಅವರಿವರೆನ್ನದೆ ಎಲ್ಲರನ್ನೂ ಕಗ್ಗೊಲೆ ಮಾಡಲಾಗುತ್ತದೆ. ಜನ ಗುಂಡಿಗೆ ಸಿಕ್ಕು, ಬೂಟುಕಾಲಿಗೆ ಸಿಕ್ಕು, ಕುದುರೆಗಳ ತುಳಿತಕ್ಕೆ ಸಿಕ್ಕು ಸಾಯುತ್ತಾರೆ, ಗಾಯಗೊಂಡು ನೆಲಕ್ಕೊರಗುತ್ತಾರೆ. ತಟ್ಟನೆ ಪೊಟೆಮ್‌ಕಿನ್‌ನ ನಾವಿಕರು ಜಾಗೃತರಾಗುತ್ತಾರೆ. ಅವರ ನೌಕೆಯ ಫಿರಂಗಿಯನ್ನು ಈ ಕಡೆ ಮುಖ ಮಾಡಿ, ಅಲ್ಲೆ ಮೇಲುಭಾಗದಲ್ಲಿದ್ದ ಒಡೆಸ್ಸ ಥೇಟರ್(ಸೈನ್ಯಠಾಣೆ) ಮೇಲೆ ಗುಂಡಿನ ಮಳೆಗರೆಯುತ್ತಾರೆ. ಸೈನ್ಯ ಠಾಣೆ ನಾಶವಾಗುತ್ತದೆ.

ಭಾಗ-5 : ಪೊಟೆಮ್‌ಕಿನ್ ನೌಕೆಯನ್ನು ಹತೋಟಿಗೆ ತೆಗೆದುಕೊಳ್ಳಲು ಆಡಳಿತ ನೌಕಾ ಸೇನೆಯನ್ನು ಕರೆಸುತ್ತದೆ. ನೌಕಾಪಡೆ ಬಂದು ಪೊಟೆಮ್‌ಕಿನ್‌ನನ್ನು ಸುತ್ತುವರಿಯುತ್ತದೆ. ಆದರೆ ಪೊಟೆಮ್‌ಕಿನ್‌ನ ನಾವಿಕರು ನೌಕಾಪಡೆಯ ನಾವಿಕರಲ್ಲಿ ಭಾತೃತ್ವದ ಮನವಿ ಮಾಡಿಕೊಳ್ಳುತ್ತಾರೆ. ತುದಿಯಲ್ಲಿ ನೌಕಾಪಡೆಯವರೂ ಈ ನಾವಿಕರ ಮೇಲೆ ಕೈ ಮಾಡಲು ನಿರಾಕರಿಸಿದಾಗ, ಜಯಶೀಲರಾದ ಪೊಟೆಮ್‌ಕಿನ್ ನೌಕೆಯ ನಾವಿಕರು ಕೆಂಬಾವುಟ ಹಾರುತ್ತಿರುವ ವಿಜಯ ನೌಕೆಯನ್ನು ನಡೆಸಿಕೊಂಡು ಹೊರಡುತ್ತಾರೆ.

ರಶ್ಯನ್ ಸಿನೇಮಾದ ಹಿನ್ನೆಲೆ

ಸಿನೆಮಾ ಹುಟ್ಟಿದ್ದು 1859 ರಲ್ಲಿ, ಒಂದು ವರ್ಷ ಕಳೆಯುವುದರೊಳಗೆ ಜಗತ್ತಿನ ಬಹುಭಾಗಗಳಲ್ಲಿನ ಸಿನಿಮಾ ಪ್ರದರ್ಶನ ಆರಂಭವಾಗಿತ್ತು. ಮೊದಮೊದಲು ಚಿತ್ರಗಳೆಲ್ಲ ತಯಾರಾಗುತ್ತಿದ್ದುದು ಫ್ರಾನ್ಸ್, ಅಮೆರಿಕಾ, ಇಂಗ್ಲೆಂಡ್‌ಗಳಲ್ಲಿ. ಕ್ರಮೇಣ ಯುರೋಪಿನ ಅನೇಕ ದೇಶಗಳು ಚಿತ್ರ ತಯಾರಿಕೆಯಲ್ಲಿ ತೊಡಗಿದವು. ರಷ್ಯಾ ಕೂಡ ಚಿತ್ರ ತಯಾರಿಕೆಯನ್ನು ಪ್ರಾರಂಭಿಸಿತ್ತು. 1917 ರಲ್ಲಿ ರಷ್ಯಾದ ಮಹಾಕ್ರಾಂತಿ ಸಂಭವಿಸಿ ಹೊಸ ಆಡಳಿತ ಬಂದಾಗ, ರಾಜಕೀಯ ಪರಿವರ್ತನೆಯ ಜೊತೆಗೆ ಜನಜೀವನದಲ್ಲೂ ಮಹತ್ವದ ಕ್ರಾಂತಿಯುಂಟಾಯಿತು. ವಿವಿಧ ಕಲೆಗಳಿಗೆ ಹೊಸ ಸ್ಫೂರ್ತಿ ದೊರಕಿತು. ಲೆನಿನ್‌ನಿಂದ ಮೊದಲಾಗಿ ಸಿನಿಮಾಕ್ಕೆ ವಿಶೇಷ ಪ್ರೋತ್ಸಾಹ ದೊರಕಿತು.

ಆಗ, ಜನಜೀವನದ ವಾಸ್ತವಫನ್ನು ಬಿಂಬಿಸುವ, ಜನರನ್ನು ಹೊಸಜೀವನ ಕ್ರಮಕ್ಕೆ ಹುರಿಗೊಳಿಸುವ ಕರ್ತವ್ಯಕ್ಕೆ ಸಿನೆಮಾ ತನ್ನನ್ನು ಮೀಸಲು ಮಾಡಿಕೊಂಡಿತು. ಜಿಗಾ ವೆರ್‌ಟೋವ್ ಎಂಬಾತನ ನೇತೃತ್ವದಲ್ಲಿ KIND RAVDA (ಸತ್ಯಚಿತ್ರ) ಎಂಬ ಸುದ್ದಿ ಚಿತ್ರಗಳು ತಯಾರಾಗ ತೊಡಗಿದವು. ಕೆಮೆರಾ ಎಂಬುದು ವಾಸ್ತವವನ್ನು ಕಾಣಲಿಕ್ಕೆ ಬಳಸಬೇಕಾದ ಹೊಸ ಕಣ್ಣು ಎಂಬುದು ಅವರ ಸಿದ್ಧಾಂತವಾಗಿತ್ತು. ಮುಂದೆ ಐಸೆನ್‌ಸ್ಟೈನ್ ಛಾಯಾಗ್ರಾಹಕನಾಗಿ ದುಡಿದ ಟಿಸ್ಸೇ ಈ ಗುಂಪಿನಲ್ಲಿದ್ದವನು. ಅದೇ ಕಾಲಕ್ಕೆ ಇನ್ನೊಂದು ಗುಂಪು ಕುಲೆಶೊವ್ ಎಂಬವನ ನೇತೃತ್ವದಲ್ಲಿ ಸಿನಿಮಾ ಮಾಧ್ಯಮದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡತೊಡಗಿತ್ತು. ಮುಂದೆ ಮಹಾ ನಿರ್ದೇಶಕನೆಂದು ಪ್ರಸಿದ್ಧನಾದ ಪುಡೊವ್‌ಕಿನ್ ಈ ಗುಂಪಿನಲ್ಲಿದ್ದ.

ಪೊಟೆಮ್ಕಿನ್ ಮಹತ್ವ

1905 ರ ರಷ್ಯನ್ ಕ್ರಾಂತಿಯ ಬಗ್ಗೆ ಚಿತ್ರ ನಿರ್ಮಿಸುವ ಉದ್ದೇಶದಿಂದ ಐಸೆನ್‌ಸ್ಟೈನ್ ಭಾರೀ ವಿಸ್ತೃತವಾದ ಒಂದು ಚಿತ್ರಲೇಖನ ಸಿದ್ಧಗೊಳಿಸಿದ್ದ. ಹತ್ತು ಚಿತ್ರಗಳಿಗೂ ಆಗಿ ಮಿಗುವಷ್ಟಿತ್ತು ಅದು. ಚಿತ್ರಿಕರಣಕ್ಕಾಗಿ ಆ ಒಡೆಸ್ಸ ರೇವಿಗೆ ಹೋದಾಗ, ಅಲ್ಲಿನ ಸಮುದ್ರ ತೀರದ ಸೋಪಾನಪಂಕ್ತಿಗಳನ್ನು ನೋಡಿದ. ಆಗ ಆತನಿಗೆ ಅದೇ ತನ್ನ ಚಿತ್ರದ ಕೇಂದ್ರ ಬಿಂದು ವಾಗಬೇಕು ಎನ್ನಿಸಿತು. ಅದಾದಮೇಲೆ, ಪೊಟೆಮ್‌ಕಿನ್ ನೌಕೆಯಲ್ಲಿ ನಡೆದ ದಂಗೆಯೊಂದನ್ನೇ ಇಡೀ ಕ್ರಾಂತಿಯ ಪ್ರಾತಿನಿಧಿಕ ಘಟನೆಯಾಗಿ ಆಯ್ದುಕೊಂಡು ಚಿತ್ರ ನಿರ್ಮಿಸಿದ. ಇದರಿಂದ ಚಿತ್ರಕ್ಕೆ ಸಮಗ್ರವಾಸ್ತುವಿನಂತೆ ಖಚಿತವಾದ ರೂಪಸೌಷ್ಟವ ಸಿದ್ಧಿಸಿತು.

ಐಸೆನ್‌ಸ್ಟೈನ್ ಈ ಚಿತ್ರದಲ್ಲಿ ಇತಿಹಾಸದ ಸಂಗತಿಗಳನ್ನು ಅಲ್ಲಲ್ಲಿ ಬದಲಿಸಿ ಕೊಂಡಿದ್ದಾನೆ. ಉದಾಹರಣೆ-ಒಡೆಸ್ಸ ಸೋಪಾನಪಂಕ್ತಿಗಳಲ್ಲಿ ನಡೆದ ಅತ್ಯಾಚಾರ ಕಾಲ್ಪನಿಕವಾದದ್ದು; ಅಂತ್ಯದಲ್ಲಿ ನಾವಿಕರು ವಿಜಯಶಾಲಿಗಳಾಗಿ ಹೊರಟದ್ದೂ ಕಾಲ್ಪನಿಕವೇ. ಐಸೆನ್‌ಸ್ಟೈನ್‌ನ ಉದ್ದೇಶ ಶೋಷಣೆಯ ಹಾಗೂ ಅದರಿಂದ ಉಂಟಾಗುವ ಕ್ರಾಂತಿಯ ಸಾರ್ವಕಾಲಿಕ ಕಥೆಯನ್ನು ನಿರೂಪಿಸುವುದು. ಪೊಟೆಮ್‌ಕಿನ್ ದಂಗೆ 1905 ರ ಬೃಹತ್ ಕ್ರಾಂತಿಯ ಒಂದು ಚಿಕ್ಕ ಪ್ರಕರಣವಾಗಿದ್ದರೂ, ಈ ಚಿತ್ರ ಇಡೀ ಕ್ರಾಂತಿಯ ಐಸೆನ್‌ಸ್ಟೈನ್ ವಿವರವಾಗಿ ಬರೆದಿದ್ದಾನೆ. ಅಲ್ಲದೆ, ಈ ಚಿತ್ರದಲ್ಲಿ ಕರುಣ ಸಹಾನುಭೂತಿಗಳು ಕ್ರಮವಾಗಿ ಮೂಡಿಕೊಳ್ಳುವ ಬಗೆಯನ್ನು ಕುರಿತೂ ಬರೆದಿದ್ದಾನೆ. ಐಸೆನ್‌ಸ್ಟೈನ್‌ನ ಚಿತ್ರಸಿದ್ಧಾಂತಗಳನ್ನೆಲ್ಲ ಇಟ್ಟುಕೊಂಡು ವಿವರವಾಗಿ ಅಭ್ಯಾಸಮಾಡಲು ತಕ್ಕುದಾದ ಚಿತ್ರ ಇದು.

ಒಡೆಸ್ಸ ಸೋಪಾನ ಪಂಕ್ತಿಗಳ ಮೇಲೆ ನಡೆದ ಅತ್ಯಾಚಾರದ ಸನ್ನಿವೇಶವಂತೂ ಚಲನಚಿತ್ರದ ಇತಿಹಾಸದಲ್ಲೇ ಅದ್ಭುತವಾದ ಸಾಧನೆ ಎನ್ನಬೇಕು. ಇಲ್ಲಿನ ಚಿತ್ರಿಕೆಗಳ ಸಂಕಲದಲ್ಲಿ ರೇಖಾ ವಿನ್ಯಾಸಗಳ ಮುಖಾಂತರ ಸಾಧಿಸಿರುವ ಪರಿಣಾಮ ಅತ್ಯಂತ ಅಪರೂಪವಾದದ್ದು.

ಈ ಚಿತ್ರ ಮೊದಲು ಪ್ರಕಟವಾದಾಗ ರಷ್ಯಾದಲ್ಲಿ ಜಯಭೇರಿ ಹೊಡೆಯಿತು. ಜರ್ಮನಿಯ ಜನ ಈ ಚಿತ್ರವನ್ನು ನೋಡಿ ಹುಚ್ಚೆದ್ದು ಹೋದರು. ಬರ್ಲಿನ್‌ನ ಒಂದು ಥೇಟರ್‌ನಲ್ಲಿ ಇದು ಒಂದು ವರ್ಷಕಾಲ ಸತತ ಪ್ರದರ್ಶನಗೊಂಡಿತು. ಅಮೆರಿಕಾ ಮತ್ತು ಯುರೋಪ್‌ನ ಇತರ ದೇಶಗಳಲ್ಲಿ ಕೂಡ ಇದಕ್ಕೆ ಭಾರಿ ಪ್ರಸಿದ್ಧಿ ದೊರೆಯಿತು. ಚಲನಚಿತ್ರದ ಇತಿಹಾಸದಲ್ಲೇ ಇಂತ ಅದ್ಭುತ ಯಶಸ್ಸು ಪಡೆದ ಇನ್ನೊಂದು ಗಂಭೀರ ಚಿತ್ರವಿಲ್ಲ ಎನ್ನುವುದು ನಿಸ್ಸಂದೇಹ.



ಚಿತ್ರದ ಒಂದು ದೃಶ್ಯ: ಸಿಪಾಯಿಗಳ ನೆರಳಿನಲ್ಲಿ ಅನಾಥವಾಗಿ ಬಿದ್ದಿರುವ ಶವ

ಐಸೆನ್ ಸ್ಟೈನ್ ಕಲಾವಂತಿಕೆ



ಚಲನಚಿತ್ರ ಕ್ಷೇತ್ರದಲ್ಲಿ ವಿಶ್ವಕ್ಕೇ ಮಹಾ ವ್ಯಕ್ತಿಯೆಂದು, ಜಗತ್ತಿನ ಬೆಳವಣಿಗೆಯ ಮಹಾ ನಿರ್ದೇಶಕರಲ್ಲೊಬ್ಬನೆಂದು ಪರಿಗಣಿತನಾಗಿರುವ ಸೆರ್ಗಿಯಿ ಐಸೆನ್‌ಸ್ಟೈನ್ ಚಲನಚಿತ್ರಕ್ಕಿಳಿದದ್ದು 1924 ರಲ್ಲಿ. ಅದಕ್ಕೆ ಮೊದಲು ಆತ ರಂಗಭೂಮಿಯಲ್ಲಿ ನಿರ್ದೇಶಕನಾಗಿ ಅನೇಕ ಹೊಸ ಪ್ರಯೋಗಗಳನ್ನು ನಡೆಸಿ ಹೆಸರಾಗಿದ್ದ.

ಐಸೆನ್‌ಸ್ಟೈನ್ ಕಲಿತದ್ದು ಇಂಜಿನಿಯರಿಂಗ್. ವಿಜ್ಞಾನದಲ್ಲಿ ಆತನಿಗೆ ಕೊನೆತನಕ ಅಪಾರ ಆಸಕ್ತಿಯಿತ್ತು.

ಯುರೋಪ್‌ನಹಲವು ಭಾಷೆಗಳಲ್ಲಿ ಪರಿಣತಿ ಪಡೆದಿದ್ದ ಆತ ಮಹತ್ವದ ಸಾಹಿತ್ಯ ಕೃತಿಗಳನ್ನೆಲ್ಲ ಓದಿ ಜೀರ್ಣಿಸಿಕೊಂಡಿದ್ದ. ಮನಶ್ಶಾಸ್ತ್ರ, ಫ್ರಾಯ್ಡ್ ಮೊದಲಾದವರ ಸಿದ್ಧಾಂತಗಳು ಆತನನ್ನು ಸೆರೆಹಿಡಿದಿದ್ದವು. ಮಧ್ಯಯುಗದ ಯುರೋಪ್‌ನ ಮಹಾ ಮೇಧಾವಿ ಲಿಯೋನಾರ್ಡೋ ಡ ವಿಂಚಿ ಈತನಿಗೆ ಆರಾಧ್ಯನಾಗಿದ್ದ. ತಾನೇ ಸ್ವತಃ 20ನೇ ಶತಮಾನದ ಲಿಯೋನಾರ್ಡೋ ಎನ್ನುವಂತಿದ್ದ. ರಂಗಭೂಮಿಯ ಆಸಕ್ತಿಗಾಗಿ ಈತ ಜಾಪನಿನ ಕಾಬುಕಿ ಪದ್ಧತಿಯನ್ನು ಅಭ್ಯಾಸ ಮಾಡಿದ್ದ. ಕುತೂಹಲಕ್ಕಾಗಿ ಕಷ್ಟದ ಜಪಾನೀ ಭಾಷೆಯನ್ನು ಅಭ್ಯಾಸ ಮಾಡಿದ್ದ. ಸ್ವತಃ ಆತ ಚಿತ್ರಕಾರನೂ ಆಗಿದ್ದ. ಕಲೆ ಜ್ಞಾನ ವಿಜ್ಞಾನಗಳ ಬೃಹತ್ ಕೋಶದಂತಿದ್ದ ಈತನ ವ್ಯಕ್ತಿತ್ವದಿಂದ ಚಲನಚಿತ್ರ ಪ್ರಪಂಚ ಸಮೃದ್ಧಗೊಂಡಿತು. ಈತ ಯೋಜಿಸಿದ ಚಿತ್ರಗಳ ಸಂಖ್ಯೆ ಸುಮಾರು ನಲವತ್ತು. ಅವುಗಳಲ್ಲಿ ಸಿದ್ಧವಾಗಿ ಹೊರ ಬಂದವು ಏಳು ಮಾತ್ರ. ಆದರೆ ಆ ಏಳೂ ವಿಶ್ವ ಚಲನಚಿತ್ರದ ಗಣನೀಯ ಕೃತಿಗಳಲ್ಲಿ ಸೇರಿಕೊಳ್ಳುತ್ತವೆ. ಈತನ 'ಬ್ಯಾಟಲ್‌ಶಿಪ್ ಪೊಟೆಮ್‌ಕಿನ್' ಚಲನಚಿತ್ರದ 'ಚಿರಕೃತಿ'ಯಾಗಿದೆ. ನಿರ್ಮಾಪಕರ ಮೇಲೆ, ಚಿತ್ರರಸಿಕರ ಮೇಲೆ ಈ ಚಿತ್ರ ಬೀರಿದಂಥ ಪ್ರಭಾವವನ್ನು ಇವತ್ತಿಗೆ ಕೂಡ ಇನ್ನಾವ ಕೃತಿಯೂ ಬೀರಿಲ್ಲ. ಆ ಚಿತ್ರದ ಬಗ್ಗೆ ನಡೆದಂಥ ವಿಪುಲವಾದ ಚರ್ಚೆ ಈತನಕವೂ ಮತ್ತಾವುದೇ ಚಿತ್ರದ ಬಗ್ಗೆ ನಡೆದಿಲ್ಲ.

ಚಲನಚಿತ್ರದ ಬಗ್ಗೆ ಐಸೆನ್‌ಸ್ಟೈನ್‌ನ ಬರವಣಿಗೆಗಳೂ ಸಿದ್ಧಾಂತಗಳೂ ಯಾವತ್ತಿಗೂ ಚಲನಚಿತ್ರ ಮೀಮಾಂಸೆಯ ಮೂಲಧಾರವಾಗಿ ನಿಲ್ಲುತ್ತವೆ. ಅಪಾರ ಜ್ಞಾನ, ಅಪಾರ ಪ್ರಯೋಗ, ಅಪಾರ ಅನುಭವಗಳ ಆತನ ವ್ಯಕ್ತಿತ್ವ ಅವರ ಬರವಣಿಗೆಗಳಲ್ಲಿ ಪ್ರಕಟವಾಗಿದೆ. ಸಿನೆಮಾ ಏನನ್ನೂ ಹೇಳಬಲ್ಲ ಭಾಷೆಯಾಗುವುದು ಅದರ ಸಂಕಲನ ತಂತ್ರದಿಂದ-ಎಂಬ ಸತ್ಯವನ್ನು ಆತ ತೋರಿಸಿ ಕೊಟ್ಟ. ಚಿತ್ರಜೋಡಿಸಿ ಹೊಸ ಅರ್ಥವನ್ನೇ ಮಿಂಚಿಸುವ ಈ ತಂತ್ರಕ್ಕೆ Montage ಎಂಬ ಹೆಸರು ಕೊಟ್ಟ.

ಪುಸ್ತಕ ವಿಮರ್ಶೆ

1084 ತಾಯಿ (ಹಜಾರ್ ಚೌರೇಶಿರ್‌ಮಾ)

ಡಾ|| ಆರ್.ವಿ. ಭಂಡಾರಿ

ಲೇ: **ಮಹಾಶ್ವೇತಾದೇವಿ**
ಕನ್ನಡಕ್ಕೆ: **ಡಾ.ಎಚ್.ಎಸ್ ಶ್ರೀಮತಿ**
ಅಂಕಿತ ಪ್ರಕಾಶನ ಜಯನಗರ
ಬೆಂಗಳೂರು
1998
ಪುಟ 178 ಬೆಲೆ
ರೂ. 60.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಮಹಾಶ್ವೇತಾದೇವಿಯವರ ಮುಖ್ಯ ಕಾದಂಬರಿಗಳಲ್ಲಿ ಒಂದಾದ ಒಂದು ಸಾವಿರದ ಎಂಬತ್ನಾಲ್ಕರ ತಾಯಿಯನ್ನು ಡಾ. ಶ್ರೀಮತಿಯವರು ಕನ್ನಡಕ್ಕೆ ಅನುವಾದಿಸಿ ಅಭಿನಂದನೆಗೆ ಪಾತ್ರರಾಗಿದ್ದಾರೆ. ಇಂಥ ಕಾದಂಬರಿ ಕನ್ನಡದಲ್ಲಿ ಅಪರೂಪವೇ.

ಹಾಗೆ ಕೇಳಿದರೆ ಇಲ್ಲಿ ಕಥೆ ಎನ್ನುವುದು ತೀರ ಕಡಿಮೆ. ಆದರೆ ಎಲ್ಲಾ ಉತ್ತಮ ಕಾದಂಬರಿಗಳಲ್ಲಿನಂತೆ ಸುತ್ತ ಹೆಣೆದುಕೊಳ್ಳುವ ನೆಯ್ಗೆ ಬೆರಗುಗೊಳಿಸುತ್ತದೆ. ಮತ್ತು ಹೃದ್ಯವಾಗಿಸುತ್ತದೆ.

ಕತೆ ಇಷ್ಟೆ: ಬ್ರತಿ ಎಂಬ 19 ವರ್ಷದ ಬಂಗಾಲಿ ತರುಣ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅವನದೇ ವಯಸ್ಸಿನ ಇನ್ನು ಮೂರು ಜನರೊಡನೆ ಪೋಲಿಸರ ಗುಂಡಿಗೆ ಬಲಿಯಾಗುತ್ತಾರೆ. ಇವರೆಲ್ಲ ಎಡಪಂಥಕ್ಕೆ ಸೇರಿದವರು. ವರ್ಗ ಹೋರಾಟದಲ್ಲಿ ತೊಡಗಿಕೊಂಡವರು. ಕತೆ ಇರುವುದು ಬ್ರತು ಸತ್ತನಂತರವೇ ಕತೆ ಶುರುವಾಗುತ್ತದೆ. ಅದು ಅವನ ತಾಯಿಯ ನೆನಪಿನಲ್ಲಿ. ನೆನಪು ಮುಂದೆ ಹಿಂದೆ ಸರಿಯುತ್ತ ವರ್ತಮಾನದಲ್ಲಿ ಹಾದು ಅನೇಕ-ಕ್ರಿಯೆಗಳೊಂದಿಗೆ ರೂಪುಗೊಂಡು ಭವಿಷ್ಯವನ್ನು ತಾಳುತ್ತದೆ.

ಬ್ರತುವನ್ನು ಬಿಟ್ಟು ಉಳಿದವರೆಲ್ಲ ನೇರವಾಗಿ ಶೋಷಿತ ವರ್ಗದವರೇ ಆಗಿದ್ದಾರೆ. ಆದರೆ ಬ್ರತು ತನ್ನ ವರ್ಗವನ್ನು ನಿರಾಕರಿಸಿ(ಡಿಕ್ಲಾಸ್) ಕೊಂಡವನು. ಅವರ ಮನೆ ಬಂಡವಾಳಶಾಹಿ ಹಿನ್ನೆಲೆಯದು. ತಂದೆ, ಅಣ್ಣ ಹಾಗೂ ಅಕ್ಕಂದಿರು. ಸಮಾಜದ ಉಚ್ಚವರ್ಗದ ಎಲ್ಲ ನಡಾವಳಿಕೆಯನ್ನು ರೂಢಿಸಿಕೊಂಡವರು ತಂದೆ ತನ್ನ ಟೈಪಿಸ್ಟ್ ಹಿಂದೆಬಿದ್ದು ವಿಲಾಸಕ್ಕೆಳಸದರೆ ಮಗಳು ಅದು ತಮ್ಮ ಸ್ಥಾನ ಮಾನಕ್ಕೆ ಭೂಷಣ ಎಂದು ತಿಳಿವಾಕೆ; ಸುಜಾತಾಳ ಗಂಡ. "ಟಾನಿಕ್ಕು" ಗೀನಿಕ್ಕು ತಕೋಂಡಿದಿಯಾ? ಅಂತ ವಿಚಾರಿಸುವಾಗ ಕಫ ತುಂಬಿದ ಅವನ ಗಂಟಲಿನ ಆಳದಿಂದ ವಿಚಿತ್ರವಾದುದೊಂದು ಧ್ವನಿ ಹೊರಡುತ್ತದೆ. ಅವನು ಹೆಂಡತಿಯ ಬಳಿ ಆಸೆಯಿಂದ ಬಂದು ಮಾತನಾಡುವಾಗಲೆಲ್ಲಾ ಅವನ ಧ್ವನಿ ಹೀಗೆ ಕಷ್ಟದಲ್ಲಿ ಸಿಲುಕಿ ಭಾರವಾಗಿಬಿಡುತ್ತದೆ. ಸುಜಾತಳಿಗೆ ದಿವ್ಯನಾಥನ ಈ ಸ್ಥಿತಿ ತೀರಾ ಪರಿಚಿತವಾದದ್ದು. ತನ್ನ ಬಗ್ಗೆ ವಿಶೇಷವಾಗಿ ಹೀಗೆ ವಿಚಾರಿಸಿಕೊಳ್ಳಲು ಬಂದನೆಂದರೆ ಅದಕ್ಕೆ ಇರುವುದು ಒಂದೇ ಅರ್ಥ. ಇಂಥ ಗಂಡ ತನ್ನ ಮಗ ಬ್ರತು ಎಡಪಂಥೀಯ ಚಳುವಳಿಯಲ್ಲಿ ಪೋಲಿಸರ ಗುಂಡಿಗೆ ತುತ್ತಾದ ಎನ್ನುವುದನ್ನು ಎಲ್ಲೂ ದಾಖಲಾಗದ ಹಾಗೆ ಒರಸಿ ಹಾಕಿಸಿಬಿಡುತ್ತಾನೆ. ಯಾಕೆಂದರೆ ಅದರಿಂದ ಸರಕಾರದೊಡನೆಯ ಆತನ ಸಂಭಂದಕ್ಕೆ ದಕ್ಕೆಬಂದೀತು.

"ಆ ದಿನ, ಬ್ರತಿಯ ಸಾವಿನ ದಿನ, ಸುಜಾತಳ ಪಾಲಿಗೆ ಬ್ರತಿಯ ತಂದೆಯೂ ಸತ್ತುಹೋದ. ಆ ದಿನ, ಅವನು ಹಾಗೆ ವರ್ತಿಸಿದ ಆ ಕ್ಷಣ, ಅವಳ ಅನೇಕ ಭ್ರಮೆಗಳು ನುಚ್ಚುನೂರಾಗಿ ಹೋದವು. ನುಚ್ಚು ನೂರಾಗಿ ಅವಳ ತಲೆಯ ಮೇಲೆಯೇ ಸಿಡಿದವು. ಲಕ್ಷಾಂತರ ವರ್ಷಗಳ ಹಿಂದೆ ಈ ಪ್ರಪಂಚವನ್ನು ಅಪ್ಪಳಿಸಿದ ಆ ದೈತ್ಯಗ್ರಹಗಳಂತೆ ಏಕಿಘನಾಕಾರದ ಭೂಮಿಯನ್ನು ಖಂಡಗಳಾಗಿ ಒಡೆದು ಬೇರ್ಪಡಿಸಿದ ಸಾಗರಗಳ ಸಿಡಿದೆದ್ದ ತೆರೆಗಳಂತೆ.

ತಾಯಿ ಸುಜಾತಳ ಪಾತ್ರ ಗೋರ್ಕಿಯವರ ಪೋಮಾಗೊರ್ಟೆಯೇಟ್ ಕಾದಂಬರಿಯ ತಾಯಿ ಅಕಾಲಿನಳನ್ನೂ, 'ತಾಯಿ' ಕಾದಂಬರಿಯ ತಾಯಿಯನ್ನು ಏಕ ಕಾಲದಲ್ಲಿ ನೆನಪಿಗೆ ತರುತ್ತದೆ. ರೂಪ, ಸಭ್ಯತೆಯ ವ್ಯಕ್ತಿತ್ವದ ದೃಷ್ಟಿಯಿಂದ ಅವಳು ಅಕಾಲಿನಳಾದಾದರೆ ವ್ಯಕ್ತಿತ್ವದ ಬೆಳವಣಿಗೆಯ ದೃಷ್ಟಿಯಿಂದ ಅವಳು ಪಲಗೇಯ ನೀಲೋವ್ನ ವ್ಲಾಸೋವ್ ಇದ್ದಂತೆ.

ಬ್ರತು ಉಳಿದ ಮಕ್ಕಳಂತಲ್ಲ. ಆತನ ಸ್ವಭಾವವೇ ಬೇರೆ. ಉಳಿದವರು ಅವನಿಗೆ ಸೇರುತ್ತಿದ್ದಿಲ್ಲ. ಅಪ್ಪನನ್ನು ಆತ ಬಾಸ್ ಎಂದು ತಮಾಷೆ ಮಾಡುತ್ತಿದ್ದ. ತನ್ನನ್ನು ಮಾತ್ರ ಆತ ಪ್ರೀತಿಸುತ್ತಿದ್ದನೆಂದು ಆಕೆಗೆ ನಂದಿನಿಯ ಮುಖಾಂತರವೂ ತಿಳಿಯುತ್ತಿದೆ. ತನ್ನ ಮಗನ ನೆನಪಿನಲ್ಲಿ ತನ್ನ ಮನೆ-ಸಮಾಜ ಇತ್ಯಾದಿಗಳನ್ನು ವಿಶ್ಲೇಷಿಸಿಕೊಳ್ಳುತ್ತಾಳೆ. ಅದೇ ಸಭ್ಯತೆಯಿಂದ ನಡೆದುಕೊಳ್ಳುತ್ತಿದ್ದಂತೆ ಬೆಳೆಯುತ್ತ ಹೋಗುತ್ತಾಳೆ. ಸಮಾಜ ಅವಳಿಗೆ ಅರ್ಥವಾಗುತ್ತಾ ಹೋಗುತ್ತದೆ. ಬ್ರತಿ ಸತ್ತು ಹೋದರೂ ಕೂಡ ಅವಳ ಅವಳೆದುರು ಜೀವತಳೆದು ತಿರುಗಾಡುತ್ತಿದ್ದ. ಒಂದು ದಿನ ಬ್ರತಿಯ ಪ್ರೀತಿಗೆ ಪಾತ್ರವಾಗಿದ್ದ ನಂದಿನಿಯ ಭೆಟ್ಟಿಗೆ ಹೋದವಳು ಸಂಜೆ ತಡವಾಗಿ ಬರುತ್ತಾಳೆ. ಆಗ ಅವಳ ಗಂಡ ಸಂಜೆ ಎಲ್ಲಿ ಹೋಗಿದ್ದೆ? ಮನೆಗೆ ಅತಿಥಿಗಳು ಬರುವವರಿದ್ದಾರೆ" (ಆಕೆಯ ಕಿರಿಮಗಳ ಮದುವೆ ನಿಶ್ಚಯದ ದಿನ) ಎಂದು ಗಂಡ ಹೆದರಿಸಿದಾಗ ಸುಜಾತ ಸಿಡಿಯುತ್ತಾಳೆ. ಜೀವನದಲ್ಲಿ ಮೊದಲ ಬಾರಿಗೆ ಗಂಡ ಮತ್ತು ಇತರ ಮಕ್ಕಳ ವಿರುದ್ಧ ಸಿಡಿಯುತ್ತಾಳೆ. "ಏನಂದೆ? ಇಡೀ ದಿನ ಅದೆಲ್ಲಿ ಅಲೆಯಲು ಹೋಗಿದ್ದೆ ಅನ್ನೊದನ್ನು ಕೇಳುವ ಹಕ್ಕು ನನಗಿಲ್ಲವೋ? ಎಂದು ಗಂಡ ಕೇಳಿದಾಗ "ಖಂಡಿತ ಇಲ್ಲ" ಎನ್ನುತ್ತಾಳೆ.

"ಈ ಎರಡು ವರ್ಷಗಳ ಹಿಂದಿನವರೆಗೂ, ಈ ಮೂವತ್ತೆರಡು ವರ್ಷಗಳಲ್ಲಿ ನಾನೆಂದೂ ನೀವು ಸಂಜೆಯಾದರೆ ಅದೆಲ್ಲಿ ಹೋಗೋದು ಅಂತ ಕೇಳಲಿಲ್ಲ, ಕಳೆದ ಹತ್ತು ವರ್ಷಗಳಿಂದ ಹೋದ ಹೋದ ಕಡೆಯಲ್ಲೆಲ್ಲ ಅದಾವಳನ್ನು ಜೊತೆಗೆ ಹಾಕಿಕೊಂಡು ಹೋಗ್ತಾ ಇದ್ದೀರಿ ಅಂತ ನಾನು ಕೇಳಲೇ ಇಲ್ಲ. ನಿಮ್ಮ ಮಾಜಿ ಟೈಪಿಸ್ಟ್‌ಳ ಮನೆಯ ಬಾಡಿಗೆಯನ್ನು ನೀವೇಕೆ ಕಟ್ಟೋದು ಅಂತಲೂ ಕೇಳಲಿಲ್ಲ ಅಂದ ಮೇಲೆ ನೀವು ನನ್ನನ್ನು ಪ್ರಶ್ನೆ ಮಾಡೋದು? ಖಂಡಿತ ಪ್ರಶ್ನೆ ಮಾಡುವ ಹಾಗಿಲ್ಲ, ಎನ್ನುತ್ತಾಳೆ.

ತನಗೆ ಇದೆಲ್ಲ ತಿಳಿದೇ ಇರಲಿಲ್ಲ ಎಂದುಕೊಂಡು ಇಂದಿನ ಅರಿವನ್ನು ನೆಚ್ಚಿಕೊಳ್ಳುತ್ತಾಳೆ. ಸುಜಾತ ತನ್ನ ಹಿಂದಿನೆಲ್ಲ ದಾಸ್ಯ ಹಾಗೂ ಭ್ರಮೆಯನ್ನು ಕಳಚಿಕೊಂಡು ತಾನು ಬ್ರತಿನ ನಿಜವಾದ ತಾಯಿಯಾಗಿ ಮೆರೆಯುತ್ತಾಳೆ.

"ಇಡೀ ದಿನದ ಹುಡುಕಾಟದಲ್ಲಿ ಸುಜಾತಳಿಗೆ ಅವನು ಮತ್ತೆ ಸಿಕ್ಕಿಬಿಟ್ಟಿದ್ದಾನೆ. ಪ್ರತಿಯೊಂದರಲ್ಲೂ, ಎಲ್ಲೆಲ್ಲೂ ಅವನು ಕಾಣಿಸುತ್ತಾನೆ. ಆದರೆ ಮತ್ತೆ ಆ ವ್ಯಾನುಗಳು ಧಾವಿಸಿ ಬಂದುಬಿಟ್ಟರೆ, ಭಯಾನಕ ಸೈರನ್‌ಗಳು ಆಕಾಶವನ್ನು ಸೀಳುವಂತೆ ಕೇಳಿಸಿದವೆಂದರೆ ಬ್ರತಿ ಮತ್ತೆ ಕಳೆದುಹೋಗುತ್ತದೆ. ಬ್ರತಿ ನನ್ನಪ್ಪ, ಮನೆಗೆ ಬಂದುಬಿಡು ಮಗು. ನಿನ್ನಮ್ಮನ ಮಡಿಲು ಸೇರಿಕೋ ಬ್ರತಿ. ಹೀಗೆ ಓಡುತ್ತಾ ಹೋಗಿಬಿಡಬೇಡ. ಹೋಗಿಬಿಡುತ್ತೇನೆಂದರೆ ಅವರು ಬಿಡುವುದಿಲ್ಲವಪ್ಪ. ಎಲ್ಲೇ ಹೋಗಿ ಅವಿಚಿಟ್ಟುಕೊಂಡರೂ ಹುಡುಕಿ ಎಳೆದು ತರುತ್ತಾರೆ. ನನ್ನ ಹತ್ತಿರ ಬಂದು ಬಿಡು ಮಗನೇ ಬ್ರತಿ.

ಹೀಗೆ ಅವಳು ಮಗನಲ್ಲಿ ತದ್ಯಾತ್ಮ ಹೊಂದುತ್ತಿದ್ದ ವೇಳೆಯಲ್ಲಿ ಮನೆಯಲ್ಲಿ ಮೇಜವಾನಿ ನಡೆದಿದೆ. ಕುಡಿತ, ಕುಣಿತ, ಗಂಡು-ಹೆಣ್ಣು ಏನೇನೊ.

"ಈ ಕಾಡು ಹೆಣಗಳೆಲ್ಲವೂ ಕೂಡಿ ಈ ಜಗತ್ತಿನ ಎಲ್ಲ ಕಾವ್ಯಮಯ ಅಂಶವನ್ನು ಕೆಂಪು, ಗುಲಾಬಿ, ಹಸಿರು ಹುಲ್ಲು, ನಿಯಾನ್ ದೀಪಗಳು, ತಾಯಂದಿರ ಮುಗುಳ್ನಗು, ಮಕ್ಕಳ ಅಳು - ಎಲ್ಲವನ್ನು ನಿರಂತರವಾಗಿ ಅನುಭವಿಸುತ್ತಾ ಇರಲಿ ಎಂಬುದಕ್ಕಾಗಿಯೇ ಬ್ರತಿ ಸತ್ತನೇನು? ಈ ಜಗತ್ತನ್ನು ಈ ಹೆಣಗಳ ವಶಕ್ಕೆ ಒಪ್ಪಿಸಲೆಂದೇ ಸತ್ತನೆ?

"ಇಲ್ಲ, ಖಂಡಿತ ಇಲ್ಲ, ... ಬ್ರತಿ...!"

"ಅದೆಷ್ಟು ಆಳದಲ್ಲಿ, ದೀರ್ಘಕಾಲದಿಂದ ಒಳಗೇ ಮುಚ್ಚಿಟ್ಟಿದ್ದ ಹೃದಯ ಛಿದ್ರಾವಕ ಶೋಕವು ಕೊನೆಗೂ ಸ್ಫೋಟಿಸಿ ಹೊರಬಂದುಬಿಟ್ಟಿತು. ನಗರದ ಮನೆಮನೆಗಳಲ್ಲೂ ಪ್ರತಿಧ್ವನಿಸುತ್ತಾ ನಗರದ ಬೀದಿಬೀದಿಗಳನ್ನು ಆವರಿಸುತ್ತಾ ಆ ಅಳು ಆಕಾಶಕ್ಕೇರಿತು. ಆ ಅಳುವನ್ನು ಹೊತ್ತ ಗಾಳಿಯು ರಾಜ್ಯದಿಂದ ರಾಜ್ಯಕ್ಕೆ, ಭೂಮಿಯ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ, ಚರಿತ್ರೆಯ ಸಾಕ್ಷಿಗಳಾಗಿ ನಿಂತ ಕತ್ತಲ ಕಂಬಕಂಬಗಳಿಗೆ, ಚರಿತ್ರೆಯ ಅತಿಪ್ರಾಚೀನ ಕಾಲದಿಂದಲೂ ಹಿಂದಕ್ಕೆ ಸರಿದು ಪಾತಾಳದಲ್ಲಿ ಹುದುಗಿಹೋದ ಕಟ್ಟಡ ಹಾಗೂ ಶಿಲಾಶಾಸನಗಳಿಗೆ ತಾಕುವಂತೆ ಧಾವಿಸಿ ಸಾಗಿತು. ತನ್ನ ಪ್ರಭಾವದಡಿಗೆ ಭೂತ, ವರ್ತಮಾನ, ಭವಿಷತ್ತಿನ ಎಲ್ಲ ಸಂಗತಿಗಳನ್ನು ಸಿಲುಕಿಸಿ ಆ ಅಳು ಏಕಾಗ್ರವಾಗಿ ಆವರಿಸಿಬಿಟ್ಟಿತು. ಇನ್ನಾವ ಸಂತೋಷ, ತೃಪ್ತಿಗಳಿಗೂ ಉಳಿಗಾಲವೇ ಇಲ್ಲದಂತಾಗಿ ನುಚ್ಚು ನೂರಾಗಿ ಹೋದವು.

"ಆ ಅಳುವಿನ ತುಂಬ ರಕ್ತ, ಪ್ರತಿಭಟನೆ, ದುಃಖಗಳ ವಾಸನೆ ಹರಡಿ ಹೋಗಿತ್ತು" ಎಂದು ಅಂತ್ಯವಾಗುವ ಕಾದಂಬರಿ ತನ್ನ ಆಶಯವನ್ನು ಪ್ರಭಾವಪೂರ್ಣವಾಗಿ ಸಾರುತ್ತದೆ.

ಇದೊಂದು ಪರಿಚಯ ಅಷ್ಟೆ. ಅದನ್ನು ಓದಿಯೇ ತಿಳಿಯಬೇಕು. ಭಾವನೆ ಮತ್ತು ಚಿಂತನೆ, ಕಲೆ ಮತ್ತು ಆದರ್ಶಗಳು ಒಂದನ್ನೊಂದು ಬಿಡಿ ಇಲ್ಲದಂತೆ ಆವರಿಸಿ ಗೆಂಚುಬಿದ್ದು ಮೂರ್ತಗೊಳ್ಳುವ ಇಲ್ಲಿಯ ಕೌಶಲ ಶ್ರೇಷ್ಠ ಮಟ್ಟದ್ದು. ○

ಸುಂದರ ನಗರ ಸಿಂಗಾಪುರವೋ? ಮಾಯಾನಗರದ ಮಾರಾಟವೋ?

ಪುಟ 7 ರಿಂದ

ಸರ್ಕಾರಿ ಇಲಾಖೆಗಳ ಸಮನ್ವಯ: ಖಾಸಗೀ ಮಾಲೀಕರ ಯಜಮಾನಿಕೆ

ಹೆಸರಾಂತ ಟ್ರಕ್ ನಿರ್ಮಾಣ ಸಂಸ್ಥೆ ವೋಲ್ವೋ ಹಳೇ ಮದ್ರಾಸ್‌ನ ಐದು ಕಿ.ಲೋ. ಮೀಟರ್‌ಗಳ ರಸ್ತೆ ಅಭಿವೃದ್ಧಿಗೆ ಏಳು ಕೋಟಿ ನೀಡಿದ್ದಾರೆ. ಎಕ್ಸೋಡಸ್ ಕಮುನಿಕೇಷನ್ ಸಂಸ್ಥೆಯ ಬಿ.ವಿ.ಜಗದೀಶ್ ಮಹಾನಗರ ಪಾಲಿಕೆಯ ಶಾಲೆಗಳ ಅಭಿವೃದ್ಧಿಗೆ ನಾಲ್ಕು ಕೋಟಿ ರೂಪಾಯಿ ನೀಡಿದ್ದಾರೆ. ಇನ್‌ಫೋಸಿಸ್‌ನ ಸುಧಾ ಮೂರ್ತಿ ಹಾಗೂ ಎಲ್.ಆರ್. ನಾರಾಯಣಮೂರ್ತಿ ಅವರು ಕೊಳಚೆ ಪ್ರದೇಶಗಳಲ್ಲಿ ನೂರು 'ನಿರ್ಮಲ ಬೆಂಗಳೂರು' ಶೌಚಾಲಯಗಳನ್ನು ನಿರ್ಮಿಸುವ ಯೋಜನೆ, ಎಬಿಬಿ ಸಂಸ್ಥೆಯು 25 ಕೋಟಿ ರೂಪಾಯಿ ವೆಚ್ಚದಲ್ಲಿ ಜಾಲಹಳ್ಳಿ ಬಳಿ ರಸ್ತೆ ಅಭಿವೃದ್ಧಿ ಹಾಗೂ ಮಾಗಡಿ ರಸ್ತೆಯಲ್ಲಿ ಗುಣಮಟ್ಟ ಕೇಂದ್ರ ಸ್ಥಾಪನೆ, ಇನ್‌ಫೋಸಿಸ್ ಸಂಸ್ಥೆಯು ಪೋಲೀಸ್ ಇಲಾಖೆಗೆ 2 ಕೋಟಿ ರೂಪಾಯಿ ವೆಚ್ಚದ ವಾಹನ ಮತ್ತು ಸಂಪರ್ಕ ಸಾಧನಗಳನ್ನು ನೀಡಲಿದ್ದಾರೆ.

ಬಿಪಿಎಲ್ ಸಂಸ್ಥೆಯು 2 ಕೋಟಿ ರೂಪಾಯಿ ವೆಚ್ಚದಲ್ಲಿ ಚರ್ಚ್ ರಸ್ತೆ ಮತ್ತು ಮಿಡ್‌ಪೋರ್ಟ್ ರಸ್ತೆ ಅಭಿವೃದ್ಧಿ, ಇನ್‌ಫೋಸಿಸ್‌ನ ನಂದನ ನೀಲಕಣಿ ಮತ್ತು ರೋಹಿಣಿ ಅವರು ನಗರಾಭಿವೃದ್ಧಿಗೆ ಸಾರ್ವಜನಿಕ ದತ್ತಿ ಸಂಸ್ಥೆಗೆ ಧನ ಸಹಾಯ ನೀಡಲಿದ್ದಾರೆ. 'ಪ್ರೆಸ್ಟೀಜ್ ಗುಂಪು' 1.5 ಕೋಟಿ ರೂಪಾಯಿಗಳಿಂದ ಇನ್‌ಫೆಂಟ್ರಿ ರಸ್ತೆ, ಹೊಸೂರು ರಸ್ತೆಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿ ಪಡಿಸಲಿದೆ. ಬ್ರಿಗೇಡ್ ಗುಂಪು 2.2 ಕಿ.ಮಿ. ಉದ್ದ ಜೆ.ಪಿ.ನಗರದ ನೂರಡಿ ರಸ್ತೆಯ ಅಭಿವೃದ್ಧಿ ಕಾರ್ಯಕ್ಕೆಗೆತ್ತಿಕೊಳ್ಳಲಿದೆ. ಬಯೋಕೋನ್ ಸಂಸ್ಥೆಯು ಒಂದು ಕೋಟಿ ವೆಚ್ಚದಲ್ಲಿ ಬಳ್ಳಾರಿ ರಸ್ತೆ ಹಾಗೂ ಶಾಲೆಗಳನ್ನು ಅಭಿವೃದ್ಧಿಪಡಿಸಿದರೆ ಅದಿರ ಟೆಕ್ನಾಲಜಿಸ್ 50 ಲಕ್ಷ ವೆಚ್ಚದಲ್ಲಿ ಸಿಗ್ನಲ್ ದೀಪ ಮತ್ತು ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲಿವೆ.

ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವ

ಬೆಂಗಳೂರು ಅಭಿವೃದ್ಧಿಗೆ ಸಹಾಯ ಹಸ್ತ ನೀಡುವ ಆಲೋಚನೆ ಏನೋ ಸರಿ? ಇದರ ಹಿಂದಿನ ಕರಾಮತ್ತು ಏನು? ಮಹಾನಗರ ರಸ್ತೆಗಳಲ್ಲಿ ರಾರಾಜಿಸುವುದಕ್ಕೆ ಈ ಕಂಪನಿಗಳು ರಸ್ತೆಗಳನ್ನೇ ತೆಗೆದುಕೊಂಡಿವೆ. ಆದರೆ ಕೊಳಗೇರಿಯಲ್ಲಿನ ಕುಡಿಯುವ ನೀರು, ವಿದ್ಯುತ್ ದೀಪ, ಒಳಚರಂಡಿ, ಆರೋಗ್ಯ ಇಂತಹ ಮೂಲ ಸೌಲಭ್ಯ ನೀಡಲು ಏಕೆ ಮಹತ್ವ ನೀಡಿಲ್ಲ. ಇವರಿಗೆ ಬೇಕಿರುವುದು ಪ್ರಚಾರ ಸೇವಾ ಭಾವನೆಯಲ್ಲ ಎಂಬುದನ್ನು ಮನಗಾಣಬೇಕು. ಕಾಲಾಂತರದಲ್ಲಿ ಬೆಂಗಳೂರು ನಗರದ ವಾರಸುದಾರರಾಗಲು ಖಾಸಗಿಯ ಕಂಪನಿಗಳು ನಡೆಸಿರುವ ಯೋಜನೆಯಾಗಿದೆ.

ನಗರದಲ್ಲಿ ದುಡಿಯುತ್ತಿರುವ ಅಸಂಖ್ಯಾತ ಜನರ ಮೇಲೆ ಹತೋಟಿ ತರುವ ಪ್ರಯತ್ನ ಈ ಯೋಜನೆಯ ಹಿನ್ನೆಲೆಯಾಗಿದೆ. ಕಾರ್ಮಿಕ ಹಕ್ಕುಗಳನ್ನು ಕಸಿದುಕೊಳ್ಳುವ ಹುನ್ನಾರವಿದು. ಸರ್ಕಾರವನ್ನು ತಮ್ಮ ಜೇಬಿಗೆ ಹಾಕಿಕೊಳ್ಳುವದು.

ಕೇಂದ್ರದ ಬಿಜೆಪಿ ಸರ್ಕಾರ ಹಲವು ಕಾರ್ಮಿಕ ಕಾಯಿದೆಗಳನ್ನು ತಿದ್ದುಪಡಿ ಮಾಡಲು ಸಮಿತಿಗಳನ್ನು ರಚಿಸಿರುವುದು ಈಗಾಗಲೇ ಬಹಿರಂಗ ಸುದ್ಧಿ. ಮುಂದಿನ ದಿನಗಳಲ್ಲಿ ಕೈಗಾರಿಕೆಯ ಕಾರ್ಮಿಕ ಕಾಯಿದೆ ಇರುವುದಿಲ್ಲವೆಂದು ಹೇಳುತ್ತಿದ್ದಾರೆ. ಕೈಗಾರಿಕೆಯಲ್ಲಿ ಕಾರ್ಮಿಕನಿಗೆ ಕಾಯಂ ಕೆಲಸದ ಖಾತ್ರಿ ಇಲ್ಲವಾಗುತ್ತದೆ.



ಕಾರ್ಮಿಕರಿಗೆ ಯಾವುದೇ ಕಾನೂನಿನ ಭದ್ರತೆ ಇರುವುದಿಲ್ಲ. ಎಲ್ಲವೂ ಗುತ್ತಿಗೆ ಆಧಾರವಾಗುತ್ತದೆ. ಈ ಎಲ್ಲಾ ಸಮಸ್ಯೆಗಳಿಂದ ಜನರನ್ನು ಬೇರ್ಪಡಿಸಿ ಸುಂದರನಗರದ 'ಭ್ರಮಾಲೋಕ'ಕ್ಕೆ ಬೆಂಗಳೂರಿನ ಜನರನ್ನು ಕೊಂಡೊಯ್ಯುವದು ಈ 'ಶೃಂಗಸಭೆಯ' ನಾಟಕವಾಗಿದೆ.

ಇಷ್ಟಕ್ಕೂ ಅವರು ನೀಡುತ್ತಿರುವ ಹಣದ ಮೂಲ ಏನು? ಯಾವುದನ್ನು ಕೇಂದ್ರ ಸರ್ಕಾರ ಆದಾಯ ತೆರಿಗೆ, ಆಸ್ತಿ ತೆರಿಗೆಗಳ ಮೂಲಕ ಪಡೆದುಕೊಳ್ಳಲು ನಿರಾಕರಿಸಿ ರಾಜ್ಯ ಸರ್ಕಾರಗಳಿಗೆ ಆದಾಯ ತೆರಿಗೆಯ ಪಾಲಿನಲ್ಲಿ ವಂಚನೆ ಮಾಡಿದೆಯೋ, ಯಾವ ಹಣ ಮೂಲಕ ಸರ್ಕಾರವೇ ಈ ಯೋಜನೆಗಳಲ್ಲಿ ತೊಡಗಿಸಬೇಕಾಗಿದೆಯೋ ಅದೇ ಹಣವೇ ಈಗ ದಾನವಾಗಿ ಬೆಂಗಳೂರಿನ ಅಭಿವೃದ್ಧಿಯ ಹೆಸರಿನಲ್ಲಿ ಈ ಮಾಲೀಕರ ಉದ್ದೇಶ ಸಾಧಿಸಿಕೊಳ್ಳಲು ಬಳಕೆಯಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆ ನಾಲಾಯಕ್!

ಬೆಂಗಳೂರು ಮಹಾನಗರ ಪಾಲಿಕೆ ಮಾರ್ಗದರ್ಶನಕ್ಕೆ ಸರ್ಕಾರ ಬಿ.ಎ.ಟಿ.ಎಫ್.(ಬೆಂಗಳೂರು ಸಮಿತ್) ಕಾರ್ಯತಂಡ ರಚಿಸಿದ್ದಾರೆ. ಹೆಸರಾಂತ ಬಹುರಾಷ್ಟ್ರೀಯ ಕಂಪನಿ ಇನ್‌ಫೋಸಿಸ್ ನಿರ್ದೇಶಕರಾದ ನಂದನ್ ನಿಲಕಣಿ ಈ ಕಾರ್ಯತಂಡದ ಅಧ್ಯಕ್ಷರು.

ಇದೊಂದು ನಾಚಿಸಬೇಕಾದ ಸಂಗತಿ. ಸರ್ಕಾರದ ಸಂಸ್ಥೆಗಳ ಅದಕ್ಷತೆಯನ್ನು ಎತ್ತಿ ತೋರಿಸುತ್ತದೆ. ಖಾಸಗೀಕರಣದ ಮಾರಿಯನ್ನು ಪೋಷಿಸುತ್ತಾ ಜನರಲ್ಲಿ ಸರ್ಕಾರದ ಸಂಸ್ಥೆಗಳ ಬಗ್ಗೆ ವಿಷ ಬೀಜ ಬಿತ್ತುವ ನೇರ ಕೆಲಸವನ್ನು ಕೃಷ್ಣಾರವರ ಸರ್ಕಾರ ಮಾಡುತ್ತಿದೆ. ಮಹಾನಗರಪಾಲಿಕೆಯ ಪ್ರಜಾಪ್ರತಿನಿಧಿಗಳು, ಐ.ಎ.ಎಸ್. ಅಧಿಕಾರಿಗಳು ಸರ್ಕಾರದ ಮಂತ್ರಿಗಳು ನಾಲಾಯಕ್ ಎಂಬ ಭಾವನೆ ಮೂಡಿಸುವ ಈ ಪ್ರಯತ್ನ ದೇಶದ ಪ್ರಜಾಪ್ರಭುತ್ವಕ್ಕೆ ದಕ್ಕೆ ತರುತ್ತದೆ. ದೇಶದ ಸಾರ್ವಭೌಮತೆಗೆ ಕಂಟಕಪ್ರಾಯವಾಗುತ್ತದೆ. ಒಟ್ಟಾರೆ ಬೆಂಗಳೂರು ಮಹಾನಗರವನ್ನು ಮುಂದಿನ ದಿನಗಳಲ್ಲಿ ಖಾಸಗೀ ಒಡೆತನಕ್ಕೆ ಒಪ್ಪಿಸುವದು ಯೋಜನೆಯಾಗಿದೆ ಎಂಬುದನ್ನು ಮನಗಾಣಬೇಕು. ಇಂತಹ ಕೃತ್ಯಗಳಿಂದ ಜನತೆ ಎಚ್ಚೆತ್ತುಕೊಳ್ಳಬೇಕು.

ದೀಪಾಮೆಹ್ತಾ, ಶಬನಾ ಅಜ್ಮಿ, ನಂದಿತಾದಾಸ್, ಅಕ್ಷಯ್‌ಕುಮಾರ್ ಚಿತ್ರತಂಡದ ಮೇಲೆ

ಸಂಘಪರಿವಾರದ ಗೂಂಡಾ ಧಾಳಿ

ಕೆ.ಎನ್.ಉಮೇಶ್

ಭಾರತದ ಜನರು ಯಾವ ಚಿತ್ರಗಳನ್ನು ನೋಡಬೇಕು ಅಥವಾ ನೋಡಬಾರದು ಎಂದು ನಿರ್ಧರಿಸುವ ಹಕ್ಕನ್ನು ದೇಶದ ನೂರು ಕೋಟಿ ಜನ ಕೆಲ ಗೂಂಡಾಗಳಿಗೆ ಬಿಡಬೇಕೆ? ತಮ್ಮದೇ ಆದ ವಿಕೃತ ದೃಷ್ಟಿಕೋನದ ಕೆಲವೇ ಜನರು ಇಡೀ ಜನತೆಯ ಮೇಲೆ ಅದನ್ನು ಹೇರಲು ಸರ್ಕಾರದ ಯಂತ್ರವನ್ನು ಉಪಯೋಗಿಸಿಕೊಳ್ಳಲು ಬಿಡಬೇಕೆ? ಸಾವಿರಾರು ವರ್ಷಗಳಿಂದ ಮಹಿಳೆಯರು - ವಿಧವೆಯರು ಅನುಭವಿಸುತ್ತಿರುವ ಸಂಕಟವನ್ನು ಭಾರತದ ಜನತೆಯ ಮುಂದೆ ಬಿಚ್ಚಿಡಲು 21ನೇ ಶತಮಾನದಲ್ಲಿಯೂ ಅವಕಾಶವಿಲ್ಲವೇ? ರಾಜರಾಮಮೋಹನರಾಯ್ ರವರು ಹಿಂದೆಯೇ ಬಹಿರಂಗವಾಗಿ ಹೇಳಿದ ಸಂಗತಿಗಳನ್ನು ಹೇಳಲು ಈಗ ಅವಕಾಶವಿಲ್ಲವೇ? 'ವಾಟರ್' ಚಿತ್ರದ ಮೇಲಿನ ಧಾಳಿ ಈ ಪ್ರಶ್ನೆಗಳನ್ನೆತ್ತಿದೆ. 'ಹೇ ರಾಮ್' ಎಂದು ಗಾಂಧೀಜಿಯವರು ಸಂಘ ಪರಿವಾರದ ಕ್ರೂರ ಮನಸ್ಸಿಗೆ ಬಲಿಯಾದ ದಿನದಂದು 'ಜೈ ಶ್ರೀರಾಮ್' ಎಂದು ಅರಚುವ ತಂಡದ ಕುಕೃತ್ಯಗಳ ಬಗ್ಗೆ ವರದಿ

ಉತ್ತರ ಪ್ರದೇಶದ ವಾರಣಾಸಿಯ ಗಂಗಾ ನದಿಯ ತೀರದಲ್ಲಿರುವ ತುಳಸಿಘಾಟ್‌ನಲ್ಲಿ ಚಿತ್ರೀಕರಣಕ್ಕೆ ಸಜ್ಜಾಗಿದ್ದ 'ವಾಟರ್' ಚಿತ್ರತಂಡ ಹಾಗೂ ಸೆಟ್‌ನ ಮೇಲೆ ಹೆಂಡ ಕುಡಿದಂತೆ ಮತ್ತಿನ ಮದದಿಂದ ಕೂಗಾಡುತ್ತಾ ಕಿರುಚುತ್ತಾ ಬಂದ ನೂರಾರು ಪುಂಡರು ಚಿತ್ರ ತಂಡದ ಕೆಲವರ ಮೇಲೆ ದಾಳಿ ಮಾಡಿದರು. ಸೆಟ್‌ನ್ನು ಧ್ವಂಸಗೊಳಿಸಿ ತನ್ನಷ್ಟಕ್ಕೆ ತಾನಾಗಿ ಹರಿಯುತ್ತಿದ್ದ ಗಂಗಾ ನದಿಗೆ ಎಸೆದು ಮೊದಲೇ ಕಲ್ಮಷಗೊಂಡು-ಕಲುಷಿತವಾಗಿರುವ ಗಂಗೆಯನ್ನು ಮತ್ತಷ್ಟು ಮಲಿನಗೊಳಿಸಿದರು. ದೇಶದ ಕಾನೂನು-ಸುವ್ಯವಸ್ಥೆ ಕಾಪಾಡಬೇಕಿದ್ದ ಪೋಲೀಸ್ ಇಲಾಖೆಯವರು ಗಾಢ ಮೌನದೊಂದಿಗೆ, ನಿಷ್ಕ್ರಿಯರಾಗಿದ್ದು, ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಮೇಲಿನ ದಾಳಿಯನ್ನು ಬೆಂಬಲಿಸಿದರು.

ದಾಳಿಗೆ ಮುನ್ನ ಸುಮಾರು ವಾರದಿಂದಲೇ ಚಿತ್ರೀಕರಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನುಮತಿ ಕೊಟ್ಟ ಕೂಡಲೇ, ಆರ್.ಎಸ್.ಎಸ್., ವಿಶ್ವ ಹಿಂದು ಪರಿಷತ್, ಬಜರಂಗ ದಳ ಹಾಗೂ ಬಿಜೆಪಿಯ ಕಾರ್ಯಕರ್ತರು 'ಕಾಶಿ ಸಂಸ್ಕೃತಿ ರಕ್ಷಾ ಮಂಚ್' ಹಾಗೂ 'ಸಂಸ್ಕಾರ ಭಾರತಿ' ಎಂಬ ಸಂಘಟನೆಗಳಡಿಯಲ್ಲಿ "ರಂಡೆಯರು-ಮುಂಡೆಯರು ಕಾಶಿ ಹಾಳು ಮಾಡಲು ಬಂದಿದ್ದಾರೆ, ಬನ್ನಿ ಕಾಶಿಯನ್ನು-ಭಾರತದ ಸಂಸ್ಕೃತಿಯನ್ನು ರಕ್ಷಿಸೋಣ, ವಾಟರ್ ಚಿತ್ರೀಕರಣವನ್ನು ತಡೆಯೋಣ" ಎಂಬ ಶೀರ್ಷಿಕೆಯ ಕರಪತ್ರಗಳನ್ನು ವಾರಣಾಸಿಯ ಉದ್ದಗಲಕ್ಕೂ ಹಂಚಿ, ಜನರ ಮನದಲ್ಲಿ ಇಲ್ಲಸಲ್ಲದ್ದೆಲ್ಲವನ್ನು ತುಂಬಿ ಭಾವಾವೇಶಕ್ಕೊಳಪಡಿಸಿದ್ದರು. 'ವಾಟರ್' ಚಿತ್ರದ ನಿರ್ದೇಶಕಿ ದೀಪಾ ಮೆಹ್ತಾ ಚಿತ್ರದ ಅಂಶಗಳ ಕುರಿತು ಏನೇ ಹೇಳಿದರೂ ಕೇಳದೆ ಚಿತ್ರೀಕರಣದ ತಂಡ ಹಾಗೂ ಸೆಟ್‌ನ ಮೇಲೆ ದಾಳಿ ನಡೆಸಿದರು. ಈ ದಾಳಿಯ ನಾಯಕತ್ವವನ್ನು ಸ್ಥಳೀಯ ಬಿಜೆಪಿ ಶಾಸಕರಾದ ಎಸ್.ರಾಯಚೌಧರಿ ಹಾಗೂ ಇತರೆ ಸಂಘ ಪರಿವಾರದ ನಾಯಕರು ವಹಿಸಿದ್ದು, ಕರಪತ್ರದ ಕೆಳಗೆ ಇವರೆಲ್ಲರ ಹೆಸರುಗಳು ಮುದ್ರಿಸಲ್ಪಟ್ಟಿವೆ.

ದೀಪಾ ಮೆಹ್ತಾರವರು ಈ ಹಿಂದೆಯೂ ತೆಗದಿದ್ದ 'ಫೈರ್' (FIRE) ಚಿತ್ರದ ಮೇಲೆ ಇದೇ ಸಂಘ ಪರಿವಾರದ ಹಾಗೂ ಶಿವಸೇನೆಯ ಕಾರ್ಯಕರ್ತರು, ಚಿತ್ರ ಬಿಡುಗಡೆಯ ನಂತರ ಸಲಿಂಗ ಕಾಮ ಹಾಗೂ ಚಿತ್ರದ ಪಾತ್ರಗಳು 'ಸೀತಾ' ಹಾಗೂ 'ರಾಧಾ' ಎಂಬ ಹೆಸರುಗಳನ್ನು ಹೊಂದಿರುವುದು, ಹಿಂದೂ ಸಂಸ್ಕೃತಿಗೆ ಅವಮಾನ ಮಾಡಿದಂತೆ ಎಂದು ದಾಳಿ ಮಾಡಿದ್ದರು. ಅನಂತರ ಇದೇ ನಿರ್ದೇಶಕರ 'ಅರ್ಥ್'(EARTH) ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಈ ಚಿತ್ರ ಮುಸ್ಲಿಂರ ಪರ ವಹಿಸಿ ಹಿಂದೂ ಧರ್ಮಕ್ಕೆ ಅವಹೇಳನಕಾರಿಯಾಗಿದೆ ಎಂದು ದಾಳಿ ಮಾಡಿದ್ದರು. ಈಗ ಜನವರಿ 30 ರಂದು ವಾರಣಾಸಿಯಲ್ಲಿ 'ವಾಟರ್'(WATER) ಚಿತ್ರದ ಚಿತ್ರೀಕರಣ ಪ್ರಾರಂಭವಾಗುವ ಮುನ್ನವೇ 'ಪವಿತ್ರ ಗಂಗಾ ಜಲವನ್ನು - ನೀರೆಂದು ಕರೆಯುತ್ತಿದ್ದಾಳೆ ದೀಪಾ ಮೆಹ್ತಾ", "ಹಿಂದೂ ಧರ್ಮದ ಸಂಸ್ಕೃತಿಯ ಪ್ರತೀಕವಾದ ವಿಧವಾ ಜೀವನ ವಿಧಾನವನ್ನು ಚಿತ್ರೀಕರಿಸಿ, ಹಿಂದೂ ಸಂಸ್ಕೃತಿಗೆ ಅಪಚಾರವೆಸಗುತ್ತಿದ್ದಾಳೆ ರಂಡಿ ದೀಪಾ ಮೆಹ್ತಾ", "ಈ ಚಿತ್ರ ಹಿಂದೂ ಧರ್ಮದ ವಿರುದ್ಧಕ್ರೈಸ್ತರ ಪಿತೂರಿ" ಎಂದೆಲ್ಲಾ ಹೇಳಿ ಅದರ ಮೇಲೆ ದಾಳಿ ಮಾಡಿ ಸೆಟ್‌ನ್ನು ಧ್ವಂಸಗೊಳಿಸಿ, ಅದರ ನಿರ್ಮಾಣಕ್ಕೆಂದು ನಿರ್ಮಾಪಕರಾದ ಅಜಯ್ ವೀರಮಣಿ ತೊಡಗಿಸಿದ್ದ 60,000 ಡಾಲರ್‌ಗಳನ್ನು ಗಂಗೆ ಪಾಲು ಮಾಡಿದ್ದಾರೆ.

ಇಷ್ಟೆಲ್ಲಾ ಸಂಘ ಪರಿವಾರದ ಗೂಂಡಾಗಿರಿಗೆ ಬಲಿಯಾಗಿರುವ ಈ ಚಿತ್ರದ ಚಿತ್ರಕಥೆಯನ್ನು ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆ, ಕೇಂದ್ರ ಸೆನ್ಸಾರ್ ಮಂಡಳಿ ಪರಿಶೀಲಿಸಿದ ನಂತರವೇ ಜನವರಿ 30 ರಿಂದ ಏಪ್ರಿಲ್ 13 ವರೆಗೆ 'ವಾಟರ್' ಚಿತ್ರದ ಚಿತ್ರೀಕರಣವನ್ನು ವಾರಣಾಸಿಯ ಗಂಗಾ ನದಿಯ ತೀರದಲ್ಲಿ ನಡೆಸಲು ಅನುಮತಿ ನೀಡಲಾಗಿದ್ದು, ಅದರ ಭಾಗವಾಗಿಯೇ ಕಾನೂನಾತ್ಮಕವಾಗಿ ಉತ್ತರ ಪ್ರದೇಶ ರಾಜ್ಯ ಸರ್ಕಾರವು ಸಹಾ ಅನುಮತಿ ನೀಡಿತ್ತು. ಈ ಎರಡು ಸರ್ಕಾರಗಳಲ್ಲಿ ನೇತೃತ್ವ ನೀಡುತ್ತಿರುವ ಬಿಜೆಪಿ-ಸಂಘ ಪರಿವಾರದ ಜನರೇ ಕಾಶಿಯ ಬೀದಿಗಳಲ್ಲಿ ರಂಪಾಟ ಮಾಡಿ, ಚಿತ್ರೀಕರಣವನ್ನು ನಿಲ್ಲಿಸಿದ್ದು, ಗೂಂಡಾಗಿರಿಯ ವಿರುದ್ಧ ನಮಗೆ ರಕ್ಷಣೆ ಕೊಡಿ, ಸಂವಿಧಾನದತ್ತವಾಗಿ ಪ್ರತಿಯೊಬ್ಬ ನಾಗರೀಕನಿಗೂ ಇರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ರಕ್ಷಿಸಿ, ಚಿತ್ರೀಕರಣಕ್ಕೆ ಅನುವು ಮಾಡಿಕೊಡಿ ಎಂದು ನಿರ್ದೇಶಕರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟ್‌ರನ್ನು ಕೇಳಿದರೆ, ರಾಜ್ಯ ಸರ್ಕಾರದಿಂದ ಸ್ಪಷ್ಟ ಸೂಚನೆ ಬರದೆ ನಾನೇನು ಮಾಡಲಾರೆ ಎಂದು ಜಿಲ್ಲಾಧಿಕಾರಿ ಹೇಳುತ್ತಿದ್ದಾರೆ. ರಾಜ್ಯ ಮುಖ್ಯಮಂತ್ರಿ ಗುಪ್ತಾರವರು, ಜನರ ಅಭಿಪ್ರಾಯ ಚಿತ್ರದ ವಿರುದ್ಧವಿದೆ, ಕಾನೂನು ಸುವ್ಯವಸ್ಥೆಯ ದೃಷ್ಟಿಯಿಂದ ಅನುಮತಿ ನೀಡಲಾರೆ ಎಂದು ಹೇಳಿದ್ದಾರೆ. ಕೇಂದ್ರದ ವಾರ್ತಾ ಮತ್ತು ಪ್ರಸಾರ ಇಲಾಖೆ ಸಚಿವರಾದ ಅರುಣ್ ಜೈಟ್ಲೆಯವರೊಂದಿಗೆ ಮಾತುಕತೆಯ ನಂತರ ಕೇಂದ್ರ ಸರ್ಕಾರ ಮತ್ತೊಮ್ಮೆ ಅನುಮತಿ ನೀಡಿದೆ. ಆದರೆ ಇದೇ ಬಿಜೆಪಿ ಸ್ಥಳೀಯ ಶಾಸಕರು, ನಾಯಕರು ಹಾಗೂ ವಿಶ್ವಹಿಂದೂ ಪರಿಷತ್‌ನ ರಾಷ್ಟ್ರ ಅಧ್ಯಕ್ಷರಾದ ಅಶೋಕ್ ಸಿಂಘಾಲ್ ಏನೇ ಆದರೂ ಚಿತ್ರೀಕರಣ ನಡೆಯಲು ನಾವು ಬಿಡುವುದಿಲ್ಲವೆಂದು ಬಹಿರಂಗ ಹೇಳಿಕೆ ನೀಡಿ ಕೇಂದ್ರ ಸರ್ಕಾರಕ್ಕೆ ಹಾಗೂ ಸಂವಿಧಾನಕ್ಕೆ ಸವಾಲೆಸೆದಿದ್ದಾರೆ.

ಈ ದಾಳಿಗೆ ನಾಯಕತ್ವ ನೀಡಿದ್ದ ಬಿಜೆಪಿಯ ರಾಜ್ಯ ಉಪಾಧ್ಯಕ್ಷರು ಹಾಗೂ ಸ್ಥಳೀಯ ಶಾಸಕರಾದ ಎಸ್.ರಾಯಚೌಧರಿಯು ಹೇಳುವುದೇನೆಂದರೆ "ಯಾರು ವಾಟರ್ ಸಿನಿಮಾದ ಚಿತ್ರಕಥೆಯನ್ನು ನೋಡಿಲ್ಲ. ವಿವಾದಕ್ಕೊಳಗಾಗಿರುವುದು ಚಿತ್ರಕಥೆಯ ವಸ್ತು ವಿಷಯ. ನಾನು ಈ ಹೋರಾಟಕ್ಕೆ ಜನ ಹೇಳುತ್ತಿರುವ ಅಭಿಪ್ರಾಯದ ಆಧಾರದಲ್ಲಿ ನಾಯಕತ್ವ ನೀಡುತ್ತಿದ್ದೇನೆ" ಎಂಬುದಾಗಿದೆ. ಇದೇ ಅಭಿಪ್ರಾಯವನ್ನು ಈ ದಾಳಿಗೆ ನಾಯಕತ್ವ ನೀಡಿದ ಬಿಜೆಪಿಯ ರಾಜ್ಯ ಖಜಾಂಚಿ ಅಶೋಕ್ ಧವನ್ ಹಾಗೂ ಬಿಜೆಪಿ ಮಹಿಳಾ ಮೋರ್ಚಾದ ಅಖಿಲ ಭಾರತ ಕಾರ್ಯದರ್ಶಿಯಾದ ಜೋತ್ಸ್ನಾ ಶ್ರೀವಾತ್ಸವರೂ ಸಹಾ ವ್ಯಕ್ತಪಡಿಸಿದ್ದಾರೆ.

ವಾಸ್ತವಾಂಶದಲ್ಲಿ ದೀಪಾಮೆಹ್ತಾ ರಚಿಸಿರುವ ಇಂಗ್ಲೀಷ್ ಚಿತ್ರಕಥೆ ಆಧಾರಿತ ಅನುರಾಗ್ ಕಶ್ಯಪರವರು ಹಿಂದಿಗೆ ಭಾಷಾಂತರಿಸಿರುವ 'ವಾಟರ್' ಚಿತ್ರದ ಮೂಲ ಕಥಾವಸ್ತು 1930 ರ ದಶಕದಲ್ಲಿ ಕಾಶಿಯ ವಿಧವೆಯರು ಅನುಭವಿಸುತ್ತಿದ್ದ, ಈಗಲೂ ಕೆಲವೆಡೆ ಅನುಭವಿಸುತ್ತಿರುವ ಒಂಟಿತನ, ನರಕಯಾತನೆಯ ಸುತ್ತ ಹೆಣೆಯಲ್ಪಟ್ಟ ಕಥೆಯಾಗಿದೆ. ಒಂದೆಡೆ ಸ್ವಾತಂತ್ರ್ಯ ಹೋರಾಟ, ಇನ್ನೊಂದೆಡೆ ಸಮಾಜ ಸುಧಾರಣಾ ಚಳುವಳಿಗಳು ಬಲಗೊಳ್ಳುತ್ತಿದ್ದ ಹಾಗೂ ಬಾಲ ವಿವಾಹಗಳು ಕೂಡ ಅಷ್ಟೇ ವ್ಯಾಪಕವಾಗಿದ್ದ ಆ ಕಾಲದಲ್ಲಿ ಚಿಕ್ಕವಯಸ್ಸಿನಲ್ಲೇ ಪತಿಯನ್ನು ಕಳೆದುಕೊಂಡು ಬನಾರಸ್‌ನ ವಿಧವಾಶ್ರಮ ಸೇರಿದ ಯುವತಿಯ ಮೇಲೆ ಅತ್ಯಾಚಾರಕ್ಕೆ ನಡೆದ ಯತ್ನ ಹಾಗೂ ಆಕೆ ತನ್ನ ಶೀಲ ರಕ್ಷಿಸಿಕೊಳ್ಳಲು ನಡೆಸಿದ ಹೋರಾಟವನ್ನು ಒಳಗೊಂಡಿದೆ ಎಂದು ನಿರ್ದೇಶಕರು ಹೇಳುತ್ತಿದ್ದಾರೆ.

ಈ ಚಿತ್ರದ ನಟಿ 'ಫೈರ್' ಖ್ಯಾತಿಯ ನಂದಿತಾ ದಾಸ್ ತನ್ನನ್ನು ತಾನು 'ಮೀರಾ' ಎಂದು ಭಾವಿಸುವ ದೈವಭಕ್ತಿ-ಕೃಷ್ಣಭಕ್ತೆಯಾದರೆ ಇನ್ನೊಂದೆಡೆ 'ಗಾಂಧಿ ಭಕ್ತ'ನಾದ ಆದರ್ಶವಾದಿ ಅಕ್ಷಯ್ ಕುಮಾರ್ ಚಿತ್ರದ ನಟ. ಇದರೊಂದಿಗೆ ತನ್ನ ಪ್ರಬುದ್ಧ ಪಾತ್ರಗಳಿಂದ ಹೆಸರುವಾಸಿಯಾಗಿರುವ ಶಬಾನಾ ಅಜ್ಮಿ ಒಬ್ಬ ಬ್ರಾಹ್ಮಣ ವಿಧವೆಯ ಪಾತ್ರ ನಿರ್ವಹಿಸಲು ಸಿದ್ಧರಾಗಿದ್ದರು. ಹಾಗಾಗಿಯೇ ಚಿತ್ರೀಕರಣ ಪ್ರಾರಂಭದ ವೇಳೆಗೆ ನಂದಿತಾ ತನ್ನ ಕೇಶವನ್ನು ಒಂದು ಇಂಚು ಬಿಟ್ಟು ಮಿಕ್ಕದ್ದನ್ನು ಕತ್ತರಿಸಿಕೊಂಡಿದ್ದರೆ, ಶಬನಾರವರು ತಮ್ಮ ತಲೆಯನ್ನೇ ಇಡಿಯಾಗಿ ಬೋಳಿಸಿಕೊಂಡು ತಯಾರಾಗಿದ್ದರು. ಈ ಪ್ರಮುಖ ಪಾತ್ರಧಾರರೊಂದಿಗೆ ಈಗಲೂ ತಲೆ ಬೋಳಿಸಿಕೊಂಡೆ ವಾರಣಾಸಿಯಲ್ಲೆ ನರಕಯಾತನೆಯನ್ನು ಅನುಭವಿಸುತ್ತಿರುವ ನೂರಾರು ಮಂದಿ ವಿಧವೆಯರೂ ಸಹಾ ಸಹನಟಿಯರಾಗಿ ನಟಿಸಲು ಒಪ್ಪಿ ಕರಾರಿಗೂ ಸಹಿ ಹಾಕಿದ್ದರಂತೆ.

ದೀಪಾರ ಪ್ರಕಾರ ಈ ಚಿತ್ರದ ನಿಜವಾದ ಹಿರೋ ಮಹಾತ್ಮಗಾಂಧಿ. ಚಿತ್ರಪೂರ್ಣವಾಗಿ ಸ್ವತಂತ್ರ-ಸಮಾನತೆ-ವಿಮೋಚನೆ ಹಾಗೂ ಪ್ರಗತಿಯ ಪರತೆ ಮೇಲೆ ಆಧಾರಿತವಾಗಿದೆ. ನೀರು-ವಾಟರ್ ಮಹಿಳೆಯರ ಘನತೆಯ ಪ್ರತೀಕ ಹಾಗೂ ಸಾಂಕೇತಿಕ ಆಚರಣೆಯಾಗಿದೆ, ಹಾಗಾಗಿ ಚಿತ್ರದ ಹೆಸರು 'ವಾಟರ್' ಎಂದು, ಗಂಗಾ ನದಿಯು ಹೆಣ್ಣಿಗೆ ಹೋಲಿಸ್ಪಡುವ ಕಾರಣದಿಂದಾಗಿ, ಗಂಗೆಯ ದಡದಲ್ಲಿ ಈ ಚಿತ್ರೀಕರಣವನ್ನು ನಡೆಸಲು ಉದ್ದೇಶಿಸಿ ಅನುಮತಿ ಪಡೆದಿದ್ದೇನೆ ಎನ್ನುತ್ತಾರೆ. ಅವರು ಹೇಳುವ ಮತ್ತೊಂದು ವಿಷಯವೆಂದರೆ ಉತ್ತರ ಪ್ರದೇಶದ ಚಲನಚಿತ್ರ ಆಯೋಗದ ಅಧಿಕಾರಿಗಳೊಬ್ಬರು, ಉತ್ತರ ಪ್ರದೇಶ ರಾಜ್ಯದಲ್ಲಿ ಸಿನಿಮಾದ ವಿತರಣಾ(ಹಂಚಿಕೆ) ಹಕ್ಕನ್ನು ಕೇಳಿದರು, ನಾನದಕ್ಕೆ ಒಪ್ಪಲಿಲ್ಲ ಅವರೇ ಪರೋಕ್ಷವಾಗಿ ಈ ಎಲ್ಲಾ ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂಬುದಾಗಿದೆ.

ಸ್ಟಾರ್‌ನ್ಯೂಸ್‌ನಲ್ಲಿ ಜನವರಿ 30 ರ ರಾತ್ರಿ ದೀಪಾ ಮೆಹ್ತಾ ಮತ್ತು ಬಿಜೆಪಿಯ ರಾಜ್ಯ ಸಭಾ ಸದಸ್ಯರು ಹಾಗೂ ರಾಷ್ಟ್ರೀಯ ಮುಖಂಡರಾದ ಕೆ.ಆರ್.ಮಲ್ಕಾನಿಯವರನ್ನು ಮುಖಾಮುಖಿಯಾಗಿ ಸಂದರ್ಶಿಸಿದಾಗ ದೇಶದ ಸಂವಿಧಾನವನ್ನು ಎತ್ತಿ ಹಿಡಿದು, ಕಾನೂನನ್ನು ರಕ್ಷಿಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಭಾಗವಾಗಿರುವ ನಿಮ್ಮ ಕರ್ತವ್ಯವಲ್ಲವೇ, ಚಿತ್ರಕಥೆಯನ್ನೆ ಓದದೆ, ನಿಮ್ಮ ಪಕ್ಷದ ಮುಖಂಡರು ಹಾಗೂ ಶಾಸಕರುಗಳು, ಸರ್ಕಾರ ಅನುಮತಿ ಕೊಟ್ಟ ಮೇಲೂ ಈ ರೀತಿ ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗಿ, ಮಾನಹಾನಿ ಮಾಡುವಂತ ಕರಪತ್ರಗಳನ್ನು ಹಾಕಿ, ಜನರನ್ನು ಪ್ರಚೋದಿಸುವುದು ಸರಿಯೇ? ಎಂದು ಪ್ರಶ್ನಿಸಿದಾಗ. ಅವರು ಕೊಡುವ ಉತ್ತರ, "ನಾನು ಸಹಾ ಚಿತ್ರಕಥೆ ಓದಿಲ್ಲ, 30 ರಂದು ವಾರಣಾಸಿಯಲ್ಲಿ ನಡೆದಿರುವುದು ಸಾರ್ವಜನಿಕರ ಹೋರಾಟ, ಸಾರ್ವಜನಿಕರ ಬಾವನೆ ಹಾಗೆ ಇದೆ" ಎಂದು ಹೇಳುತ್ತಾ 'ಅದು ಸಾರ್ವಜನಿಕರ ಪ್ರತಿಕ್ರಿಯೆ' ಎಂಬ ಹಣೆ ಪಟ್ಟಿ ಕಟ್ಟಿ ಕುಳಿತರು. ಭಾರತದ ಪ್ರತಿಯೊಬ್ಬ ಪ್ರಜ್ಞಾವಂತ ನಾಗರೀಕರು, ಆಡಳಿತ ಪಕ್ಷದ ಮುಖಂಡರು ಹಾಗೂ ರಾಜ್ಯಸಭಾ ಸದಸ್ಯರೊಬ್ಬರು ಇಂತಹ ಹೇಳಿಕೆ ನೀಡುವುದು ಸಂಸ್ಕೃತಿ ಹೆಸರಿನಲ್ಲಿ ಗೂಂಡಾಗಿರಿ-ಪುಂಡಾಟಿಕೆ ನಡೆಸುವವರಿಗೆ ಕುಮ್ಮಕ್ಕು ನೀಡುವಂತಾ ಹೇಳಿಕೆಯಲ್ಲವೇ ಎಂದು ಚಿಂತಿಸಬೇಕಿದೆ.

ಹಿಂದೂ ಧರ್ಮವನ್ನೇ ಗುತ್ತಿಗೆ ಪಡೆದವರಂತೆ, ಸಂಸ್ಕೃತಿಯ ಹೆಸರಿನಲ್ಲಿ ಈ ಹಿಂದೆ ಎಂ.ಎಫ್. ಹುಸೇನರ 'ಸರಸ್ವತಿ' ತೈಲಚಿತ್ರ, ಆನೇಕಲ್‌ನಲ್ಲಿ ಸಮುದಾಯದ ಕಲಾವಿದರ ಮೇಲೆ ಹಲ್ಲೆ, ಲಕ್ನೋನಲ್ಲಿ ಸಹಮತ್ ತಂಡದ ಮೇಲೆ ದಾಳಿ, ದಿಲೀಪ್ ಕುಮಾರ್ ಮನೆ ಮೇಲೆ ದಾಳಿ, ಫೈರ್, ಅರ್ಥ್ ಚಿತ್ರಗಳ ಮೇಲೆ ದಾಳಿ ನಡೆಸಿದ ಸಂಘ ಪರಿವಾರದ ಗೂಂಡಾಗಿರಿಗೆ ದೀಪಾ ಮೆಹ್ತಾರವರ ಪ್ರತಿಕ್ರಿಯೆ, "ಸರ್ಕಾರದಿಂದ ಅಗತ್ಯವಿರುವ ಎಲ್ಲಾ ಅನುಮತಿಗಳನ್ನು ನಾನು ಈಗಾಗಲೇ ಪಡೆದಿರುವಾಗ, ನಾನೇಕ ನನ್ನ ಚಿತ್ರಕಥೆಯನ್ನು ಎಲ್ಲರಿಗೂ ಹೇಳಿ ನನ್ನ ಚಿತ್ರಕಥೆಯ ಪರವಾಗಿ ವಾದಿಸಲಿ. ನನ್ನ ಚಿತ್ರದ ವಿರುದ್ಧ ಪ್ರತಿಭಟಿಸುವ ಆ ಜನ ನನ್ನನ್ನು ನಂಬದಿದ್ದರೆ ಹೋಗಲಿ, ಅವರದೆ ಆದ ಸರ್ಕಾರವನ್ನಾದರು ಅವರು ನಂಬಲಿ' ಎನ್ನುವುದು ಸರಿಯಲ್ಲವೇ?

ಮಹಾತ್ಮ ಗಾಂಧಿಯನ್ನು ಚಿತ್ರದ ಪ್ರಮುಖ ನಾಯಕರನ್ನಾಗಿ ಬಿಂಬಿಸುವ ಸಾಮಾಜಿಕ ಕಳಕಳಿಯ, ಪುರೋಹಿತಶಾಹಿಯ ವಿರುದ್ಧದ ಪ್ರಗತಿಪರ ಚಲನಚಿತ್ರದ ಚಿತ್ರೀಕರಣವನ್ನು ಗಾಂದೀಜಿಯವರು ಆರ್‌ಎಸ್‌ಎಸ್‌ನ ನಾಥೂರಾಮ್ ಗೋಡ್ಸೆ ಗುಂಡಿಗೆ ಬಲಿಯಾದ ದಿನದಂದೆ (ಜನವರಿ 30) ಪ್ರಾರಂಭಿಸಲು ಮುಂದಾದ, ಹಿಂದಿ ಚಲನಚಿತ್ರ ರಂಗಕ್ಕೆ ಕಲಾತ್ಮಕ ಸೃಜನಶೀಲ ಸಾಮಾಜಿಕ ಬದ್ಧತೆಯ ಚಿತ್ರಗಳನ್ನು ನೀಡುವ ಮೂಲಕ ಖ್ಯಾತಿ ಪಡೆದಿರುವ ದೀಪಾ ಮೆಹ್ತಾರವರ ವಾಟರ್ ಚಲನಚಿತ್ರದ ಚಿತ್ರೀಕರಣದ ಮೇಲಿನ ದಾಳಿಯ ಹಿಂದಿನ ಪ್ರತಿಗಾಮಿ ಮನಸ್ಸು ಹಾಗೂ ಶಕ್ತಿಗಳನ್ನು ಪ್ರತಿಯೊಬ್ಬ ಪ್ರಜ್ಞಾವಂತರು ಅರಿಯಬೇಕಿದೆ.

1948 ರ ಜನವರಿ 30 ರಂದು ನಾಥುರಾಮನ ಗುಂಡಿಗೆ ಬಲಿಯಾದ ಮಹಾತ್ಮ ಗಾಂಧಿಯವರು 'ಹೇರಾಮ್' ಎಂದು ಸಾವನ್ನಪ್ಪಿದರೆ, 2000 ದ ಜನವರಿ 30 ರಂದು ಸಂಘ ಪರಿವಾರದವರು 'ಜೈ ಶ್ರೀರಾಮ್' ಎನ್ನುತ್ತಾ ಕಾಶಿಯಲ್ಲಿ 'ವಾಟರ್' ಚಿತ್ರೀಕರಣ ತಂಡದ ಮೇಲೆ ದಾಳಿ ಮಾಡಿರುವ ಕೃತ್ಯ ಫ್ಯಾಸಿಸ್ಟ್ ಪ್ರವೃತ್ತಿಯ ಬಲವರ್ಧನೆಯ ಸಂಕೇತವಲ್ಲವೇ? ಇಂತಹ ಫ್ಯಾಸಿಸ್ಟ್ ಕೃತ್ಯವನ್ನು ಎಲ್ಲಾ ಪ್ರಜ್ಞಾವಂತರು ಖಂಡಿಸಿ-ಪ್ರತಿಭಟಿಸದಿದ್ದಲ್ಲಿ, ಸೃಜನಶೀಲತೆಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಪರಿಕಲ್ಪನೆಗಳು ಸರಿಪಡಿಸಲಾರದಂತಹ ದುರಂತಕ್ಕೊಳಪಡಲಿವೆ. ○



ಬೆಂಗಳೂರಿನಲ್ಲಿ 'ವಾಟರ್' ಚಿತ್ರತಂಡದ ಮೇಲಿನ ಧಾಳಿಯನ್ನು ವಿರೋಧಿಸಿ 'ವಿವೇಕ'ದಿಂದ ಪ್ರತಿಭಟನೆ

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ